Mr. SPEAKER.—Scheduled Caste Members, whether they belong to the Opposition or the Ruling Party, they belong to Scheduled Castes. If you want me to announce them separately, I have no objection.

Now, we shall rise for tea. Hon'ble Members can think about the programme of business and give me a final word.

The House adjourned at Three Minutes past Ten of the Clock and reassembled at Thirty Minutes past Ten of the Clock.

[MR. SPEAKER in the Chair]

Business of the House.

Mr. SPEAKER.—Before we start discussion, I would like to announce that there will be certain change in the mode of discussion. A number of demands including Demands Nos. 2, 19, 32, 26 and 28 were put down in the Notice Paper. But the discussion will take place only in respect of the other Demands except 2, 19, 32, 26 and 28.

Sri M. P. PATIL.—Just as the Members of the Opposition have got some engagements, we have also got some engagements. It is better to announce the time of meeting tomorrow also.

Mr. SPEAKER.—Before we rise, I will announce. It has been agreed to by the Leader of the House and the Treasury Benches that on Monday we are meeting at 12 noon and the guillotine will take place at 4 P.M. According to the Rules, the guillotine has to take place two hours prior to the time fixed for the end of the session. We will the end session at 6 P.M. So, at 4 O'clock, guillotine will take place for half an hour. It won't take much time. Then we will rise for tea. At 5 O'clock again we will meet and discuss legislative business up to 7 P.M.

Sri M. P. PATIL.—Are we sure legislation will not be taken up today?

Mr. SPEAKER.—We are not meeting today in the evening. Possibly, I think we will take up on Monday, after the guillotine of Demands, some of the Bills which will go to the Select Committee.

Sri M. P. PATIL.—Which Demands will be taken up today?

Mr. SPEAKER.—We will take up Demands Nos. 29, 50, 51, 53, 54, 42, 46, 47, 10 and 40.

BUDGET FOR 1957-58—DEMANDS FOR GRANTS

Demand No. 29—Civil Works

50. *Civil Works.*

Mr. SPEAKER.—Motion moved:

"That a sum not exceeding Rs. 8,46,62,600 be granted to the Government to defray the charges which will come in course of payment during the year ending 31st day of March 1958, in respect of 'Civil Works'."

Demand No. 50.—Appropriation to Irrigation and Power Development Fund.

80—*B. Appropriation to Irrigation and Power Development Fund.*

Mr. SPEAKER.—Motion moved:

"That a sum not exceeding Rs. 40,00,000 be granted to the Government to defray the charges that will come in course of payment during the year ending 31st day of March 1958, in respect of 'Appropriation to Irrigation and Power Development Fund'."

Demand No. 51.—Capital Outlay on Civil Works.

81—*Capital Account of Civil Works Outside the Revenue Account.*

Mr. SPEAKER.—Motion moved:

"That a sum not exceeding Rs. 3,32,80,300 be granted to the Government to defray the charges which will come in course of payment during the year ending 31st day of March 1958, in respect of 'Capital Account of Civil Works outside the Revenue Account'."

Demand No. 53.—Capital Account of Other State Works Outside the Revenue Account.

82—*Capital Account of Other State Works outside the Revenue Account.*

Mr. SPEAKER.—Motion moved :

" That a sum not exceeding Rs. 52,08, 000 be granted to the Government to defray the charges which will come in course of payment during the year ending 31st day of March 1958, in respect of 'Capital Account of other State Works outside the Revenue Account.' "

Demand No. 54—Miscellaneous Capital Account.

82-*B. Capital Outlay on Road Transport Schemes.*

Mr. SPEAKER.—Motion moved :

" That a sum not exceeding Rs. 59, 85, 000 be granted to the Government to defray the charges which will come in course of payment during the year ending 31st day of March 1958, in respect of 'Capital Outlay on Road Transport Schemes.' "

Demand No. 42—Working Expenses irrigation—Works—Commercial.

XVII I.N.E. & D. Works (Commercial) Working Expenses.

Mr. SPEAKER.—Motion moved :

" That a sum not exceeding Rs. 62, 34, 000 be granted to the Government to defray the charges which will come in course of payment during the year ending 31st day of March 1958, in respect of 'I.N.E. & D. Works (Commercial)—Working Expenses'."

Demand No. 46—Irrigation (Commercial)

68—*Construction of Irrigation, Navigation, Embankment and Drainage Works (Commercial).*

Mr. SPEAKER.—Motion moved :

" That a sum not exceeding Rs. 7,69,05,700 be granted to the Government to defray the charges which will come in course of payment during the year ending 31st day of March 1958, in respect of 'Construction of Irrigation, Navigation, Embankment and Drainage Works (Commercial)'."

Demand No. 47—Irrigation (Non-Commercial)

68—*A. Construction of I.N.E. and D. Works (Non-Commercial).*

Mr. SPEAKER.—Motion moved :

" That a sum not exceeding Rs. 90, 24, 000 be granted to the Government to defray the charges which will come in course of payment during the year ending 31st day of March 1958, in respect of 'Construction of I.N.E. and D. Works—Non-Commercial'."

Demand No. 10—Irrigation.

18—*Other Revenue Expenditure financed from Ordinary Revenues.*

Mr. SPEAKER.—Motion moved :

" That a sum not exceeding Rs. 71,13,000 be granted to the Government to defray the charges which will come in course of payment during the year ending 31st day of March 1958, in respect of 'Other Revenue Expenditure financed from Ordinary Revenues'."

Demand No. 40—Community Development.

63—*B. Community Development Projects—National Extension Service and Local Development Works.*

Mr. SPEAKER.—Motion moved :

" That a sum not exceeding Rs. 1,89,81,000 be granted to the Government to defray the charges which will come in course of payment during the year ending 31st day of March 1958, in respect of 'Community Development Projects, National Extension Service and Local Development Works'."

ಶ್ರೀ ಡಿ. ಅಬ್ದುಲ್‌ರಷೀದ್ (ಕೋಲಾರ).—ಮಾನ್ಯ ಸಭಾಧ್ಯಕ್ಷರೇ ಈ ದಿವಸ ಚರ್ಚೆಯಲ್ಲಿರುವ ಡಿಮ್ಯಾಂಡು ಗಳನ್ನು ಒಪ್ಪಿಕೊಂಡು ಕೆಲವು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

(ಶ್ರೀ ಡಿ. ಅಬ್ದುಲ್ ರಷೀದ್)

ಮೈದಾನ ಪ್ರದೇಶಗಳಲ್ಲಿ ಎಂದರೆ ಮುಖ್ಯವಾಗಿ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸಣ್ಣ ಸಣ್ಣ ಕೆರೆಗಳು ಬೇಕಾದಷ್ಟು ಇರುತ್ತವೆ. ಈ ಕೆರೆಗಳಲ್ಲಿ ವರ್ಷಾಂತರಗಳಿಂದ ಮಣ್ಣು ತುಂಬಿಕೊಂಡು ಒಂದೆರಡು ಮಳೆ ಬಂದರೆ ಆ ಕೆರೆಗಳೆಲ್ಲಾ ತುಂಬಿಕೊಂಡು ಕೋಡಿ ಹರಿದುಹೋಗುತ್ತದೆ. ಆ ರೀತಿ ಕೆರೆಗಳು ತುಂಬಿಕೊಂಡ ಭರವಸೆ ಮೇಲೆ ರೈತರು ಬೆಳೆ ಇಡುತ್ತಾರೆ. ಒಂದೆರಡು ತಿಂಗಳು ಮಳೆ ಇಲ್ಲದೆ ಹೋದರೆ ಕೆರೆಗಳು ಬತ್ತಿಹೋಗಿ ರೈತರಿಗೆ ಬಹಳ ತೊಂದರೆಯಾಗುತ್ತದೆ. ಮತ್ತು ಅವರು ಬಹಳ ತೊಂದರೆ ಪಡುತ್ತಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ತಕ್ಕ ಗಮನವನ್ನು ಕೊಟ್ಟು ಕೆರೆಗಳನ್ನು ಡಿಸಿಲ್ಟ್ ಮಾಡಿ ಅವುಗಳಲ್ಲಿ ನೀರು ನಿಂತು ಜಮೀನಿಗೆ ನೀರಿನ ಸೌಕರ್ಯ ದೊರೆತು ಬೆಳೆಗಳು ಉತ್ತಮ ರೀತಿಯಲ್ಲಿ ಆಗುವ ಹಾಗೆ ಏರ್ಪಾಡು ಮಾಡುವುದು ಅಗತ್ಯ. ಸರ್ಕಾರದವರು ಯಾವ ಕೆರೆಗಳಲ್ಲಿ ಈ ತರಹ ಮಣ್ಣು ತುಂಬಿ ಕೊಂಡಿದೆ ಎಂದು ತಕ್ಷಣ ಸರ್ವೆ ಮಾಡಿಸಿ, ಆ ಕೆರೆಗಳಲ್ಲಿ ಮಣ್ಣನ್ನು ಡಿಸಿಲ್ಟ್ ಮಾಡಿಸಬೇಕು. ಮತ್ತು ಕೆರೆ, ಕಟ್ಟೆ ಮತ್ತು ಕೋಡಿಯನ್ನು ಎತ್ತರಿಸುವಂತೆ ಮಾಡಬೇಕು.

ಇನ್ನು ರೋಡುಗಳ ವಿಚಾರದಲ್ಲಿ ಹೇಳುವುದಾದರೆ ಅವು ಬಹಳ ಹೀನಸ್ಥಿತಿಯಲ್ಲಿವೆ. ಡಿಸ್ಟ್ರಿಕ್ಟ್ ಬೋರ್ಡುಗಳು ಬಹಳ ದಿವಸಗಳಿಂದ ಕೆಲಸಮಾಡದೆ ರೋಡುಗಳ ಕಡೆ ಗಮನ ಕೊಡದೆ ಇದ್ದುದರಿಂದ ಅವು ಬಹಳ ಹೀನ ಸ್ಥಿತಿಯಲ್ಲಿವೆ. ಡಿಸ್ಟ್ರಿಕ್ಟ್ ಬೋರ್ಡುಗಳು ಯಾವಯಾವ ರೋಡುಗಳನ್ನು ರಿಪೇರಿ ಮಾಡಬೇಕೆಂದು ಸರ್ಕಾರಕ್ಕೆ ರಿಪೋರ್ಟ್ ಮಾಡಿರುತ್ತಾರೋ ಅಂಥ ರಸ್ತೆಗಳ ರಿಪೇರಿಮಾಡುವ ಏರ್ಪಾಡುಮಾಡಬೇಕು. ಕೆಲವು ಜೀವನದಿಗಳ ಮೇಲೆ ಹಾಕಿರುವ ಕಾಸ್‌ವೇಗಳಲ್ಲಿ ಸಂಚಾರ ಮಾಡುವುದಕ್ಕೆ ಬಹಳ ತೊಂದರೆಯಾಗಿರುತ್ತದೆ. ಮಳೆಗಾಲದಲ್ಲಿ ರೈತರು ಮಾರ್ಕೆಟ್ಟುಗಳಿಗೆ, ಸಂತೆಗಳಿಗೆ ಹೋಗಲು ಅವಕಾಶವಿರುವುದಿಲ್ಲ. ಬಹಳ ತೊಂದರೆ ಪಡುತ್ತಾರೆ. ನದಿ ಮತ್ತು ಹಳ್ಳಗಳು ಕಟ್ಟಿಕೊಂಡು ಎರಡು ಮೂರು ದಿವಸಗಳು ಸಂಚಾರ ಮಾಡಲು ತೊಂದರೆಯಾಗಿರುವುದರಿಂದ ಕಾಸ್‌ವೇಗಳನ್ನು ತೆಗೆದು ಹಾಕಿ ಸೇತುವೆಗಳನ್ನು ಕಟ್ಟಿಸಬೇಕೆಂದು ನಾನು ಮನವಿ ಮಾಡುತ್ತೇನೆ.

ರೋಡ್ ಟ್ರಾನ್ಸ್‌ಪೋರ್ಟುಗಳ ವಿಚಾರದಲ್ಲಿ ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡಲಿಚ್ಛಿಸುತ್ತೇನೆ. ಮನಾಪಲಿಮಾಡಿಕೊಂಡಿರುವ ರೋಡುಗಳ ಮೇಲೆ ಓಡಾಡುವ ಬಸ್ಸುಗಳಲ್ಲಿ ಜನಗಳಿಗೆ ಪ್ರಯಾಣದ ಸೌಕರ್ಯಗಳಿಲ್ಲ. ಸರಿಯಾದ ವೇಳೆಗೆ ಬಸ್ ಸಿಕ್ಕುವುದಿಲ್ಲ, ಸೀಟುಗಳು ಸಿಕ್ಕುವುದಿಲ್ಲ. ಮನಾಪಲಿ ರೋಡುಗಳಲ್ಲಿ ಬಸ್ಸುಗಳನ್ನು ಜಾಸ್ತಿ ಮಾಡಬೇಕು. ಅಲ್ಲದೆ ಬಹಳ ಜನ ರೈತರು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿರುವ ಆಫೀಸುಗಳಿಗೆ ಕೋರ್ಟುಗಳಿಗೆ ಬರುತ್ತಾರೆ. ಅವರೆ ಇಂತಹ ಮನಾಪಲಿ ರೋಡುಗಳಲ್ಲಿ ಓಡಾಡುವ ಬಸ್ಸುಗಳಲ್ಲಿ ಸೀಟು ಸಿಕ್ಕುವುದು ಕಷ್ಟವಾಗಿ ಅವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಆಫೀಸುಗಳು ಇರುವ ಕಾಲದಲ್ಲಿ ಸ್ಪೆಷಲ್ ಬಸ್ಸುಗಳನ್ನು ಓಡಿಸಬೇಕು. ಬಸ್ಸುಗಳನ್ನು ಸಿಕ್ಕಾಪಟ್ಟೆ ರೋಡುಗಳಲ್ಲಿ ನಿಲ್ಲಿಸಬಾರದು. ಮುಖ್ಯವಾಗಿ ಹಳ್ಳಿಗಳ ಎದುರಿನಲ್ಲಿ ಅಪ್ರೋಚ್ ರೋಡುಗಳ ಹತ್ತಿರ ಬಸ್‌ಸ್ಟಾಪುಗಳನ್ನು ಹಾಕಿಸಬೇಕು. ಅಲ್ಲಿ ಒಂದು ಸ್ಟೇಜ್ ಪಾಯಿಂಟ್ ಎಂದು ಮಾಡಿ ಅಂಥ ಹಳ್ಳಿಗಳ ಎದುರಿನಲ್ಲಿ ಮಾತ್ರ ನಿಲ್ಲಿಸುವುದು ಸೂಕ್ತ. ಸಿಕ್ಕಾಪಟ್ಟೆ ಅಲ್ಲಲ್ಲಿ ನಿಲ್ಲಿಸುವುದು ಚೆನ್ನಾಗಿಲ್ಲ. ಬೆಂಗಳೂರಿನಿಂದ ಹೊರಡುವ ಬಸ್ಸುಗಳಲ್ಲಿ ಸುತ್ತಲು 20 ಮೈಲಿ ರೋಡುಗಳೊಳಗೆ ಚೆಕಿಂಗ್ ಇಲ್ಲ. ಬರುವ ಬಸ್ಸುಗಳಲ್ಲಿಯೂ ಚೆಕಿಂಗ್ ಇಲ್ಲ. ಹೀಗೆ ಚೆಕಿಂಗ್ ಇಲ್ಲದೆ ಇರುವುದರಿಂದ ಸರ್ಕಾರಕ್ಕೆ ಬರತಕ್ಕ ಹಣದಲ್ಲಿ ಲೋಪವಾಗುತ್ತದೆಯೆಂದು ಕಾಣುತ್ತದೆ. ಒಂದು ರೂಟಿನಲ್ಲಿ ಹೋಗುವ ಬಸ್ಸುಗಳಲ್ಲಿ ಪ್ರತಿ ಒಂದು ದಿವಸ ಒಂದು ಲೈನಿನಲ್ಲಿ ಒಂದು ಕಡೆ ಸರ್‌ಪ್ರೈಜ್ ಆಗಿ ಚೆಕಿಂಗ್ ಮಾಡಬೇಕು. ಚೆಕಿಂಗ್ ಇನ್‌ಸ್ಪೆಕ್ಟರು ಬಸ್ಸಿನಲ್ಲಿ ಹೋಗಿ ಚೆಕ್‌ಮಾಡಿದರೆ ಡ್ರೈವರು ಎದುರುಗಡೆ ಬರುವ ಬಸ್ಸಿಗೆ ಎಚ್ಚರಿಕೆ ಕೊಡುತ್ತಾನೆ. ಆಗ ಕಂಡಕ್ಟರುಗಳು ಟಿಕೆಟ್ಟುಗಳನ್ನು ಬರೆದು ಸರಿಪಡಿಸಿಕೊಳ್ಳುತ್ತಾರೆ. ಅದಕ್ಕೋಸ್ಕರ ಸರ್‌ಪ್ರೈಜ್ ಆಗಿ ಮಧ್ಯದಾರಿಯಲ್ಲಿ ಎಲ್ಲಿಯಾದರೂ ನಿಂತುಕೊಂಡು ಚೆಕ್‌ಮಾಡುವುದು ಉತ್ತಮ. ಬಹು ದೂರ ಪ್ರಯಾಣ ಮಾಡುವುದಕ್ಕೆ standing accomodation ಕೊಡುವುದರಿಂದ ಬಹಳ ತೊಂದರೆಯಾಗುತ್ತದೆ. ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸಿನಲ್ಲಿ ಕಂಡಕ್ಟರುಗಳು ಡ್ರೈವರುಗಳು ಪ್ರಯಾಣಿಕರ ವಿಷಯದಲ್ಲಿ ಕರ್ಟಸಿ ತೋರಿಸಬೇಕು. ರೈತರಲ್ಲಿ ಬಡವರು, ಮತ್ತು ದೊಡ್ಡವರು ಎನ್ನುವ ತಾರತಮ್ಯವನ್ನು ಇಡದೆ ಎಲ್ಲರಲ್ಲಿಯೂ ವಿನಯದಿಂದ ವರ್ತಿಸಬೇಕು. ಅವರು ಈ ರೀತಿಯಾಗಿ ವರ್ತಿಸುವಂತೆ ಸಂಬಂಧಪಟ್ಟ ಮೇಲಧಿಕಾರಿಗಳು ತಕ್ಕ ಸೂಚನೆಗಳನ್ನು ಕೊಡಬೇಕು. ಅಲ್ಲದೆ ರೈತರಿಗೆ ಪ್ರಯಾಣದ ಕಾಲದಲ್ಲಿ ಯಾವ ಯಾವ, ತರಹ ಕಷ್ಟಗಳಾಗುತ್ತವೆಯೋ ಆ ವಿಚಾರವಾಗಿ ಸೂಕ್ತ ಸಲಹೆಗಳನ್ನು ಕೊಡಲು ಸರಿಯಾದ ಅನುಭವಸ್ಥರಿಂದ ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಮೋಟಾರ್ ಟ್ರಾನ್ಸ್‌ಪೋರ್ಟ್ ವಿಚಾರ ಚೆನ್ನಾಗಿ ತಿಳಿದಿರುವವರನ್ನು ಒಳಗೊಂಡ ಒಂದು ಟ್ರಾಫಿಕ್ ಬೋರ್ಡ್ ಇನ್ನೂ ಮಾಡಿಲ್ಲ. ಅದನ್ನು ಮಾಡಿ ಇಲಾಖೆಗೆ ಸಲಹೆ ಕೊಡುವ ಹಾಗೆ ಸರ್ಕಾರದವರು ತಕ್ಕ ಕ್ರಮ ತೆಗೆದುಕೊಳ್ಳಬೇಕು. ಅದರಂತೆ ಜನಗಳಿಗೆ ನಮ್ಮ ಸರ್ಕಾರದವರು ಸೌಕರ್ಯಗಳನ್ನುಂಟುಮಾಡುತ್ತಾರೆಂದು ನಂಬಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಂಡಿಸಿರುವ ವ್ಯವಸಾಯದ ಡಿಮ್ಯಾಂಡ್ ಬಹಳ ಮುಖ್ಯವಾದುದು ಇವತ್ತಿನ ಡಿಮ್ಯಾಂಡುಗಳಲ್ಲಿ 50, ಸಿವಿಲ್ ವರ್ಕ್ಸ್ 68 (*a*) ನಾನ್ ಕಮರ್ಷಿಯಲ್ ವರ್ಕ್ಸ್ 81, ಕಮ್ಯೂನಿಕೇಷನ್ ಬಹಳ ಪ್ರಾಮುಖ್ಯ ಎಂದು ನಮ್ಮ ಸ್ನೇಹಿತರಲ್ಲೊಬ್ಬರು ಬಡ್ಜೆಟ್ಟಿನ ಮೇಲೆ ಮಾತನಾಡುತ್ತಾ ಈ ಇಲಾಖೆಯಲ್ಲಿ ಬಹಳ ಹಣ ಪೋಲಾಗುತ್ತದೆ, ಲಂಚರುಷವತ್ತು ಜಾಸ್ತಿಯಾಗುತ್ತಿದೆ ಎಂದು ಸೂಚನೆ ಮಾಡಿದರು. ಕೆಲವು ಕಡೆಗಳಲ್ಲಿ ಹೀಗಾಗಿರಬಹುದು ಎಂಬುದು ಒಪ್ಪತಕ್ಕ ವಿಷಯ. ಹೀಗೆ ಆಗುವುದಕ್ಕೆ ಕಾರಣವೇನು ಎಂಬುದಕ್ಕೆ ನನಗೆ ತಿಳಿದ ಮಟ್ಟಿಗೆ ಕೆಲವು ವಿಷಯಗಳನ್ನು ಹೇಳಲಿಚ್ಛಿಸುತ್ತೇನೆ. ಹಿಂದೆ ಕಂಟ್ರಾಕ್ಟ್ ಕೆಲಸಮಾಡುವವರು ಸಬ್‌ಡಿವಿಜನ್ ಆಫೀಸರ್, ಅಸಿಸ್ಟೆಂಟ್ ಇಂಜಿನಿಯರ್ ಇವರುಗಳಿಂದ ಹಣವನ್ನು ಪಡೆಯುವ ಏರ್ಪಾಟು ಇತ್ತು. ಕಂಟ್ರಾಕ್ಟರುಗಳು ತಮಗೆ ಬಿಲ್ ಮಾಡಿಕೊಡಿ ಎಂದು ಸಬ್ ಡಿವಿಜನ್ ಆಫೀಸರ ಹತ್ತಿರ ಹೋಗಿ ಕೇಳುತ್ತಿರಲಿಲ್ಲ. ಆದ್ದರಿಂದ ಯಾವ ಪದ್ಧತಿ ಪ್ರಕಾರ ಕಂಟ್ರಾಕ್ಟರುಗಳಿಗೆ ಸ್ಥಳದಲ್ಲಿಯೇ ಅವರ ಹಣವನ್ನು ಇಂಪ್ರೆಸ್ಟಿನಿಂದ ಅಸಿಸ್ಟೆಂಟ್ ಇಂಜನಿಯರು ಪಾವತಿಮಾಡುವ ಏರ್ಪಾಡು ಮಾಡಬೇಕು. ಆಗ ಅದರಿಂದಾಗುವ ಅನ್ಯಾಯವು ತಪ್ಪುತ್ತದೆ.

ಎರಡನೆಯದಾಗಿ ಈ ರಸ್ತೆಗಳನ್ನು ಫಸ್ಟ್ ಕ್ಲಾಸ್ ಸೆಕೆಂಡ್ ಕ್ಲಾಸ್, ಥರ್ಡ್ ಕ್ಲಾಸ್ ಎಂದು ಕ್ಲಾಸಿಫಿಕೇಷನ್ ಮಾಡಿ ಮೈಲಿಯೊಂದಕ್ಕೆ 600-700 ರೂಪಾಯಿಗಳ ಗ್ರಾಂಟನ್ನು ಮೈಂಟೆನೆನ್ಸ್‌ಗಾಗಿ ಕೊಡುತ್ತಿದ್ದಾರೆ. ಆದರೆ ನನಗೆ ಗೊತ್ತಿರುವ ಹಾಗೆ 700 ರೂಪಾಯಿಗಳು ಖರ್ಚಾಗುವುದಕ್ಕೆ ಅವಕಾಶವಿಲ್ಲ. ಮೆಟಲ್‌ರೋಡ್ ಚೆನ್ನಾಗಿದ್ದರೂ ಆ ರಸ್ತೆಗಳಿಗೆ ಹಣ ಒದಗಿಸಿ ಲ್ಯಾಪ್ಸಾಗುತ್ತಿರುವ ನಿದರ್ಶನಗಳಿವೆ. ಕೆಲವು ರಸ್ತೆಗಳಿಗೆ ಸಾಕಷ್ಟು ಹಣವಿಲ್ಲ, ಕೆಲವಕ್ಕೆ ಜಾಸ್ತಿ ಹಣ ಒದಗಿಸಿರುತ್ತಾರೆ. ಹೀಗಾಗಿ ಗ್ರಾಂಟು ಕೆಲವು ಕಡೆ ಲ್ಯಾಪ್ಸಾಗುತ್ತಿದೆ. ರಸ್ತೆ ಚೆನ್ನಾಗಿದ್ದರೂ ಕೂಡ ಜೆಲ್ಲಿ ಗುಡ್ಡೆ ಕಟ್ಟುತ್ತಾರೆ. ಈ ಕಡೆ ಸಂಬಂಧಪಟ್ಟ ಸಚಿವರು ನಿಗಾಕೊಟ್ಟು ಎಲ್ಲಿ ಹಣದ ಆವಶ್ಯಕತೆಯಿಲ್ಲವೆಂಬುದನ್ನು ನೋಡಿ ಅಲ್ಲಿಗೆ ಒದಗಿಸಿರುವ ಹಣವನ್ನು ಅನ್ಯುಯಲ್ ರಿಪೇರ್ಸ್‌ಗೆ ಒದಗಿಸಿರುವುದು ಎಲ್ಲಿ ಖರ್ಚಾಗಿಲ್ಲವೋ ಅಲ್ಲಿ ಉಳಿದಿರುವುದನ್ನು ಬೇಕಾದ ಕಡೆಗಳಿಗೆ ವಿನಿಯೋಗಿಸಲು ಅವಕಾಶಮಾಡಬೇಕು. ನಿಯಮಗಳ ಪ್ರಕಾರ ಒಂದು ಹೆಡ್‌ನಲ್ಲಿರುವುದನ್ನು ಬೇರೆ ಹೆಡ್‌ಗೆ ಖರ್ಚುಮಾಡಲು ಅವಕಾಶವಿಲ್ಲ. ಆದರೆ ರಸ್ತೆ ಚೆನ್ನಾಗಿದ್ದರೆ ಅಲ್ಲಿಗೆ ಹಣ ಒದಗಿಸಿ ಸೇವಿಂಗ್ಸ್ ಆಗುವುದನ್ನು ರೀ-ಅಪ್ರೋಪ್ರಿಯೇಟ್ ಮಾಡಿ ಮೂರನೆ ದರ್ಜೆ ಮತ್ತು ನಾಲ್ಕನೆಯ ದರ್ಜೆ ರಸ್ತೆಗಳಿಗೆ ಉಪಯೋಗಿಸಿದರೆ ಸದುಪಯೋಗವಾಗುತ್ತದೆ, ಆ ರೀತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಮೂರನೆಯದಾಗಿ ಎಸ್ಟಿಮೇಟುಗಳನ್ನು ಮಾಡಿದ ಮೇಲೆ ಪಾರಿಭಾಷಿಕ ಪರಿಶೀಲನೆಗೆ ಕಳುಹಿಸುವುದಾಗಿ ಒಂದು ಸಂದರ್ಭದಲ್ಲಿ ಹೇಳಿದ್ದಾರೆ. ಎಸ್ಟಿಮೇಟುಗಳನ್ನು ಮಾಡುವುದು ಟೆಕ್ನಿಕಲ್ ಪೀಪಲ್. ಆದಕ್ಕೆ ಕೆಲವು ಕಾಲಬೇಕು, ಆಮೇಲೆ ಪಾರಿಭಾಷಿಕ ಪರಿಶೀಲನೆಗೆ ವರ್ಷಗಟ್ಟಲೆ ಕಾಲ ಹಿಡಿಯುತ್ತದೆ. ಆದ್ದರಿಂದ ಒಂದು ಕೆಲಸಕ್ಕೆ ಎಸ್ಟಿಮೇಟ್ ಮಾಡಿದಾಗಲೇ ತಜ್ಞರು ಅದನ್ನು ಪರಿಶೀಲಿಸಿ ಮಂಜೂರು ಮಾಡಬೇಕು, ಹಾಗೆ ಮಾಡಿದರೆ ಕೆಲಸ ಜಾಗ್ರತೆಯಾಗಿ ವಿಳಂಬವಾಗುವುದು ತಪ್ಪುತ್ತದೆ.

ನಾಲ್ಕನೆಯದಾಗಿ ಕೆಲಸಗಳನ್ನು ಕಾರ್ಯರೂಪಕ್ಕೆ ತರಲು ಬಡ್ಜೆಟ್ಟಿನಲ್ಲಿ ಇಂಥ ಕೆಲಸಗಳಿಗೆ ಇಷ್ಟು ಹಣ ಎಂದು ಮೀಸಲಾಗಿಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಹಾಗೆ ಒದಗಿಸುವ ಹಣ ಖರ್ಚಾಗದೆ ಉಳಿದು ಹೋಗುತ್ತದೆ, ಅದಕ್ಕೆ ಅವಕಾಶಕೊಡಬಾರದು, ಒದಗಿಸುವಾಗಲೇ ಆವಶ್ಯಕತೆಯಿರುವುದನ್ನು ಚೆನ್ನಾಗಿ ಪರಿಶೀಲಿಸಿ ಒದಗಿಸಿರುವುದು ಸರಿಯಾಗಿ ಖರ್ಚಾಗಿ ಅದರಿಂದ ಪೂರ್ಣವಾಗಿ ಜನರಿಗೆ ಸಹಾಯವಾಗುವಂತೆ ಏಪಾಡುಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ನಾನು ಕಳುಹಿಸಿರುವ ಖೋತಾ ಸೂಚನೆಗಳ ವಿಷಯದಲ್ಲಿ ಒಂದೆರಡು ಮಾತು. ರೋಡ್ ರೀಕ್ಲಾಸಿಫಿಕೇಷನ್ 1953ನೆ ಇಸವಿಯಲ್ಲಿ ಒಂದು ರೀತಿ ಆಯಿತು. ಆದರೆ ಅದು ಸರಿಯಾಗಿ ತೀರ್ಮಾನವಾಗಲಿಲ್ಲ; ಒಂದು ಸಮಿತಿ ಮಾಡಿ ಆ ಸಮಿತಿಗೆ ಅಧಿಕಾರ ನೀಡಿ ತೀರ್ಮಾನ ಮಾಡದೆ ಒಂದು ರೀತಿ ತೀರ್ಮಾನಮಾಡಿ ಮೂರು ಬಗೆಯಾಗಿ ರಸ್ತೆಗಳನ್ನು ವಿಂಗಡಿಸಿ ಐ.ವಿ.ಸಿ. ರಸ್ತೆಗಳನ್ನು ಡಿಸ್ಟ್ರಿಕ್ ಬೋರ್ಡಿಗೆ ವಹಿಸಿ, ಅದನ್ನು ಅವರು ಕಾಪಾಡಬೇಕೆಂದು ನಿಯಮಮಾಡಿ, ಉಳಿದ ಮಾರ್ಕೆಟಿಂಗ್ ರಸ್ತೆ, ಡಿಸ್ಟ್ರಿಕ್ಟ್ ಫಂಡ್ ರಸ್ತೆ ಮುಂತಾದುವನ್ನು ಸರ್ಕಾರ ವಹಿಸಿಕೊಂಡಿತು. ಡಿಸ್ಟ್ರಿಕ್ಟ್ ಬೋರ್ಡಿನವರು ಕಾಪಾಡಬೇಕಾದ ರಸ್ತೆಗೆ ಸರ್ಕಾರದ ಗ್ರಾಂಟ್ ಕೊಡಬಾರದೆಂದು ......

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ತು ಇಲಾಖೆಯ ಮಂತ್ರಿಗಳು).—ಅದು ಸರಿಯಲ್ಲ, 50-50 ಬೇಸಿಸ್‌ಮೇಲೆ ತೆಗೆದುಕೊಂಡಿರುವುದು.

ಶ್ರೀ ಬಿ. ಎಸ್. ಶಂಕರಪ್ಪ.—1951ರಲ್ಲಿ ಹಾಗೆ ಮಾಡಿದ್ದರು. 1952 ರ ಅನಂತರ ನಾನು ಹೇಳಿದಂತೆ ಮಾಡಿದ್ದಾರೆ. ಐ.ವಿ.ಸಿ. ರಸ್ತೆಗಳನ್ನು ಈಗ ಡಿಸ್ಟ್ರಿಕ್ಟ್ ಬೋರ್ಡಿನವರೇ ಕಾಪಾಡಬೇಕಾಗಿದೆ. ಅವಕ್ಕೆ ಸರ್ಕಾರ ಗ್ರಾಂಟುಕೊಡುವ ನಿಬಂಧನೆಯಿಲ್ಲ. ಇದು ಸರಿಯಲ್ಲ. ಹೊಸದುರ್ಗ ತಾಲ್ಲೂಕಿನಲ್ಲಿ ಆರ್.ಸಿ.ಎಫ್. ಡಿಸ್ಟ್ರಿಕ್ಟ್ ಫಂಡ್ ರಸ್ತೆಯೊಂದರಲ್ಲಿ ಬಹಳವಾಗಿ ಮ್ಯಾಂಗನೀಸ್ ಸಾಗಿಸಲು ವಾಹನಗಳು ಓಡಾಡುತ್ತವೆ. ಆದರೆ ಕ್ಲಾಸಿಫಿಕೇಷನ್ ಪ್ರಕಾರ ಆ ರಸ್ತೆಯನ್ನು 4ನೇ ದರ್ಜೆ ರಸ್ತೆಯಾಗಿ ವಿಂಗಡಿಸಿದ್ದಾರೆ. ಇದರಿಂದ ಬಹಳ ಅಪಾಯವಿದೆ. ಡಿಸ್ಟ್ರಿಕ್ಟ್ ಬೋರ್ಡು ಅದನ್ನು ವಹಿಸಿಕೊಳ್ಳುವುದು ಕಷ್ಟ. ಸಂಸ್ಥಾನಾಮಳೆ ಸರ್ಕಾರದವರು ಮುಖ್ಯವಾದ ರಸ್ತೆಗಳನ್ನು ವಹಿಸಿಕೊಂಡಿರುವ ಹಾಗೆ ಈ ರಸ್ತೆಯನ್ನೂ ವಹಿಸಿಕೊಂಡು ಸರಿಪಡಿಸಬೇಕು.

ಹೊಸದುರ್ಗ ತಾಲ್ಲೂಕಿನಲ್ಲಿ ಕೆಲವು ಕೆರೆಗಳು ಒಡೆದು ಹೋಗಿ ಮೂರು ನಾಲ್ಕು ವರ್ಷಗಳಾದರೂ ರಿಪೇರಿಯಾಗಿಲ್ಲ. ಬಲ್ಲಾಳಸಮುದ್ರ ಕೆರೆ ರಿಪೇರಿಯಾಗದೆ ಬಹಳ ತೊಂದರೆಯಾಗಿದೆ. ಬೋಕಿಕೆರೆ, ದೇವಪುರ, ಹೆಬ್ಬಳ್ಳಿ ಈ ಗ್ರಾಮಗಳ ಕೆರೆಗಳೂ ಒಡೆದುಹೋಗಿವೆ, ಹೀಗೆ ಅನೇಕ ಕೆರೆಗಳು ಅಲ್ಲಿ ಒಡೆದುಹೋಗಿ ರಿಪೇರಿಯಿಲ್ಲದೆ ಜನರಿಗೆ ತೊಂದರೆಯಾಗಿದೆ, ಸರ್ಕಾರ ಈ ಕಡೆ ಗಮನ ಕೊಟ್ಟು ಜಾಗ್ರತೆ ಸರಿಪಡಿಸಬೇಕೆಂದು ಸೂಚಿಸುತ್ತೇನೆ. ಫೀಡರ್ ಛಾನಲ್ಸ್ ವಿಚಾರದಲ್ಲಿ ಹೇಳುವುದಾದರೆ ಅವುಗಳೂ ಸರಿಯಾದ ಸ್ಥಿತಿಯಲ್ಲಿಲ್ಲ. ಬೆಲಗೂರು, ಶ್ರೀರಾಮಪುರ ದೊಡ್ಡಕೆರೆ ಫೀಡರ್ ಛಾನಲ್‌ಗೆ ರೆಸ್ಟೊರೇಷನ್‌ಗಾಗಿ 42 ಸಾವಿರ ರೂಪಾಯಿಗಳ ಅಂದಾಜುಮಾಡಿ 70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದರೆ ಉಪಯೋಗವಿಲ್ಲ. ಇದಕ್ಕೆ ಕಾರಣರು ಯಾರು ? ಅನೇಕ ಸಂದರ್ಭಗಳಲ್ಲಿ ಹಣ ಪೋಲಾಗಿದೆ. ಅದನ್ನು ಪರಿಶೀಲಿಸಲು ಸಂಗೇನಹಳ್ಳಿ, ಗಡಿಮಾಕುಂಟೆ, ತುಪ್ಪದಹಳ್ಳಿ ಕೆರೆಗಳು ಒಡೆದುಹೋದಾಗ ಶ್ರೀ ಎಲ್. ಸಿದ್ದಪ್ಪನವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿದ್ದರು. ಆ ಸಮಿತಿಯವರು ಎಲ್ಲವನ್ನೂ ವಿಚಾರ ಮಾಡಿದರು. ಅದೇರೀತಿ ವಿಧಾನಸೌಧದ ವಿಚಾರದಲ್ಲೂ ಹಣ ಪೋಲಾಗಿದೆ ಎಂದು ಭಾವಿಸಿ 60-70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಅದನ್ನು ಪರಿಶೀಲಿಸಲು ಒಂದು ಸಮಿತಿ ಮಾಡಿದರು. ಆದರೆ ಈ ರೀತಿ ಎಷ್ಟೋ ಸಮಿತಿಗಳನ್ನು ನೇಮಕಮಾಡಿ, ಹಣ ಪೋಲಾಗಿರುವುದನ್ನು ವಸೂಲು ಮಾಡಿ ಖಜಾನೆಗೆ ತುಂಬದಿದ್ದರೆ ಅದರಿಂದೇನೂ ಹೆಚ್ಚು ಅನುಕೂಲವಾಗುವುದಿಲ್ಲ, ವೃಥಾ ಖರ್ಚಾಗುತ್ತದೆ, ಆದರಿಂದ ಸಮಿತಿ ರಚನೆಮಾಡಿದ ಉದ್ದೇಶ ಸಾರ್ಥಕವಾಗಬೇಕು, ಆರೀತಿ ಕೆಲಸ ನಡೆಯಬೇಕು ಎಂದು ಒತ್ತಾಯಪೂರ್ವಕವಾಗಿ ಮನವಿಮಾಡುತ್ತೇನೆ.

ಚಳ್ಳಕೆರೆ ತಾಲ್ಲೂಕಿನಲ್ಲಿ ಆಂಧ್ರ ಸರ್ಕಾರ ಕೆರೆ ಕಟ್ಟುವುದಕ್ಕೆ ತೀರ್ಮಾನಮಾಡಿದಾಗ ಸರ್ಕಾರದವರು ಅದಕ್ಕೆ ಅನುಮತಿಕೊಟ್ಟರು. ಕೆರೆಯಲ್ಲಿ ನೀರು ನಿಂತು ಮುಳುಗಡೆಯಾದ ಜಾಗಕ್ಕೆ ಇದುವರೆಗೂ ಕಾಂಪೆನ್ಸೇಷನ್ ದೊರೆಯದೆ ಜನರಿಗೆ ಬಹಳ ಕಿರುಕುಳವಾಗಿದೆ. ವೇದಾವತಿ ನದಿಗೆ ಅಡ್ಡಕಟ್ಟೆಹಾಕಿ ಆಂಧ್ರದವರು ಪ್ರಾಜೆಕ್ಟ್ ಕೆಲಸ ಕೈಕೊಂಡಿರುವುದರಿಂದ ನದಿಯ ನೀರು ಆಳವಾಗಿ ನಿಂತು 20-30 ಗ್ರಾಮಗಳವರು ತಿರುಗಾಡುವುದಕ್ಕೆ ತೊಂದರೆಯಾಗಿದೆ, ಭೈರವನರಪ್ಪ

(ಶ್ರೀ ಬಿ. ಎಸ್. ಶಂಕರಪ್ಪ)

ಪ್ರಾಜೆಕ್ಟ್ ಕಟ್ಟಲು ಆಂಧ್ರ ಸರ್ಕಾರ ಪ್ರಾರಂಭಿಸಿದ ಮೇಲೆ ಮುಳುಗಡೆಯಾದ ಜಮೀನಿಗೆ ಕೊಡಬೇಕಾದ ಪರಿಹಾರವನ್ನು ಅವರು ಕೊಟ್ಟಿರುವುದಿಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಸೂಕ್ತ ಕ್ರಮ ಕೈಗೊಂಡು ಪತ್ರವ್ಯವಹಾರ ನಡೆಸಿ ಆಂಧ್ರ ಸರ್ಕಾರದಿಂದ ಬರಬೇಕಾದ ಪರಿಹಾರ ದ್ರವ್ಯವನ್ನು ಜಾಗ್ರತೆ ಕೊಡಿಸುವುದಕ್ಕೂ 20-30 ಗ್ರಾಮಗಳವರಿಗೆ ಪ್ರಾಜೆಕ್ಟಿನಿಂದ ಆಗಿರುವ ಸಂಚಾರ ಸೌಕರ್ಯದ ತೊಂದರೆ ತಪ್ಪಿಸಲು ಬಡ್ಜೆಟ್ಟಿನಲ್ಲಿ ಹಣ ಒದಗಿಸಿ ಶೀಘ್ರವಾಗಿ ಕ್ರಮ ಕೈಕೊಳ್ಳುವುದಕ್ಕೂ ತಕ್ಕ ಏರ್ಪಾಡು ಮಾಡಬೇಕೆಂದು ಸಲಹೆಮಾಡಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತಪ್ಪಯ್ಯ (ಹರಪನಹಳ್ಳಿ).—ಸ್ವಾಮಿ, ಬಳ್ಳಾರಿ ಜಿಲ್ಲೆಯಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆ ಇದೆಯೋ ಇಲ್ಲವೋ ಎಂದು ಅನುಮಾನವಾಗಿದೆ. ಚಿಕ್ಕಹಗರಿ ಸೇತುವೆ ಮತ್ತು ಮರೂರು ಹಳ್ಳಕ್ಕೆ ಸೇತುವೆ ಇವೆರಡಕ್ಕೂ ಎಸ್ಟಿಮೇಟ್ ಆಗಿ ಮಂಜೂರಾಗಿ ಕಾಂಟ್ರ್ಯಾಕ್ಟ್ ಅಪ್ರೂವ್ ಆಗಿ ವರ್ಕ್ಸ್ ಆರ್ಡರ್ ಕೊಟ್ಟು ಎರಡು ವರ್ಷಗಳಾಗುತ್ತಾ ಬಂತು. ಆದರೂ ಆ ಕೆಲಸಗಳನ್ನು ಇನ್ನೂ ಪ್ರಾರಂಭಮಾಡಿಲ್ಲ. ಇಷ್ಟು ನಿಧಾನವೇಕಾಯಿತೋ ಗೊತ್ತಿಲ್ಲ.

ಜಂಣಿ ಹಳ್ಳಕ್ಕೆ ಸೇತುವೆ ಕಟ್ಟಲಿಕ್ಕೆ ಸರ್ಕಾರದವರು 4 ಸಲ ಟೆಂಡರ್ ಕರೆದಿದ್ದಾರೆ. ಇದುವರೆಗೂ ಯಾವ ಕಂಟ್ರಾಕ್ಟರೂ ಟೆಂಡರು ಹಾಕಿಲ್ಲ. ಇದು ಯಾವ ಕಾರಣದಿಂದ ಎಂದು ಸರ್ಕಾರದವರು ತೀವ್ರವಾಗಿ ಆಲೋಚಿಸಬೇಕು. ಎಚ್.ಎಂ ಎಫ್. ರಸ್ತೆಯಲ್ಲಿ 60/1 ಮೈಲಿಯಲ್ಲಿರುವ ಸೇತುವೆ ಕೊಲ್ಯಾಪ್ಸ್ (Collapse) ಆಗಿ ಮೂರು ವರ್ಷವಾಗಿದೆ. ಇದುವರೆಗೂ ಸರ್ಕಾರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ.

ಕೆಲವು ರಸ್ತೆಗಳಿಗೆ ಮೆಟಲ್ ಮಾಡಬೇಕಾಗಿದೆ. ಅವು ಯಾವುವೆಂದರೆ:—(1) ನೀಲಗುಂದದಿಂದ ಕುರವತ್ತಿವರೆಗೆ—ಕುಂಚೂರ, ಬಹಲವಾಗಲು ಮಾರ್ಗವಾಗಿ; (2) ಕಂಚಿಕೆರೆ, ಸತ್ತೂರು ಮಾರ್ಗವಾಗಿ—ಅರಸೀಕೆರೆಯಿಂದ ದಾವಣಗೆರೆಯವರೆಗೆ; (3) ಬಾಗಳಿಯಿಂದ ಶೃಂಗಾರ ತೋಟದವರಗೆ; (4) ಕೊಟ್ಟೂರಿನಿಂದ ಬಣವಿಕಲ್ಲು, ಅಲ್ಲಿಂದ ಮಾನಕೇರಿವರೆಗೆ; ಇವು ಮಣ್ಣು ರಸ್ತೆಗಳು. ಮಳೆಗಾಲದಲ್ಲಿ ಈ ರಸ್ತೆಗಳಲ್ಲಿ ಜನರು, ಬಂಡಿಗಳು ತಿರುಗಾಡುವುದಕ್ಕೆ ಕೂಡ ಸಾಧ್ಯವಿಲ್ಲ. ಆದ್ದರಿಂದ ಆದಷ್ಟು ಬೇಗ ಈ ರಸ್ತೆಗಳಿಗೆ ಮೆಟಲ್ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನೂ ಕೆಲವು ಹೊಸ ರಸ್ತೆಗಳನ್ನು ಮಾಡಬೇಕಾಗಿದೆ. ಕೊಟ್ಟೂರಿನಿಂದ ಹಗರಿಬೊಮ್ಮನಹಳ್ಳಿಗೆ ಅತ್ಯಾವಶ್ಯಕವಾಗಿ ರಸ್ತೆ ಆಗಬೇಕಾಗಿದೆ; ವ್ಯಾಪಾರ ದೃಷ್ಟಿಯಿಂದಲೂ ಬಹಳ ಅಗತ್ಯವಾಗಿದೆ. ಸರ್ಕಾರದವರು ತೀವ್ರವಾಗಿ ಈ ರಸ್ತೆ ನಿರ್ಮಾಣ ಕೈಕೊಳ್ಳುವರೆಂದು ಆಶಿಸುತ್ತೇನೆ. ಉಜ್ಜಿ-ಹೊಸಳ್ಳಿ ರಸ್ತೆ, ಹರಪನಹಳ್ಳಿಯಿಂದ ಕ್ಯಾರಕಟ್ಟೆ-ಜಿಟ್ಟಿನಕಟ್ಟೆ ಮಾರ್ಗವಾಗಿ ರಸ್ತೆ ಈ ರಸ್ತೆಗಳನ್ನೂ ಸರ್ಕಾರದವರು ಈ ವರ್ಷವೇ ಮಂಜೂರು ಮಾಡಬೇಕೆಂದು ಸಲಹೆಮಾಡುತ್ತೇನೆ. ಈ ಕೆಲಸಗಳೆಲ್ಲಾ ಅವಶ್ಯಕವಾಗಿ ನೆರವೇರಬೇಕಾದರೆ ಒಂದು ಪಬ್ಲಿಕ್‌ವರ್ಕ್ಸ್ ಸಬ್‌ಡಿವಿಜನ್ ಆಫೀಸನ್ನು ಕೊಟ್ಟೂರಿನಲ್ಲಿ ತೆರೆಯುವುದು ಸೂಕ್ತ ಎಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11 A.M.

ಶ್ರೀ ಬಸನಗೌಡ (ಲಿಂಗಸೂಗೂರು).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಈ ಡಿಮ್ಯಾಂಡುಗಳ ಮೇಲೆ ನಾಲ್ಕು ಮಾತನ್ನಾಡಬೇಕೆಂದು ನಿಂತಿದ್ದೇನೆ.

ಮೊದಲನೆಯದು, ನಾವು ಹೈದರಾಬಾದು ಸರ್ಕಾರದಲ್ಲಿದ್ದಾಗಿನಿಂದಲೂ ತಾಲ್ಲೂಕ್ ಮತ್ತು ಜಿಲ್ಲಾ ಡೆವೆಲಪ್‌ಮೆಂಟ್ ಕಮಿಟಿ ಮತ್ತು ಪ್ಲಾನಿಂಗ್ ಕಮಿಟಿಗಳಲ್ಲಿದ್ದು ಅವುಗಳಿಂದ ಸರ್ಕಾರಕ್ಕೆ ಎಷ್ಟೋ ಯೋಜನೆಗಳನ್ನು ಕಳುಹಿಸಿಕೊಟ್ಟಿದ್ದರೂ ಕೂಡ ಯಾವುದೂ ಬಡ್ಜೆಟ್ಟು ಪಟ್ಟಿಯಲ್ಲಿ ಸೇರಿಲ್ಲ. ಆ ಪ್ರಕಾರ ತಾಲ್ಲೂಕ್ ಡೆವೆಲಪ್‌ಮೆಂಟ್ ಕಮಿಟಿಗಳಿಂದ ಬಸ್ಸುಸಾರಿಗೆ ವಿಚಾರದಲ್ಲಿ ಎಂದರೆ ರೋಡ್ ಟ್ರಾನ್ಸ್‌ಪೋರ್ಟು ಭಾಗಗಳ ವಿಚಾರದಲ್ಲಿ ಒಂದು ಯೋಜನಾ ಕಳುಹಿಸಿದ್ದೆವು. ಅದೇನಾಯಿತೋ ತಿಳಿಯಲಿಲ್ಲ. ಇದು ತುಂಬ ವಿಷಾದಕರವಾದ ಅಂಶ. ಈ ಕಡೆ ಗಮನ ಕೊಡಬೇಕೆಂದು ನನ್ನ ಸೂಚನೆ.

ನಮ್ಮ ಹೈದರಾಬಾದು ಕರ್ಣಾಟಕದಲ್ಲಿ ರಾಯಚೂರು ಬಹಳ ಹಿಂದುಳಿದ ಜಿಲ್ಲಾ ಆಗಿದೆ. ಅದರಲ್ಲಿರುವ ಲಿಂಗಸೂಗೂರು ಬಹಳ ಹಿಂದುಳಿದ ತಾಲ್ಲೂಕ್ ಆಗಿದೆ. ಹಿಂದಕ್ಕೆ ಇಲ್ಲಿ 70ರಿಂದ 90 ಮೈಲಿಗಳ ರಸ್ತೆಗಳಲ್ಲಿ ಬಸ್ಸುಗಳು ಸಾಕಷ್ಟು ಓಡಾಡುತ್ತಿದ್ದುವು, ಈಗ ರಾಷ್ಟ್ರೀಕರಣವಾದಮೇಲೆ ದೊಡ್ಡ ದೊಡ್ಡ ರೋಡುಗಳಲ್ಲಿ ಮಾತ್ರ ಬಸ್ಸುಗಳು ಬರುತ್ತವೆ; ಕೆಲವು ಭಾಗಗಳಲ್ಲಿ ಬರುತ್ತಿಲ್ಲ. ಇದರಿಂದ ಹಳ್ಳಿಗಾಡಿನ ಜನರಿಗೆ ತೊಂದರೆಯಾಗಿದೆ. ಅಲ್ಲದೆ ಈಗ ಕಚ್ಚಾ ರಸ್ತೆಗಳಲ್ಲಿ ಸಾಕಷ್ಟು ಬಸ್ಸುಗಳನ್ನು ಓಡಿಸಲು ಖಾಸಗಿಯವರಿಗೆ ಪರವಾನಗಿ ಸಿಕ್ಕುತ್ತಿಲ್ಲ. ಈಗ ನಮ್ಮ ಗಂಗಾವತಿಯಿಂದ ನಮ್ಮ ಲಿಂಗಸೂಗೂರಿಗೆ 56 ಮೈಲಿಗಳು. ಇದರಮೇಲೆ ಹಳ್ಳಿಗಳಿವೆ. ಒಂದಕ್ಕಾದರೂ ಪೂಲು ಆಗಿಲ್ಲ. ಇದು ಇನ್ನೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಇದು ಬಹಳ ಅವಶ್ಯಕವಾಗಿ ಆಗಬೇಕು. ಅಲ್ಲದೆ ನಮ್ಮ ಲಿಂಗಸೂಗೂರು ತಾಲ್ಲೂಕಿನಲ್ಲಿ ದೊಡ್ಡ ದೊಡ್ಡ ಮಾರ್ಗಗಳಿಗೆ ರಸ್ತೆಗಳಿವೆ. ಆದರೆ ಹಳ್ಳಿಗಳ ಕಡೆಗೆ ಹೋಗಲು ಸರಿಯಾದ ಸಡಕುಗಳಿಲ್ಲ. Road Transportನ ಬಸ್ಸುಗಳೇನೋ ಬರುತ್ತವೆ. ಆದರೆ ಸಾಕಷ್ಟು ಬಸ್ಸುಗಳು ಇಲ್ಲದಿರುವುದರಿಂದ ಹಳ್ಳಿಗಾಡಿನಿಂದ ಬರುವ ಪ್ರಯಾಣಿಕರಿಗೆ ಬಹು ತೊಂದರೆಗಳಾಗುತ್ತಿವೆ. ಪ್ರಯಾಣಿಕರಿಗೆ ಸರಿಯಾಗಿ ಸ್ಥಳಸಿಕ್ಕದೆ ಒಂದೆರಡು ದಿನಗಳು ಅವರ ಪ್ರವಾಸವನ್ನು ರದ್ದುಪಡಿಸಬೇಕಾಗಿ ಬರುತ್ತಿದೆ. ಮಳೆಗಾಲದಲ್ಲಂತೂ ಕೆಲವು ಭಾಗಗಳಲ್ಲಿ ಸರಕಾರಿ ಬಸ್ಸುಗಳನ್ನು ಪೂರಾ ನಿಲ್ಲಿಸುತ್ತಾರೆ. ಹಿಂದೆ ಪೋಲೀಸ್ ಕಾರ್ಯಾಚರಣೆಗೆ ಮೊದಲು ಖಾಸಗೀ ಬಸ್ಸುಗಳು ಓಡಾಡುತ್ತಿದ್ದವು. ಇದರಿಂದ ಹಳ್ಳಿಯ ಜನಗಳಿಗೆ ತುಂಬ ಅನುಕೂಲವಾಗಿತ್ತು. ಈಚೆಗೆ ಈ R.T.D ಬಸ್ಸುಗಳು ಬಂದಮೇಲೆ ಖಾಸಗಿಯವರಿಗೆ ಬಸ್ಸುಗಳನ್ನು ನಡೆಸಲು ಪರ್‌ಮಿಟ್ಟನ್ನು ಕೊಡುತ್ತಿಲ್ಲ. ಇದರಿಂದಾಗಿ ಅವರುಗಳು ಬಸ್ಸುಗಳನ್ನು ನಡೆಸುತ್ತಿಲ್ಲ. ಅಲ್ಲದೆ ಈಚೆಗೆ ನಮ್ಮ ಹೈದರಾಬಾದ್ ಕರ್ಣಾಟಕ ಭಾಗಗಳು ಮೈಸೂರಿಗೆ ಸೇರಿದಮೇಲೆ ನಮಗೆ ಕೊಡಬೇಕಾದ ಬಸ್ಸುಗಳಲ್ಲಿ ಈಗಿನ ಆಂಧ್ರ ಸರ್ಕಾರವು ಬಹಳ ಹಳೆಯ ಬಸ್ಸುಗಳನ್ನು ಕೊಟ್ಟಿದೆಯೆಂದು ಕೇಳಿದೆ. ಇದರಿಂದ ಏನಾಗಿದೆ ಎಂದರೆ ಈ ಬಸ್ಸುಗಳು ಸರಿಯಾಗಿ ನಡೆಯುವುದಿಲ್ಲ. ಅಲ್ಲಲ್ಲೇ ನಿಂತುಹೋಗುತ್ತದೆ. ಅದಕ್ಕಾಗಿ ನಾನು ಸರಕಾರವನ್ನು ಕೇಳುವುದು ಖಾಸಗೀ ಜನರಿಗೆ ಪರವಾನಗಿ

ಗಳನ್ನು ಹೆಚ್ಚಾಗಿ ಕೊಟ್ಟು ಈ ಕಚ್ಚಾರಸ್ತೆಗಳಲ್ಲಿ ಓಡಾಡಲು ಅನುಕೂಲವಾಗುವಂತೆ ಮಾಡಿಕೊಡಬೇಕು. ಈಗ ಪರ್‌ಮಿಟ್ಟುಗಳನ್ನು ಕೊಡಲಾರದ್ದಕ್ಕೆ ಖಾಸಗೀ ಬಸ್ಸುಗಳು ಬಹಳ ಕಡಿಮೆಯಾಗಿವೆ. ಇದನ್ನು ಹೆಚ್ಚಿಸಬೇಕು. ಈ ಬಸ್ಸುಗಳು ಕೆಲವುಕಡೆ P.W.D. ರೋಡುಗಳಿರುವುದರಿಂದ ಅದರಮೇಲೆ ಹೋಗಲು ಅವಕಾಶವಿಲ್ಲ. ಏಕೆಂದರೆ ಪರವಾನಗಿಗಳು P.W.D. ರೋಡುಗಳಿಗೆ ಕೊಡುವುದಿಲ್ಲ. R.T.D. ಬಸ್ಸುಗಳು ಮಾತ್ರ ಈ P.W.D. ರೋಡುಗಳಲ್ಲಿ ಹೋಗಬಹುದು. ಕೆಲವುಕಡೆ ಖಾಸಗೀ ಬಸ್ಸುಗಳು P.W.D. ರೋಡುಗಳಮೇಲೆ ಸುಮಾರು ಮೂರು ನಾಲ್ಕು ಮೈಲಿಗಳವರೆಗೆ ಹಿಂದಕ್ಕೆ ಹಾದು ಹೋಗಬೇಕಾಗುತ್ತದೆ. ಈ 3-4 ಮೈಲಿಗಳಿಗೂ ಸೇರಿಸಿ ಹೋಗಲ ಪರವಾನಗಿಕೊಟ್ಟರೆ ಬಹುತೇಕ ಹಳ್ಳಿಯ ಜನಗಳಿಗೆ ಪ್ರವಾಸಮಾಡಲು ಅನುಕೂಲವಾಗುತ್ತದೆ; ನಮ್ಮ ಭಾಗ ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಸರ್ಕಾರ ಇದನ್ನು ಗಮನಿಸಿ ಆದಷ್ಟೂ ಹೆಚ್ಚಿನ ಬಸ್ಸುಗಳನ್ನು ಹಾಕಬೇಕು. ಹಾಗೆ ಸರಕಾರಕ್ಕೆ ಹೆಚ್ಚಿನ ಬಸ್ಸು ಹಾಕಲು ಸಾಧ್ಯವಾಗದ ಪಕ್ಷದಲ್ಲಿ ಖಾಸಗೀ ಬಸ್ಸುಗಳಿಗಾದರೂ ತಾತ್ಪೂರ್ವಿಕವಾಗಿ ಪರ್‌ಮಿಟ್ಟುಗಳನ್ನು ಕೊಡಬೇಕು.

ಎರಡನೆಯದು ನೀರಾವರಿ ವಿಚಾರ. ನಮ್ಮ ತಾಲ್ಲೂಕ್‌ಗಳಲ್ಲಿ ನೀರಾವರಿ ಬಹಳ ಕಡಿಮೆಯಾಗಿದೆ. ಹಿಂದಿನ ಸರ್ಕಾರ ಎಂದರೆ ಹೈದರಾಬಾದ್ ಸರ್ಕಾರವು ತುಂಗಭದ್ರ ಪ್ರಾಜೆಕ್ಟಿನ ನೆವಮಾಡಿ ಯಾವ ನೀರಾವರಿ ಕೆಲಸಗಳಿಗೂ ಗಮನಕೊಡಲಿಲ್ಲ.

ಈಗ ತುಂಗಭದ್ರ ಪ್ರಾಜೆಕ್ಟಿನಿಂದ ಸುಮಾರು ನಾಲ್ಕೈದು ತಾಲ್ಲೂಕುಗಳ ಜಮೀನುಗಳಿಗೆ ಅನುಕೂಲವಾಗಿದೆ. ನಮ್ಮ ಲಿಂಗಸೂಗೂರು, ದೇವದುರ್ಗ ತಾಲ್ಲೂಕುಗಳಿಗೆ ಈ ಯೋಜನೆಯಿಂದ ಏನೂ ಪ್ರಯೋಜನವಾಗಿಲ್ಲ ನಮ್ಮ ಈ ಎರಡು ತಾಲ್ಲೂಕುಗಳಿಗೆ Upper Krishna Project ಬರುವವರೆಗೂ ಇಲ್ಲಿರುವ ಕೆರೆಗೆಗಳನ್ನು ದುರಸ್ತು ಮಾಡಬೇಕು. ಅಲ್ಲದೆ ಇಲ್ಲಿ ಅನೇಕ ದೊಡ್ಡ ದೊಡ್ಡ ಹಳ್ಳಗಳಿವೆ. ನಮ್ಮ ತಾಲ್ಲೂಕಿನ ಹತ್ತಿರದಲ್ಲಿರುವ ನಾಗಲಾಪುರದ ಹಳ್ಳಕ್ಕೆ ಒಂದು ಅಣೆಕಟ್ಟನ್ನು ಕಟ್ಟಿದರೆ ನಮ್ಮ ಕಡೆ ಐದು-ಆರು ಸಾವಿರ ಎಕರೆಗಳಷ್ಟು ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗುತ್ತದೆ. ನಮ್ಮ ತಾಲ್ಲೂಕಿನ ಸುತ್ತಮುತ್ತಲಿನ ಪ್ರಜೆಗಳಿಗಾಗಿ ಈ ನೀರಾವರಿ ಯೋಜನೆಯನ್ನು ಮಾಡಿಕೊಡಬೇಕೆಂದು ಬೇಡುತ್ತೇನೆ.

ಮೂರನೆಯದು ಏನೆಂದರೆ ನಮ್ಮ ಕಡೆಗಳಲ್ಲಿ ಕೆಲ ಕೆಲವು ಸಣ್ಣಸಣ್ಣ ಸಡಕುಗಳು ಅವಶ್ಯವಾಗಿ ಆಗಬೇಕು. ಈ ಸಡಕುಗಳನ್ನು ಮಾಡುವುದರಿಂದ ನಮ್ಮ ಹಳ್ಳಿಯ ಜನಗಳಿಗೆ ಬಹಳ ಅನುಕೂಲಗಳಾಗುತ್ತವೆ. 14 ಮೈಲು, ಅಥವಾ 12 ಮೈಲಿಗಳು ಈ ಸಡಕುಗಳಾಗಬಹುದು. ಮುಖ್ಯವಾಗಿ (1) ಲಿಂಗಸೂಗೂರಿನಿಂದ ಚಿತ್ತಾಪುರ, (2) ಮಾಸ್ಕಿಯಿಂದ ಮುದಗಲ್ಲು, (3 ಬಿಳ್ಳೆಹಾಳದಿಂದ ಚಿತ್ತಾಪುರ ಈ ಮೂರು ಸಡಕುಗಳನ್ನು ಬಹಳ ಜರೂರಾಗಿ ಮಾಡಿಸಿಕೊಡಬೇಕು. ಈ ಕೆಲವೇ ಮೈಲಿಗಳ ಸಡಕುಗಳನ್ನು ಮಾಡಿಸಿದರೆ ಬಿಜಾಪುರದ ಕಡೆಗೆ ಹೋಗಲು ಅನುಕೂಲವಾಗುತ್ತದೆ. ಅಮೇಲೆ ಮಾನ್ವಿಯಿಂದ ಒಂದು ರೋಡು ಬೆಳಗಾಂ ಹಾಗೂ ಮುದಗಲ್ಲಿನಿಂದ ಮಾನ್ವಿಯವರೆಗೆ ಅದನ್ನು ಕೂಡಿಸಿದರೆ ಬೆಳಗಾಂತನಕ ಹೋಗಲು ಅನುಕೂಲವಾಗುತ್ತದೆ. ಹಾಗೂ ಲಿಂಗಸೂಗೂರಿಂದ ಚಿತ್ತಾಪುರದವರೆಗೆ ರೋಡು ಮಾಡಿದಲ್ಲಿ, ಷೋಲಾಪುರದ ಕಡೆಯಪ್ರದೇಶಗಳಿಗೆ ಅನುಕೂಲವಾಗುತ್ತದೆ. ಇವೆಲ್ಲ ಕೇವಲ ೧೦—೧೨ ಮೈಲಿಗಳಷ್ಟು ದೂರವಿರುವುದರಿಂದ ಆದಷ್ಟು ಸರಕಾರ ಗಮನಕೊಟ್ಟು ಇದನ್ನು ಮಾಡಿಸಿಕೊಡಬೇಕೆಂದು ಅರಿಕೆಮಾಡುತ್ತಿದ್ದೇನೆ. ದೇವದುರ್ಗದಿಂದ—ಹಟ್ಟಿಗೆ ೭೦ ಮೈಲಿಗಳಿವೆ. ಆದರೆ ದೇವದುರ್ಗಕ್ಕೆ ರೋಡಿನ ಮೇಲೆ ಹೋಗಬೇಕಾದರೆ ರೋಡಿನಿಂದ ದೇವದುರ್ಗ ೮೦ ಮೈಲು ಸುತ್ತಿಕೊಂಡು ಹೋಗಬೇಕಾಗುತ್ತದೆ. ರೋಡನ್ನು ಮಾಡದಿದ್ದಲ್ಲಿ ಪ್ರಯಾಣಿಕರಿಗೆ ಲಿಂಗಸೂಗೂರಿನಿಂದ ದೇವದುರ್ಗಕ್ಕೆ ೩೦ ಮೈಲಿ ಓಡಾಡಲು ಬಹಳ ತ್ರಾಸಾಗುತ್ತದೆ. ಇನ್ನೊಂದು ಸಣ್ಣ ಕಚ್ಚಾರೋಡಿದೆ. ಅದು ಗುಡಗುಂಟೆನಿಂದ ಲಿಂಗಸೂಗೂರಿಗೆ ಹತ್ತು ಮೈಲಿಗಳಿದೆ. ಮೆಟಲ್ ರೋಡನ್ನಾಗಿ ತಯಾರಿಸಬೇಕು. ಇದನ್ನು ಮಾಡಿಸಿ ಕೊಡಬೇಕೆಂದು ಕೋರುತ್ತೇನೆ.

ಇನ್ನೊಂದೇನೆಂದರೆ, ಇದು ಬಹಳ ಸಣ್ಣ ವಿಷಯ, ಕೆಲವು ಅನಾವಶ್ಯಕವಾದ ಖರ್ಚುಗಳು ಸರಕಾರದವರಿಂದ ದೂರವಾಗಬೇಕಾಗಿದೆ. ಅವೇನೆಂದರೆ ನಮ್ಮ ದೇವದುರ್ಗ ತಾಲ್ಲೂಕಿನಲ್ಲಿ ಗಲಗಲದಲ್ಲಿ ಒಂದು P.W.D. building ಇದೆ. ಅದು ಯಾವ ಕಾರಣದಿಂದಲೋ ಏನೋ ಕಟ್ಟಲ್ಪಟ್ಟಿದ್ದು ಈಗ ಸರಕಾರದವರು ಇಬ್ಬರು ನೌಕರರನ್ನು ನೇಮಿಸಿ ಒಬ್ಬರಿಗೆ 40 ರೂಪಾಯಿಗಳು ಮತ್ತೊಬ್ಬರಿಗೆ 60 ರೂಪಾಯಿಗಳು ಹೀಗೆ ಒಂದುನೂರು ರೂಪಾಯಿಗಳನ್ನು ತಿಂಗಳಿಗೆ ಅವರಿಗೆ ಕೊಡುತ್ತಿದ್ದಾರೆ. ಅವರು ಮಾಡುವ ಕೆಲಸವಾದರೂ ಏನಿಲ್ಲ. ಆ ಬಿಲ್ಡಿಂಗು ಬಹಳ ಪುರಾತನದ್ದು ಅದರಿಂದ ಬಿದ್ದ ಕಲ್ಲು ಮತ್ತು ಕಟ್ಟಿಗೆಗಳನ್ನು ಜೋಡಿಸಿಡುವುದು ಮಾತ್ರ. ಬೇರೆ ಯಾವ ಕೆಲಸವಿಲ್ಲ. ಇದರಿಂದ ಆ ಬಿಲ್ಡಿಂಗಿನಿಂದ ಏನೂ ಉಪಯೋಗವಿಲ್ಲ. ಈ ಇಬ್ಬರು ನೌಕರರನ್ನು ತೆಗೆದುಹಾಕುವುದೊಳ್ಳೆಯದು. ಹಾಗೆ ಮಾಡುವುದರಿಂದ ಸರಕಾರಕ್ಕೆ ತಿಂಗಳಿಗೆ ನೂರು ರೂಪಾಯಿಗಳು ಉಳಿತಾಯವಾಗುತ್ತವೆ, ಮತ್ತು ಈ ಬಿಲ್ಡಿಂಗನ್ನು ಹರಾಜುಮಾಡಿದರೆ ಒಳ್ಳೆಯದು.

ಮತ್ತೊಂದು P.W.D. ಬಿಲ್ಡಿಂಗು ಇದೆ. ಅದು ಲಿಂಗಸೂಗೂರು ತಾಲ್ಲೂಕಿನಲ್ಲಿರುವ ಮಾರಲದಿನ್ನೆಯಲ್ಲಿದೆ. ಅಲ್ಲಿಯೂಕೂಡ ಇದೇರೀತಿಯಾಗಿ ಇಬ್ಬರು ನೌಕರರಿದ್ದಾರೆ. ಅವರಿಗೂ ಏನೂ ಕೆಲಸವಿಲ್ಲ. ಅವರನ್ನೂ ಕೂಡ ತೆಗೆದರೆ ಮತ್ತು ಅಲ್ಲಿದ್ದ ಬಿಲ್ಡಿಂಗನ್ನು ಹರಾಜುಮಾಡಿದಲ್ಲಿ ಸರಕಾರದ ಅನಾವಶ್ಯಕ ಖರ್ಚುಗಳು ತಪ್ಪುತ್ತವೆ.

ಅಲ್ಲದೆ ನಮ್ಮ ಲಿಂಗಸೂಗೂರಿನಲ್ಲಿ ಎರಡು ಕೆರೆಗಳಿವೆ ಅದರಿಂದ ಏನೂ ಪ್ರಯೋಜನವಿಲ್ಲ. ತುಂಗಭದ್ರ ಜಲಾಶಯದಿಂದ ಲಿಂಗಸೂಗೂರು ಮತ್ತು ದೇವದುರ್ಗ ತಾಲ್ಲೂಕಿಗೆ ಪ್ರಯೋಜನವಾಗುತ್ತಿಲ್ಲ. ಸರ್ಕಾರದವರು ಈ ಪ್ರದೇಶಗಳಲ್ಲಿರುವ ಕೆರೆಗಳ ಜೀರ್ಣೋದ್ಧಾರ ಕಾರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಸಹಾಯ ಮಾಡಬೇಕು. ಲಿಂಗಸೂಗೂರಿನಿಂದ ದೇವದುರ್ಗದ ಮೂಲಕ ಹಟ್ಟಿಗೆಸೇರುವಹಾಗೆ ಒಂದು ಸಡಕನ್ನು ಮಾಡಿಕೊಡಬೇಕು. ಈ ಮೇಲೆ ಹೇಳಿದ ಲಿಂಗಸೂಗೂರಿನ ಎರಡು ಕೆರೆಗಳಲ್ಲಿ ಹೊಂಡ ಹೂತು ಹೋಗಿ ಕೆಲಸಕ್ಕೆ ಬಾರದಂತಾಗಿದೆ. ಇದರಲ್ಲಿ ನೀರು ನಿಲ್ಲುವುದಿಲ್ಲ. ಅವುಗಳಲ್ಲಿದ್ದ ಹೊಂಡನ್ನು ತೆಗೆಸಬೇಕು. ಸರಕಾರದಿಂದ ಆಗದಿದ್ದರೆ ವ್ಯವಸಾಯಗಾರರಿಗೆ ಆ ಹೊಂಡನ್ನು ತಮ್ಮ ಹೊಲಗಳಿಗೆ ತೆಗೆದುಕೊಂಡು ಹೋಗಿ ಹಾಕಲು ಪರವಾನಿಗಿ ಕೊಡಬೇಕು. ಇದರಿಂದ ವ್ಯವಸಾಯಗಾರರಿಗೆ ಬಹಳ

(ಶ್ರೀ ಬಸನಗೌಡ)

ಲಾಭವಾಗುವುದು. ಇದರಮೇಲೆ ಬಹಳ ದಿವಸಗಳಿಂದಲೂ ಒತ್ತಾಯಮಾಡುತ್ತಿದ್ದರೂ ಏನೂ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇದರಕಡೆ ಈಗಲಾದರೂ ಲಕ್ಷ್ಯ ಕೊಡಬೇಕು. ಅಲ್ಲದೆ ಮೇಲೆ ಹೇಳಿದಂತೆ ಖಾಸಗೀ ಬಸ್ಸು ಮಾಲೀಕರುಗಳಿಗೆ ಪರವಾನಗಿಗಳನ್ನು ಕೊಟ್ಟು ಜನಗಳಿಗೆ ಪ್ರವಾಸ ಸೌಕರ್ಯವನ್ನು ಒದಗಿಸಬೇಕು. ಇಷ್ಟನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri M. C. NARASIMHAN (Kolar Gold Fields).—Sir, talking of the Demands, the first is about the Road Transport. It is no doubt a matter for satisfaction that under this Head nearly Rs. 25 lakhs are shown as net profits. But these net profits have been due to the specific situation. My submission is that these profits should be shared with the labour who are really responsible and also with the passengers. So far as the passengers are concerned, it is a matter of concern that adequate amenities are not being provided under this Head. A long time ago the Government appointed a Committee known as Long Distance Passengers Commitee. They did make certain recommendations in the matter of providing amenities to the passengers, particularly construction of Rest Houses. But, it is rather unfortunate that despite the huge profit that this Department is making the tackling of question of sharing this profit with the passengers, which is very important, is far from satisfactory. So far as the labour in this Department is concerned, it is a matter for satisfaction that efficient services especially in mofussil areas, have been maintained. But unfortunately the demands of the labourers have not been met and there is a lot of discontentment and dissatisfaction among them. If this dissatisfaction were to continue, we will not be able to enforce discipline and that standard of efficiency cannot be expected and that sense of protection of public property which is necessary cannot be expected from this Department. So I suggest that the amount out of the profits may be used for amenities to the passengers and the labour. I fully agree with the Hon'ble Sri Rasheed in regard to the suggestions made by him and I suggest that immediate action may be taken to implemeht them.

Coming to the Bangalore Transport Service, I may say that it is in a hopeless, condition Those who are running the service lack sufficient imagination. For example we see a lot of queue waiting for the buses and even to get a small change there is a lot of difficulty. The conductors are given five rupees' change in the morning and you will find there is misunderstanding between the passengers and conductors in this matter. It is on account of lack of administrative efficiency this state of affairs is existing.

Coming to the roads and bridges, road maintenance so far as old Mysore is concerned calls for considerable improvement. If you closely study the development and maintenance standards in the integrated araas especially of Bombay, I must say the maintenance standard is far higher than Mysore.

Sri D. DEVARAJA URS (Hunsur).—What about road mileage ?

Sri M. C. NARASIMHAN.—Efficiency is altogether a different matter. Simply because there is road mileage it does not mean that there should be deterioration in efficiency. Two things cannot go together. To improve efficiency it is necessary that we create a Highways Department as in other integrating areas. So far as old Mysore is concerned we did not have a separate Engineer in charge just as in Madras and Bombay. I suggest that a separate department be created for the purpose of going into the question. That is one administrative suggestion. Next, I cannot understand, when roads and bridges call for immediate attention, when rural communications and other communications should be developed in the country, why more money should be spent on schemes like cement-concreting of roads. On cement-concreting of roads we are spending nearly Rs. 60 lakhs and for asphalting 45·7 lakhs. It is no doubt true that by cement-concreting, roads last longer. I think cement-concreting lasts for a period of thirty years. It is nearly two to three times the cost of asphalting. The immediate necessity is greater for asphalting of roads, greater money and is needed for the development of rural and other communications with areas where irrigation

projects have been started and plantations have come up. When that is the crying need of the hour, I cannot understand the luxury of spending Rs. 60 lakhs on cement-concreting of roads, etc. Adequate attention has not been given even to local needs. For example, in Bangalore City, at Seshadripuram there is a gate at the crossing of the Railway lines. There are many representations for the construction of a bridge at this place. No attention has been given even though the Railway Board is prepared to meet one-third of the contribution.

So far as water supply in Bangalore is concerned, there is already a demand and I hope Government is going to take measures for the improvment of water supply in Bangalore.

In Kolar Gold Fields no adequate measures have been taken in spite of the repeated demand for the raising of the tank bund in Bethmangala Water Works and nothing has been done.

Next, I do not wish to repeat the critisim made in regard to the corruption existing in the P.W.D. It is no use trying to say that there is corruption. I wish the Minister concerned takes it as a personal challenge and root out corruption in the Department.

Further, let him recall the suggestion made with regard to the legislation for the registration of contractors as in the Electrical Department which is absolutely necessary. I do not know why there has been so much delay in this matter.

The next question to which I wish to refer is the question of proper checking in the P.W.D. It is very necessary because the person who checks is the person who executes. This is a very sad state of affairs.

The other thing which has been referred to here is about the difference between the revised estimate and the original estimate. The original estimates are drawn up in a hurry as soon as something appears in the papers or before the Assembly, without going into all the necessary details, and every time there is a revised estimate. I cannot understand why it should be changed in a technical department where they are supposed to have irrigation experts with several years experience. Such a thing should not happen. In America and elsewhere you find that when once a plan is drawn up the estimate is made to the last detail. I am told that in Thungabhadra, so far as roads are concerned, plans and estimates have not yet been drawn up.

Sri H. K. VEERANNA GOWDH.—It is not correct. There is a plan for the roads.

Sri M. C. NARASIMHAN—Since my time is short I do not wish to go into these details.

Next, I refer to the question of grants to the University. Though University is an autonomous body, since grants are being given I can refer to it. Certain developments that have taken place in the field of University education is a matter that must concern one and all of us. It is this. I do not know if sufficient thought has been bestowed by all concerned with regard to the three year degree course. What is sought to be attempted is a reform where two major subjects and one minor subject are to be taught. By this process Honours' course is sought to be abolished and we will not have the benefit of Honours' course since the person taking the Honours course is not there. With two major subjects and one minor subject it may not be possible for a person to achieve the required efficiency in the three-year degree course. It must be one minor subject and one major subject or two minor subjects and one major subject. That would conduce to attain certain standards. Otherwise it will land us into very serious situations.

One more thing with regard to P. W. D. I wish to say. It is learnt that the Hyderabad Section of the Road Transport. employees has made certain representations to the P.W.D. Minister that the agreement between the Hyderabad and the employees concerned has not been implemented.

Sri H., K. VEERANNA GOWDH.—Agreement about what ?

Sri M. C. NARASIMHAN.—Agreement about certain conditions of employment, re-instatement of certain employees and to see that there

(SRI M. C. NARASIMHAN)

is no retrenchment, etc. That has not been adhered to. I submit this is a matter to be set right as early as possible by the concerned Hon'ble Minister.

Sri H. M. CHANNABASAPPA (Krishnarajanagar).–Does he mean that there will be sharing of losses as well as profits by the workers of the Transport Department ?

Sri M. C. NARASIMHAN.—The Hon'ble Member who is an ex-Minister must know that; so far as the conditions of the road transport workers to day are concerned, they are getting below the minimum wage. Even if there are losses, it is the bounden duty of the Government to give them living wages.

Mr. SPEAKER.—The Hon'ble Member is an ex-Minister and as such he knows what it is. He only wanted to know whether the Hon'ble Member Sri Narasimhan knows it.

ಶ್ರೀ ಸಿ. ಟಿ. ಹನುಮಯ್ಯ (ಚಳ್ಳಕೆರೆ).—ಸ್ವಾಮಿ, ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರದವರು ನಮ್ಮ ಮುಂದಿಟ್ಟಿರತಕ್ಕ ಡಿಮ್ಯಾಂಡ್‌ಗಳನ್ನು ಅನುಮೋದಿಸುತ್ತ ನಾನೀಗ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ತಿರುಗಾಡಲು ಸರಿಯಾದ ರಸ್ತೆಗಳಿರುವುದಿಲ್ಲ. ಹೀಗಾಗಿ ಜನ- ಜಾನುವಾರುಗಳ ಸಂಚಾರಣೆಗೆ ತುಂಬ ತೊಂದರೆಯುಂಟಾಗಿದೆ. ಅನೇಕ ಕಡೆಗಳಲ್ಲಿ ಗಾಡಿಗಳು ತಿರುಗಾಡುವುದಕ್ಕೆ ಅವಕಾಶವಿಲ್ಲ. ಸಾಮಾನುಗಳ ಸಾಗಾಣಿಕೆಗೂ ತುಂಬ ತೊಂದರೆಯಿದೆ. ಈ ಹೊತ್ತಿನವರೆಗೂ ಸರ್ಕಾರದವರ ಕಡೆಯಿಂದ ಜಿಲ್ಲಾ ಬೋರ್ಡ್ ಆಕ್ಟಿನ ಪ್ರಕಾರ ಶೇಕಡ ಆರುಕಾಲು ಮತ್ತು 12½ವರೆ ಪರ್ಸೆಂಟ ದುಡ್ಡನ್ನು ಸರ್ಕಾರದವರಿಂದ ವಸೂಲ್ಮಾಡಿಕೊಂಡು ತಮ್ಮ ಕಡೆಗೆ ಜಮಾ ಮಾಡಿಕೊಳ್ಳಲಾಗುತ್ತಿದೆ. ಆದರೆ ರಸ್ತೆಗಳು ಮಾತ್ರ ಆಗುತ್ತಿಲ್ಲ. ಆದ್ದರಿಂದ ಸರ್ಕಾರದವರು ಗ್ರಾಮಾಂತರ ಪ್ರದೇಶಗಳ ಸಂಚಾರ ಸೌಲಭ್ಯಗಳ ಕಡೆಗೆ ಹೆಚ್ಚಿನ ಗಮನ ಕೊಡಬೇಕಾದ್ದು ಅವರ ಆದ್ಯ ಕರ್ತವ್ಯವೆಂದು ಸೂಚಿಸಲಿಚ್ಛಿಸುತ್ತೇನೆ. ಈ ದಿವಸ ನಮ್ಮ ಚಳ್ಳಕೆರೆ ತಾಲ್ಲೂಕಿನಲ್ಲಿ ಮೈಲೇ ಹಳ್ಳಿ—ಓಬಳಾಪುರ—ಜಾಜೂರು ಇತ್ಯಾದಿ ಸ್ಥಳಗಳಲ್ಲಿ ಸೇತುವೆಗಳಾಗ ಬೇಕಾಗಿದೆ. ಈ ದಿವಸ ಆ ಸೇತುವೆಗಳಿಲ್ಲದಿರುವುವರಿಂದ ಓಬಳಾಪುರ—ಜಾಜೂರು ಇವು ಒಂದಕ್ಕೊಂದು ದ್ವೀಪಾಂತರ ಗ್ರಾಮಗಳಿದ್ದಂತಿವೆ. ಅಲ್ಲಿ ಈ ದಿವಸ ಬರಿ ಗಂಡಸರು ಮಾತ್ರ ಓಡಾಡಬಹುದೇ ಹೊರತು ಹೆಂಗಸರು ಓಡಾಡುವಂತೆಯೇ ಇಲ್ಲ. ಒಂದು ವೇಳೆ ಗಂಡ ಹೆಂಡತಿ ಇಬ್ಬರೂ ಆ ಮಾರ್ಗದಲ್ಲಿ ಪ್ರಯಾಣ ಮಾಡಬೇಕಾದ ಪ್ರಸಂಗ ಬಂದರೆ ಹೆಂಡತಿಯನ್ನು ಈಚೆಯ ದಡದಲ್ಲೇ ಬಿಟ್ಟು ಗಂಡಮಾತ್ರ ಆಚೆಯ ಕಡೆಗೆ ಹೋಗುವಂಥ ಪ್ರಸಂಗವಿದೆ. ಆದ್ದರಿಂದ ಇಂಥ ಸ್ಥಳಗಳಿಗೆ ಮಾತ್ರ ಮಂತ್ರಿಗಳು ಭೇಟಿ ಕೊಟ್ಟರೆ ಚೆನ್ನಾಗಿರುತ್ತದೆ. ಆ ರೀತಿ ಮಾಡಬೇಕೆಂದು ಅವರನ್ನು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಾನು ಸರ್ಕಾರದವರಲ್ಲಿ ಮುಖ್ಯವಾಗಿ ಪ್ರಾರ್ಥಿಸಿಕೊಳ್ಳ ಬೇಕಾಗಿರುವುದೇನೆಂದರೆ ಓಬಳಾಪುರ ಜಾಜೂರು ಬಳಿ ಸೇತುವೆಗಳನ್ನು ಕಲ್ಪಿಸತಕ್ಕದ್ದು ಅತ್ಯಗತ್ಯ ಎಂದು ತಿಳಿಸುತ್ತೇನೆ.

ಇನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಕಾಂಗಾರಿಗಳ ಬಗ್ಗೆ ಟೆಂಡರುಗಳನ್ನು ಕರೆಯುತ್ತಿರುವ ವಿಚಾರದಲ್ಲಿ ಎರಡುಮಾತುಗಳನ್ನು ಹೇಳಬೇಕಾಗಿದೆ. ಆದರೆ ಇದರಲ್ಲಿ ಅತಿ ಮುಖ್ಯವಾದ ಪ್ರಾಮುಖ್ಯತೆಯನ್ನು ಲೋಯಸ್ಟ್ ಟೆಂಡರಿಗೆ ತೋರಿಸಬೇಕೆಂದಿದೆ. ಆದರೆ ಈ ದವಸ ಕಾನೂನಿಗೆ ಬೆಲೆಯಿಲ್ಲ. ತಮಗೆ ಯಾರು ಬೇಕಾದವರು ಟೆಂಡರ್ ಹಾಕಿಕೊಂಡಿದ್ದಾರೋ ಅಂಥವರಿಗೆ ಮಾತ್ರ ಕೆಲಸಗಳು ದೊರೆಯುತ್ತಿವೆ. ನನಗೆ ತಿಳಿದಮಟ್ಟಿಗೂ ಈ ಹಿಂದೆ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಈ ಟೆಂಡರುಗಳ ವಿಚಾರದಲ್ಲಿ ಒಂದು ಸ್ಯಾಂಕ್ಟಿಟಿಯಿತ್ತು. ಆ ದಿವಸ ಹೈಯಸ್ಟ್ ಟೆಂಡರನ್ನು ಬಿಟ್ಟು ಲೋಯೆಸ್ಟ್ ಟೆಂಡರಿಗೆ ಮಾತ್ರ ಅವಕಾಶ ಕೊಡುತ್ತಿದರು, ಈಗ ಆರೀತಿ ಮಾಡುತ್ತಿಲ್ಲ. ಟೆಂಡರನ್ನು ಓಪನ್ ಮಾಡಿದನಂತರವೂ ಆಬಗ್ಗೆ ಯಾವ ತೀರ್ಮಾನವನ್ನೂ ತೆಗೆದುಕೊಳ್ಳುವುದಿಲ್ಲ. ತಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡಲು ಹೀಗೆಲ್ಲಾ ಅವಕಾಶ ಮಾಡಿಕೊಳ್ಳುತ್ತಿದ್ದಾರೆ. ಹೀಗೆಲ್ಲಾ ಮಾಡಬಾರದೆಂದು ಸರ್ಕಾರದವರು ಅವರಿಗೆ ಬಹಳ ಕಟುವಾದ ತಿಳಿವಳಿಕೆ ಕೊಡಬೇಕಾದುದು ಅತ್ಯವಶ್ಯಕ. ಇತ್ತೀಚೆಗೆ ಈ ಟೆಂಡರ್ಸ್‌ಗಳ ವಿಲೇವಾರಿ ಬಗ್ಗೆ ವಿಶೇಷ ದೂರುಗಳು ಬರುತ್ತಿರುವುದರಿಂದ ಸರ್ಕಾರದವರು ಇತ್ತಕಡೆಗೆ ತಮ್ಮ ಗಮನ ಕೊಡಬೇಕಾದದ್ದು ಅತಿ ಮುಖ್ಯವಾದಂಥ ವಿಚಾರ. ಈ ಬಾಬಿಗೆ ಸರ್ಕಾರದ ಮಂತ್ರಿಗಳು ಸೀರಿಯಸ್ ನೋಟೀಸ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಭದ್ರಾವತಿಪಕ್ಕದಲ್ಲಿ ಭದ್ರಾ ಚನಲ್ ಕಾಲುವೆಯನ್ನು ತೋಡಿಸಲಾಗುತ್ತಿದೆ. ಇದೇ ರೀತಿ ಸರ್ಕಾರದವರು ಅನೇಕ ಕಡೆಗಳಲ್ಲಿ ಕೆಲಸಗಳನ್ನು ನಡೆಸುತಿದ್ದಾರೆ, ಆದರೆ ಇಲ್ಲಿ ನಡೆಯಬೇಕಾದ ಕೆಲಸದ ಸಂಬಂಧವಾಗಿ ಅಲ್ಲಿಗೆ ಬರತಕ್ಕ ಕೂಲಿಗಾರರ ನೂರಾರು ಸಂಸಾರಗಳ ಬಗ್ಗೆ ಒಂದು ವಿಚಾರವನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ದಿವಸ ಆ ಛಾನಲ್ ಕೆಲಸಕ್ಕಾಗಿ ಅಲ್ಲಿಗೆ ಬಂದಿರತಕ್ಕ ನೂರಾರು ಸಂಸಾರಗಳೇನಿರುತ್ತವೋ ಅವುಗಳ ಸಂಸಾರದ ಪಾಡು ಆ ನಾಯಿ ನರಿಗಳಿಗೂ ಕೂಡ ಬೇಡವಾಗಿರುತ್ತದೆ. ಈ ದಿವಸ ಅಲ್ಲಿ ನಡೆಸುತ್ತಿರುವ ಕೆಲಸಕ್ಕಾಗಿ ಹೆಂಗಸರೂ ಗಂಡಸರೂ ಮಕ್ಕಳೂ ಇತ್ಯಾದಿ ಎಲ್ಲರೂ ಸೇರಿರುತ್ತಾರೆ. ಅವರೂ ಕೂಲಿಗಾರರೆ ಇರಬಹುದು. ಆದಾಗ್ಯೂ ನಮ್ಮಂತೆ ಅವರೂ ಸಹ ಮನುಷ್ಯವರ್ಗಕ್ಕೆ ಸೇರಿದವರಾಗಿದ್ದಾರೆ. ಅವರಿಗೂ ಸಹ ನಮಗಿರುವಂತೆ ಮಳೆ ಚಳಿ ಗಾಳಿ ಇತ್ಯಾದಿಗಳ ಉಪಟಳ ವಿರುತ್ತದೆ. ಈ ದಿವಸ ಆ ಜನರು ಅಲ್ಲಿ ವಾಸಿಸುತ್ತಿರುವುದನ್ನು ನೋಡಿದರೆ ಏನಪ್ಪಾ ಮಾನವ ವರ್ಗಕ್ಕೆ ಸೇರಿರತಕ್ಕ ನಮ್ಮ ಸರಿಸಮಾನ ಪ್ರಾಣವುಳ್ಳ ಜೀವಗಳ ಬಗ್ಗೆ ಈ ಹೊತ್ತು ನಾವು ಇಷ್ಟು ಕರುಣೆ ಇಲ್ಲದೆ ಅವರನ್ನು ನಾಯಿ ನರಿಗಳಷ್ಟು ಕೂಡ ಭಾವನೆ ಮಾಡದೆ ತಾತ್ಸಾರ ಮಾಡುತ್ತಿದ್ದೇವಲ್ಲಾ ಎಂಬುದು ಎದ್ದು ಕಾಣುತ್ತದೆ. ಅವರೇನೋ ಕೂಲಿಗಾರರೇ ಹೌದು ಆದರೆ ಅವರು ದೇಶದ ಒಂದು ಆಸ್ತಿ. ನಮ್ಮ ಸರಿಸಮಾನರಾಗಿರತಕ್ಕ ಮನುಷ್ಯರು ಅವರು ಕಷ್ಟಪಟ್ಟು ದೇಶಕ್ಕೆ ಆಸ್ತಿ ಸಂಪಾದನೆ ಮಾಡಿಕೊಡುತ್ತಿ

ದ್ದಾರೆ. ಆದ್ದರಿಂದ ಅವರು ದೇಶಕ್ಕೊಂದು ಆಸ್ತಿ ಇದ್ದ ಹಾಗೆ. ಹೀಗಿರುವಾಗ ಅವರು ಈ ಹೊತ್ತು ಅಲ್ಲಿ ಹರುಕು ಗುಡಿಸಿಲುಗಳಲ್ಲಿ ವಾಸಮಾಡುತ್ತಿದ್ದಾರೆ. ಮಳೆ ಗಾಳಿ ಚಳಿಗಳಲ್ಲಿ ಮೂರು ನಾಲ್ಕು ತಿಂಗಳ ಎಳೆ ಕೂಸುಗಳನ್ನು ಇಟ್ಟುಕೊಂಡು ಅವರು ವಾಸ ಮಾಡುತ್ತಿರುವುದನ್ನು ನೋಡಿದರೆ ಎಂಥವನಿಗಾದರೂ ಮನ ಕರಗದೆ ಇರಲಾರದು. ನಾವು ಮನುಷ್ಯಮಾತ್ರದವರಾದರೆ ಅವರನ್ನೂ ಅವರ ಮಕ್ಕಳು ಮರಿಗಳನ್ನೂ ನಮ್ಮ ಮಕ್ಕಳು ಕಾಡು ಮರಿಗಳಂತೆ ನೋಡ ಬೇಕಾದ್ದು ಧರ್ಮ. ಅವರನ್ನು ಪ್ರಾಣಿಗಳಂತೆ ಅಲಕ್ಷ್ಯ ಭಾವದಿಂದ ನೋಡುವುದನ್ನು ಕೂಡಲೆ ತಪ್ಪಿಸಬೇಕು. ಸರ್ಕಾರದವರು ಬೇಕಾಗಿದ್ದರೆ ಇಷ್ಟು ಬಾಡಿಗೆ ಕೊಡಿ ಎಂದು ಮಾಡಲಿ. ಅವರಿಗೆ ಸರಿಯಾದ ವಸತಿ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದವರು ತಕ್ಷಣ ಒಂದು ತೀರ್ಮಾನ ತೆಗೆದುಕೊಳ್ಳ ಬೇಕೆಂದು ನಾನು ಅವರಲ್ಲಿ ಬಹು ಸವಿನಯದಿಂದ ಅರಿಕೆ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri B. R. SUNTHANKAR (Belgaum City).—Mr. Speaker, Sir, at the outset, I would like to make a suggestion to the Hon'ble the Finance Minister. In this year's Budget, the revenue and capital budgets are mixed up. They are not shown separately. Capital expenditure is also shown under revenue. My suggestion is that the revenue and capital budgets should be shown separately. The present mixing up makes it impossible for us to form a correct judgement and to know whether we are making any progress or regress. I would, therefore, suggest that the Hon'ble the Finance Minister should at least from next year show the revenue and capital budgets separately.

Coming to the Demand on Civil Works, I have sent in a cut-motion regarding the Belgaum-Sadasivagad Road. The condition of roads and communications in this State, particularly in the Malnad tracts, is far from satisfactory and the Malnad areas, particularly from the Bombay area, suffer very much from lack of roads and communications. In the rainy season all the Malnad areas, particularly the interior of the Malnad areas are blocked to the outside world. They are cut off from the outside world on account of the heavy rains and flooded rivers over which there are no bridges. Take for instance, the Belgaum-Sadasivgad Road. It is about 100 miles long. It is the shortest road connecting Belgaum and Karwar Districts.

Mr. SPEAKER.—It is a State high way.

Sri B. R. SUNTHANKAR.—I do not think it is a State highway.

Mr. SPEAKER.—This question was once discussed and it was decided that it should be a State highway. I was on that committee.

Sri B. R. SUNTHANKAR.—Thank you, Sir. This road is in a very bad and dilapidated condition. It is not motorable throughout the year. This road is closed for traffic for nearly five months from June to October on account of heavy rains. Even the S.T. buses do not ply during tish time and according to my information it is not completely a metalled road throughout. The portion of this road for nearly 40 miles between Kumbarwada and Kadra is not at all metalled. Once upon a time, say about 30 or 40 years ago, perhaps it was a metalled road but at present it is not a metalled one

11. 30 A.M.

There are a number of rivers crossing the road and this makes it impossible to ply any vehicles on this road in the rainy season. This is especially so between Supa and Sadashivgad. A sum of Rs. 2 lakhs has been shown in the Budget for repairs of this road. I do not know how far this amount would be sufficient for repair of this road. This amount would be spent away only in spreading sand and murum on the road. So this amount is quite insufficient for the purpose. Plans and estimates for this road are ready. According to my information the estimate amounts to about Rs. 39 lakhs. The plans are ready in the Executive Engineer's Office, Karwar. So my suggestion is that this road should be taken up immediately and it should be made motorable throughout the year. This amount of Rs. 39 lakhs can be spent over a period of two to three years.

There are no good roads in the hilly tract on the western side of Belgaum and Khanapur talukas. There are some roads there belonging to the Forest Department. These roads are at present in the possession of the Local Board for maintenance. But

(SRI B. R. SUNTHANKAR)

these roads are neglected and are not maintained well by the District Local Board. The District Local Board, Belgaum, is notorious for neglecting the Marathi areas. That is our bitter experience for the last 25 years. So my submission is that Government should take over these forest roads from the Local Board and maintain them well.

Coming to approach roads, under the local development scheme and through the voluntary labour of the villagers a number of approach roads are construted every year in our taluka. These roads are not taken care of by any agency afterwards. The District Local Board is not willing to take over these roads and they are not maintained or repaired afterwards. The result is that the very next year these roads are washed away and the efforts of the people on building them and the money spent on them are wasted. Therefore, my suggestion is that a permanent machinery should be set up to maintain these roads in good condition.

With these words I resume my seat.

ಶ್ರೀ ಅಣ್ಣಾರಾವ್ ಗಣಮುಖಿ (ಅಫ್‌ಜಲಪುರ) — ಅಧ್ಯಕ್ಷ ಮಹಾಶಯರೇ, ಈಗ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಯನ್ನು ನಾನು ಬೆಂಬಲಿಸುತ್ತಾ ಕೆಲವು ಸೂಚನೆಗಳನ್ನು ಈ ಇಲಾಖೆಗೆ ಕೊಡಬಯಸುತ್ತೇನೆ. ಮೊದಲನೆಯದಾಗಿ, ಮರಾಮತ್ತು ಶಾಖೆಗೆ ಇರುವ ಎರಡು ಕೈಗಳೆಂದರೆ-ಎಂಜಿನಿಯರುಗಳು ಮತ್ತು ಕಂಟ್ರಾಕ್ಟರುಗಳು ; ಈ ಎರಡು ಕೈಗಳ ಸಹಾಯದಿಂದ ಈ ಇಲಾಖೆಯ ಇಡೀ ವ್ಯವಹಾರ ನಡೆಯುತ್ತಿರುತ್ತದೆ. ಇದರಲ್ಲಿ, ಇಂಜಿನಿಯರುಗಳೆಂದರೆ ತಜ್ಞರು, experts ಎಂದು ಭಾವಿಸಲ್ಪಡುವವರು, ಕಂಟ್ರಾಕ್ಟರುಗಳು ಕೆಲಸಮಾಡತಕ್ಕವರು. ತಜ್ಞರೆಂದರೆ ಯಾರೆಂದು ಕೆಲವು ವೇಳೆ ಹೇಳಿದ್ದಾರೆ— one who knows more and more about less and less ಎಂದು. ಅದಕ್ಕಾಗಿಯೇ ಯಾವುದಾದರೊಂದು ಕೆಲಸ ಕೈ ಕೊಳ್ಳಬೇಕಾದರೂ ಆ ಕೆಲಸ ಯಾವ ಪ್ರಕಾರ ಎಸ್ಟಿಮೇಟ್ ಆಗಿದೆ, ಕೆಲಸ ಹೇಗೆ ನಡೆಯಬೇಕಾಗಿದೆ ಎಂಬುವುಗಳ ಬಗ್ಗೆ ಈ ತಜ್ಞರಿಲ್ಲದೆ ಮಂತ್ರಿಗಳಿಗೆ ಅರಿವಾಗುವುದಿಲ್ಲ. ಆದ್ದರಿಂದ ತಜ್ಞರೇನು ಹೇಳುತ್ತಾರೆಯೋ ಅದನ್ನು ಮಂತ್ರಿಗಳು ಸಾಮಾನ್ಯವಾಗಿ ಕೇಳಲೇಬೇಕಾಗುತ್ತದೆ. ತನ್ನ ಕೈಕೆಳಗಿನ expert ಏನು ಹೇಳುತ್ತಾನೋ ಆ ಪ್ರಕಾರವೇ ಹೇಳಬೇಕಾಗುತ್ತದೆಯೇ ವಿನಾ ಸ್ವತಃ ತಾನು ಬೇರೆಹೇಳುವ ಹಾಗಿಲ್ಲ. ಹೀಗಾಗಿ Laymen ಗಳನ್ನೊಳಗೊಂಡ ಸರ್ಕಾರ ಇಂಥ expert ಗಳಮೂಲಕ ಅಧಿಕಾರ ನಡೆಸತಕ್ಕ ಸಮಸ್ಯೆ ನಮ್ಮ ಮುಂದಿದೆ. ಮಂತ್ರಿಗಳು ಎಲ್ಲ ವಿಷಯಗಳನ್ನೂ ತಿಳಿದು ಕೊಂಡು ತಜ್ಞರಾಗಿರುವುದಕ್ಕೂ ಸಾಧ್ಯವಿಲ್ಲ. ಇಂಥ ಸನ್ನಿವೇಶದಲ್ಲಿ ಈ ಇಲಾಖೆಯ ಕೆಲಸ ನಡೆಯಬೇಕಾಗಿದೆ. ನಾವಿಲ್ಲಿ ಸದಸ್ಯರುಗಳು ಯಾವ ಯಾವ ಸಲಹೆಗಳನ್ನು ಕೊಡುತ್ತೇವೆಯೋ ಅದೆಲ್ಲವೂ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಮೂಲಕ ನಡೆಯಬೇಕಾಗಿದೆ. ಆದ್ದರಿಂದ ನಮ್ಮ ಸಲಹೆಗಳಿಂದ ಏನಾದರೂ ಪ್ರಯೋಜನ ಲಭಿಸಬೇಕಾದರೆ ಈ ಇಲಾಖೆಯಲ್ಲಿ ಮೂರು ಗುಣಗಳು ಇರಬೇಕಾದದ್ದು ಬಹಳ ಅವಶ್ಯಕ. ಅವು efficiency, economy ಮತ್ತು expedition. ಯಾವ ಸರ್ಕಾರದ ಪ್ಲಾನಿಂಗ್ ಇಲಾಖೆಯಲ್ಲಿ ಈ ಮೂರು ಗುಣಗಳಿಲ್ಲವೊ ಆ ಸರ್ಕಾರ ದಿವಾಳಿಯಾಗುತ್ತದೆ. ಎಲ್ಲಾ ಇಂಜಿನಿಯರುಗಳೂ ಒಂದೇ ರೀತಿಯಿರುತ್ತಾರೆಂದು ಭಾವಿಸುವುದಕ್ಕಾಗುವುದಿಲ್ಲ. ಇಂಜಿನಿಯರುಗಳೂ ಕಂಟ್ರಾಕ್ಟರುಗಳೂ ಒಂದಾದರೆ ಸರ್ಕಾರದ ಹಣ, ಇಲಿ ಬೆಕ್ಕಿನ ಸ್ನೇಹದಲ್ಲಿ ಪೂರ್ತಿಯಾಗುತ್ತದೆ. ಇಲಾಖೆಯ ಕೆಲಸ ಕೆಟ್ಟುಹೋಗುತ್ತದೆ. ಇದಕ್ಕೆ ಅವಕಾಶ ಹೇಗಿರುತ್ತದೆಂಬದನ್ನು ಆಡಿಟ್ ರಿಪೋರ್ಟ್‌ಗಳನ್ನು ಕೆಲವನ್ನು ನೋಡಿದರೆ ಗೊತ್ತಾಗುತ್ತದೆ. ಯಾವುದಕ್ಕೆ ಅಂದಾಜು ತಯಾರು ಮಾಡಬೇಕಾದರೂ ಮೊದಲು ಇಂಜಿನಿಯರುಗಳು abstract estimate ಎಂದು ತಯಾರು ಮಾಡುತ್ತಾರೆ. ಅದರಲ್ಲಿ ವಿವರಗಳೇನೂ ಇರುವುದಿಲ್ಲ. ಟೆಂಡರ್ ರೇಟುಗಳೇನೆಂಬುದನ್ನೂ ಸಹ ಐಟಂವಾರು ಕೊಟ್ಟಿರುವುದಿಲ್ಲ. ಇದರಿಂದ ದಿವಸಗಳು ಎಳೆದಂತೆಲ್ಲಾ ಟೆಂಡರು ದರಗಳನ್ನೂ ಹೆಚ್ಚು ಕಡಮೆ ಮಾಡಲು ಅವಕಾಶವಾಗುತ್ತದೆ. ಕಂಟ್ರಾಕ್ಟರುಗಳಿಗೆ ಲಾಭ ಕೊಡಿಸಿಕೊಡಲು ಇದೊಂದು ಸುಲಭವಾದ ಮಾರ್ಗ. ಆದ್ದರಿಂದ ಕೆಲಸದಲ್ಲಿ efficiency ಇರಬೇಕೆಂಬದರ ಅವಶ್ಯಕತೆಯನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯ ವಿಷಯದಲ್ಲಿ expert ಆಗಿರದೆ ಇದ್ದರೂ, ಒಬ್ಬ layman ಹೇಳುವ ಮಾತುಗಳನ್ನಾದರೂ ತಿಳಿದುಕೊಂಡು ಅಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸುವಷ್ಟು ಶಕ್ತನಾಗಿರಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಈ ಇಲಾಖೆಯಲ್ಲಿ ಈಗ ಯಾವರೀತಿ ಕೆಲಸ ನಡೆಯುತ್ತಿರುತ್ತದೆಂದು ಹೇಳುತ್ತೇನೆ. ತುಂಗಭದ್ರ ಪ್ರಾಜೆಕ್ಟ್‌ನಲ್ಲಿ ಅಣೆಕಟ್ಟಿನ ಕೆಲಸ ನಡೆದು ನೀರು ಬರುವಹೊತ್ತಿಗೆ ನಾಲೆಯ ಕೆಲಸವೇ ಷುರುವಾಗಿರಲಿಲ್ಲ. ನಾಲೆಯಿಲ್ಲದೆ, ಅಣೆಯ ಮೇಲೆ ನೀರು ಬಂದು ನಿಂತಿತು. ಆಮೇಲೆ ನಾಲೆಯನ್ನು ತೆಗೆದುಕೊಂಡು ಮುಗಿಸುವ ಹೊತ್ತಿಗೆ ನೋಡಿದರೆ ಮುಂದಕ್ಕೆ ಫೀಡರ್ ಚಾನಲ್‌ಗಳಿರಲಿಲ್ಲ. ಹೀಗೆ ಒಂದಕ್ಕೊಂದು ತಡವಾಗುತ್ತಿರುವುದನ್ನು ನೋಡಿಕೊಂಡರೆ, ನಮಗಾಗಿರುವ ಖರ್ಚು ಬರುತ್ತಿರುವ ಆದಾಯ ಒಂದಕ್ಕೊಂದಕ್ಕೆ ಹೋಲಿಕೆಯಿಲ್ಲದಂತಾಗಿರುತ್ತದೆ. ತಜ್ಞರೇನೋ 3% return ಬರುತ್ತದೆಂದು ಹೇಳಿ ಬಿಟ್ಟಿರುತ್ತಾರೆ- ಆದರೆ ಕೆಲಸ ನಡೆಸುವುದರಲ್ಲಿರುವ ಇಂಥ ನ್ಯೂನತೆಗಳಿಂದ, ನಮ್ಮ ನಿರೀಕ್ಷೆಯಂತೆ ಪ್ರತಿಫಲಬರುವುದಿಲ್ಲ. ಇತ್ತ ಸಾಲ ಬೇರೆ ಹೆಚ್ಚುತ್ತಿರುತ್ತದೆ. ಸಿಂಕಿಂಗ್ ಫಂಡ್ ಕೂಡ ಹೆಚ್ಚುತ್ತದೆ. ಆದ್ದರಿಂದ State finance ಸುಭದ್ರವಾಗಿರ ಬೇಕಾದರೆ ಆದಷ್ಟು ಮಟ್ಟಿಗೆ ಆಡಳಿತದಲ್ಲಿ efficiency and economy ಇರಬೇಕು.

ಈ ದೃಷ್ಟಿಯಿಂದ ನಾನು ಒಂದೆರಡು ಸಲಹೆಯನ್ನು ಕೊಡಬಯಸುತ್ತೇನೆ. ನಾವೀಗ ಮಾಡುತ್ತಿರುವಂತೆ ಕಂಟ್ರಾಕ್ಟರುಗಳನ್ನು ಬರೀ ರಿಜಿಸ್ಟರ್ ಮಾಡಿದರೆ ಆಗುವುದಿಲ್ಲ. ರಿಜಿಸ್ಟರ್ ಮಾಡಬೇಕಾದರೆ ಅವರೆಲ್ಲರೂ qualified ಆಗಿರುವವರೇ ಇರಬೇಕು. ಹೈದರಾಬಾದಿಗೆ ಸಂಬಂಧಪಟ್ಟಹಾಗೆ ಇನ್ನೊಂದು ಸೂಚನೆ ಕೊಡುತ್ತೇನೆ. ಅಲ್ಲಿ ಬಿಲ್ಡಿಂಗ್ ಕೋ-ಆಪರೇಟೀವ್ಸ್ ಎಂದು ಮಾಡಿಕೊಂಡಿರುತ್ತಾರೆ. ಇಂಜಿನಿಯರು

ಗಳು ಕಂಟ್ರಾಕ್ಟರುಗಳು, ಕೆಲಸ ಮಾಡಿಸತಕ್ಕವರು (ರಿಜಿಸ್ಟ್ರಾರರು) ಅದರಲ್ಲಿ ಸೇರಿರುತ್ತಾರೆ. ಇಂಥ ಕೋ-ಆಪರೇಟಿವ್‌ಗಳು ಕೆಲಸಮಾಡುತ್ತಿರುವುದಕ್ಕೂ ಬೇರೆಯವರು ಮಾಡುತ್ತಿರುವುದಕ್ಕೂ ಎಷ್ಟೋ ವ್ಯತ್ಯಾಸವಿದೆ. ಬಹಳ ಉತ್ತಮವಾದ ಕೆಲಸ ಮಾಡುತ್ತಿದ್ದಾರೆ ಅವರು. ಎಲ್ಲ ಕಡೆಯಲ್ಲೂ ಇಂಥ ಕೋ-ಆಪರೇಟಿವ್ಸ್‌ನ್ನು ತೆಗೆದರೆ ಕೂಲಿಗಾರರಿಗೂ un-employed ಆಗಿರತಕ್ಕ ಜನರಿಗೂ ಎಷ್ಟೋ ಕೆಲಸ ಸಿಕ್ಕುವಂತಾಗಿ ದೇಶದಲ್ಲಿ ಸೋಷಿಯಲಿಸ್ಟ್ ಪ್ಯಾಟರ್ನ್ ಸಮಾಜ ಬರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಇದೂ ಅಲ್ಲದೆ ಸಣ್ಣ ಸಣ್ಣ ಕೆಲಸಗಳನ್ನು ಮಾಡುವಾಗಲೂ ಕೂಡ ನಮಗೆ ಅನುಭವ ಇದೆ. ಶಾಲೆಯ ಕಟ್ಟಡ 10 ಸಾವಿರ ರೂಪಾಯಿ ಅಂದಾಜು ಆದರೆ 30 ಸಾವಿರ ರೂಪಾಯಿಗಳ ಅಂದಾಜು ಹಾಕಿ ಕಟ್ಟಡ ಕಟ್ಟಿರುತ್ತಾರೆ. ಹಳ್ಳಿ ಶಾಲೆ ಕಟ್ಟುವಾಗ ಪಿ. ಡಬ್ಲ್ಯು. ಡಿ. ಅವರಿಗೆ ಕೊಟ್ಟರೆ ಕೆಲಸ ಏನೇನೂ ನಡೆಯುವುದಿಲ್ಲ ಮತ್ತು ಕ್ವಾಲಿಟಿ ಕೂಡ ಬಹಳ ಕಡಿಮೆ, ಕಟ್ಟಿದ ಮೂರು ವರ್ಷದಲ್ಲೇ ಕಟ್ಟಡ ಬಿದ್ದು ಹೋಗುತ್ತದೆ. ಈ ರೀತಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಕಟ್ಟಿದರೆ ಅದು ತಪ್ಪಾಗುತ್ತದೆ. ಇದಕ್ಕೆ ಬದಲಾಗಿ ಹಳ್ಳಿಗಳಲ್ಲಿ ವಿಲೇಜ್ ರೆಪ್ರಸೆಂಟಿಟಿವ್ಸ್ ಕಡೆಯಿಂದ ಕೆಲಸ ಮಾಡಿಸಿದರೆ ಉತ್ತಮವಾಗುತ್ತದೆ. ಬೀದರ್ ಜಿಲ್ಲೆಯೊಳಗೆ ಶಾಲಾ ಕಟ್ಟಡಗಳನ್ನು ಕಟ್ಟಿದ್ದಾರೆ. 10-12 ಸಾವಿರ ರೂಪಾಯಿ ಖರ್ಚುಮಾಡಿ 30 ಸಾವಿರ ಬೆಲೆ ಬಾಳುವಂಥ ಕಟ್ಟಡ ಕಟ್ಟಿರುತ್ತಾರೆ. ಇಂತಹ ಕೆಲಸಗಳನ್ನು ವಿಲೇಜ್ ರೆಪ್ರಸಂಟೇಟೀವ್ಸ್‌ನ್ನು ಬಿಟ್ಟು ಬೇರೆ ಕಡೆ ಮಾಡಿಸಬಾರದು.

ಇನ್ನೊಂದು ವಿಷಯ, ನನ್ನ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ನನ್ನ ಅನುಭವಕ್ಕೆ ಬಂದಿರುವುದನ್ನು ಹೇಳಬೇಕಾಗಿದೆ. ಅಲ್ಲಿ ಒಂದು ರಸ್ತೆ ಹಾಕಲು ಒಂದು ಲಕ್ಷ ರೂಪಾಯಿ ಕೊಟ್ಟಿದ್ದರು. ಮಂತ್ರಿಗಳು ಹೋಗಿ ನೋಡಿಕೊಂಡು ಬಂದಿದ್ದಾರೆ. ಕಲೆಕ್ಟರರಿಂದ ವರದಿ ತರಿಸಬೇಕೆಂದು ಹೇಳುತ್ತೇನೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರ ಜೊತೆಗೆ ವಿಲೇಜ್ ಕಮಿಟಿ ಎಂದು ಒಂದು ಕಮಿಟಿ ಇದೆ. ಅದರಲ್ಲಿ ಎಲ್ಲರೂ ಹಳ್ಳಿಯವರೇ ಇದ್ದಾರೆ. ಹಳ್ಳಿಯವರೇ ಕೆಲಸ ಮಾಡಿಸುತ್ತಾರೆ. ಕೆಲಸ ಮಾಡಿಸುವಾಗ ಎರಡು ರೇಟ್ಸ್ ಇವೆ. ಒಂದು ರೂ. 1-2-0, ಇನ್ನೊಂದು ರೂ. 0-14-0. ಒಂದು ರೂಪಾಯಿ ಎರಡು ಆಣೆಗೆ ಒಂದು ರೂಪಾಯಿ ಕೊಡತ್ತಾ ಇದ್ದರು. ಈ ಪ್ರಕಾರ ರೊಕ್ಕ ಕಿಸೆಗೆ ಹಾಕುತ್ತಾರೆ ಎಂದು ಕಲೆಕ್ಟರಿಗೆ ದೂರು ಕೊಟ್ಟು ಕಲೆಕ್ಟರರನ್ನೂ ಕರೆದುಕೊಂಡು ಹೋಗಿದ್ದೆ. ಆಗ ಅವರು ಆದನ್ನು ಸರಿಪಡಿಸಿದರು. ಈ ಪ್ರಕಾರ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಬೇಜವಾಬ್ದಾರಿ ಜನರಾಗಿ, ಕೆಲಸ ಮಾಡುತ್ತಾ ಯಾರ ಯಾರ ಕಿಸೆಗೆ ಎಷ್ಟೆಷ್ಟು ಹಾಕುತ್ತಾರೋ ಗೊತ್ತಾಗುವುದಿಲ್ಲ. ಅದಕ್ಕೇ ಈ ಡಿಪಾರ್ಟ್‌ಮೆಂಟಿನಲ್ಲಿ ಆದಷ್ಟು ಹೆಚ್ಚು ಸುಧಾರಣೆಯಾಗ ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಹೆಚ್ಚು ಸೂಪರ್‌ವಿಜನ್ ಇರಲಿಕ್ಕೆ ಬೇಕು. ಈಗ ಯಾವ ರೀತಿ ಕೆಲಸ ನಡೆಯುತ್ತಿದೆಯೋ ಇದೇ ಪ್ರಕಾರ ಕೆಲಸ ನಡೆದರೆ ನನಗಂತೂ ಬಹಳ ವಿಷಾದ ಎನಿಸುತ್ತದೆ. ಆದ್ದರಿಂದ ಹೆಚ್ಚು ಸೂಪರ್‌ವಿಜನ್ ಇರಬೇಕು ಮತ್ತು ಯಾರೇ ಕೆಲಸ ಮಾಡಲಿ ಯಾರು ದುಡಿಯುತ್ತರೋ ಅವರಿಗೆ ತಕ್ಕ ಪ್ರತಿಫಲ ಕೊಟ್ಟರೆ ಉತ್ತಮವಾಗುತ್ತದೆ.

ನನ್ನ ಒಂದು ಕ್ಷೇತ್ರ ಏನಿದೆ ಅದರಲ್ಲಿ ಒಂದು ರಸ್ತೆ ಇದೆ. ಆ ರಸ್ತೆಯಮೇಲೆ ಇಲ್ಲಿಯವರೆಗೂ ಸರ್ಕಾರಿ ಬಸ್ ಸರ್ವೀಸು ಓಡಾಡುತ್ತಿಲ್ಲ. ಕಾರಣವೇನೆಂದರೆ ಅಲ್ಲಿ ಒಬ್ಬ ಖಾಸಗಿ ಬಸ್ಸು ನಡೆಸುತ್ತಾನೆ. ಅಲ್ಲಿ ಅವನಿಗೆ ಬಹಳ ಆಸಕ್ತಿ ಇದೆ, ಇನ್‌ಫ್ಲುಯನ್ಸ್ (influence) ಇದ್ದವರ ಸಹಾಯ ತೆಗೆದುಕೊಂಡು ಮಂತ್ರಿಗಳವರೆಗೂ ಬಂದು ಕೆಲಸ ತೆಗೆಯುತ್ತಾರೆ. ಅವನ ದೆಸೆಯಿಂದ ಬಸ್ ನಡೆಸಲಿಕ್ಕೆ ಅಪ್ಪಣೆ ಕೊಟ್ಟಿದ್ದಾರೆ. ಒಂದು ಬೆಕ್ಕು ತಾನು ಹಾಲು ಕುಡಿಯುವ ದೆಸೆಯಿಂದ ಗಡಿಗೆ ಹಾಲೆಲ್ಲಾ ಚೆಲ್ಲಿತು ಎನ್ನುವ ಹಾಗೆ ಒಬ್ಬ ವ್ಯಕ್ತಿಯ ದೆಸೆಯಿಂದ ಜನತೆಗೆ ಹಾನಿ ಮಾಡತಕ್ಕದ್ದು ಎಂದರೆ ಖಂಡಿತ ಸಮತವಾದ ಸಮಾಜರಚನೆ ಮಾಡಲಿಕ್ಕೆ ಸಾಧ್ಯವಿಲ್ಲ. ಈ ಕಡೆಗೆ ಸರ್ಕಾರದವರು ಗಮನ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಇಷ್ಟು ಹೇಳಿ ರೋಡ್ ಟ್ರಾನ್ಸ್‌ಪೋರ್ಟ್ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈಗ ಸೆಂಟ್ರಲ್ ರೋಡ್ ಫಂಡ್ ಎಂದು ಇದೆ; ಮೋಟಾರ್ ವೆಹಿಕಲ್ಸ್ ಟ್ಯಾಕ್ಸು ಇದೆ, ಪೆಟ್ರೋಲ್ ಟ್ಯಾಕ್ಸು ಇದೆ. ನನ್ನ ಸೂಚನೆ ಏನೆಂದರೆ ಪೆಟ್ರೋಲ್ ಟ್ಯಾಕ್ಸ್ ಎಷ್ಟು ಬರುತ್ತಾ ಇದೆಯೋ ಅದನ್ನು ಹಳ್ಳಿಗಳ ದೆಸೆಯಿಂದ ವಿಲೇಜ್ ರೋಡ್ ಫಂಡ್ ಒಂದು ಹೇಳಿ ಅದರಲ್ಲಿ ಮುಡುಪಾಗಿಡಬೇಕು, ಮತ್ತು ಮೇಂಟೆನೆನ್ಸ್‌ಗೆ, ನಿಮ್ಮ ರಸ್ತೆ ಫಂಡು ಇದೆ ಮತ್ತು ಕೇಂದ್ರ ಸರ್ಕಾರದವರು ಹೈವೇ ಮುಂತಾದುವುಗಳಿಗೆ ಬೇರೆಯಾಗಿ ಖರ್ಚುಮಾಡುತ್ತಾರೆ. ಹಳ್ಳಿಗಳ ರಸ್ತೆ ವಿಷಯದಲ್ಲಿ ಬಹಳ ಸಹಾನುಭೂತಿ ತೋರಿಸುತ್ತಾರೆ, ಆದರೆ ಪ್ರಯತ್ನ ಮಾಡುವುದಿಲ್ಲ. ಹಳ್ಳಿಯೊಳಗೆ ಮಳೆಗಾಲದಲ್ಲಂತೂ ರಸ್ತೆಗಳಿಲ್ಲದೆ ಅದರ ಕಷ್ಟ ಹೇಳತೀರದು ಎನ್ನುವುದಕ್ಕೆ ಒಂದು ಕಥೆ ಹೇಳುತ್ತೇನೆ. ಒಬ್ಬರು ಒಂದು ರೂಪಾಯಿ ಕೂಲಿ ಗೊತ್ತುಮಾಡಿ ಒಬ್ಬ ಹಮಾಲನ ಹತ್ತಿರ ಸಾಮಾನು ತರಲಿಕ್ಕೆ ಹೇಳಿ ಹೊರಟರು, ಅರ್ಧದಾರಿ ಹೋಗುವುದರೊಳಗೆ ಸಾಮಾನಿನ ಭಾರ ಹೆಚ್ಚಿದ್ದೂ ಅಲ್ಲದೆ, ಮಣ್ಣಿನೊಳಗೆ ಕಾಲು ಹೂತುಕೊಂಡು ಮುಂದೆ ನಡೆಯುವುದಕ್ಕೆ ಆಗದೆ ತಿರುಗಿ ಮನೆಗೆ ಬಂದನು. ಹಾಗೆ ಹಾಕಿಸಿ Earth-work ಹಾಳಾಗಿ ಹೋಗುತ್ತದೆ. ಈ ರೀತಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟಾಗುತ್ತಿದೆ. ಇದಕ್ಕೆ ಹೆಚ್ಚು ಗಮನ ಕೊಟ್ಟು ಹಳ್ಳಿ ರಸ್ತೆಗಳನ್ನು ಮೆಟಲ್ ರಸ್ತೆ ಮತ್ತು ಕಾನ್‌ಕ್ರೀಟ್ ರಸ್ತೆಗಳನ್ನಾಗಿ ಮಾಡಬೇಕು. ಆ ರೀತಿ ಮಾಡಿದರೆ ಇನ್‌ವೆಸ್ಟ್ (invest) ಮಾಡಿದ ಹಣಕ್ಕೂ ಒಳ್ಳೆಯ ಪ್ರತಿಫಲ ಬರುತ್ತದೆ ಎಂದು ಹೇಳುತ್ತೇನೆ.

*Srimathi V. M. VASANTALATA (Kumta).—Sir, I now rise to support the Demands now before the House. I am concerned mainly with the development of roads in our district. The importance of repairing the existing roads and the construction of new roads, for which a budget provision of 1 crore. and 25 thousands has been set apart in this budget, cannot be over-emphasised. Communications play an important part in the economic and industrial development of the country. For raising economic standards it is necessary that

(SRIMATHI V. M. VASANTALATA)

a high priority should be given to the development of communications, next only to the problem of food.

Speaking about North Karnatak, it is very backward as regards road communication, more so, North Kanara, to which I have the privilege to belong. The peculiar lay-out and the geographical contour of the district, makes movement very tedious and tiresome. The tediousness is accentuated by the complete absence of railway communications in this District. To make the district economically sound, it is necessary that national highways and State highways wherever possible should be constructed and the existing roads in the districts should be improved. I am afraid the budget has not made sufficient provision for the improvement of the existing roads and for the construction of new ones in our area. Looking to the budget estimates, it appears that very few roads have been taken up though more provision has been made for old works and works already in progress. When the Hon'ble the Finance Minister and the P.W.D. Minister visited our area, they were acquainted with the backwardness of the district and several proposals were placed before them for the construction of new roads and improvement of the existing ones. But it is rather disappointing to note that none of these roads has been included, even though the estimates and plans are ready. But I find that in the budget certain lumpsum allotments have been made to the former Mysore area for works which have not been sanctioned.

Coming to the Kumta-Hubli road, it is a very important road, but the condition of this road is very bad and needs improvement. It is about 100 miles in length and there are certain bridges which are not undertaken as yet and some need immediate repairs. Looking at the provision made, a sum of Rs. 75,000 has been provided which is insufficient even to construct 3 or 4 miles of road. If this is a token grant, well, Sir, I have no objection. But, I would like to say, if only 3 or 4 miles of road is undertaken a year and if this is continued, it will take over 30 years to finish this road.

Coming to the District major roads of this place, there are certain important roads in the interior which are now under the management of the D.L.B. Looking to the meagre finances of the District Local Boards, they are not in a position to maintain these roads properly. Hence, I appeal to the Government that these should be taken over by the Government or that substantial grants be given to improve and maintain these roads immediately.

Now, about the Karwar-Bhatkal road. The Government of India proposed during the First Five-Year Plan, to construct a West Coast highway passing between Karwar and Bhatkal. There is a provision of 75 lakhs in the Budget Estimates. The construction of two bridges on the Karwar Bhatkal frontier road is not taken up as yet. The construction of bridge of Venkatapur is held up for some reason or other. Hence, the difficulties, either technical or fiscal, may be overcome and the work expedited. With these few remarks, I thank the Chair for giving me an opportunity to place these views before the House.

*ಶ್ರೀ ಎಂ. ಲಿಂಗೇಗೌಡ (ಕನಕಪುರ).—ಸ್ವಾಮಿ, ಈ ದಿವಸ ನಮ್ಮ ಮುಂದಿರುವ ಡಿಮ್ಯಾಂಡುಗಳಲ್ಲಿ ಅತಿ ಮುಖ್ಯವಾದುದು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಿಸಿದ್ದು. ಇದು ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ನೆರವಾಗತಕ್ಕ ಇಲಾಖೆ. ಇದರಲ್ಲಿ ಕೆರೆ, ಕಟ್ಟೆ, ರಸ್ತೆಗಳು ಮತ್ತು ಕಟ್ಟಡದ ಕೆಲಸಗಳು ಇವೆಲ್ಲ ಸಾಧಾರಣವಾಗಿ ಹಿಂದೆ ಯಾವ ರೀತಿ ನಡೆಯುತ್ತಿತ್ತೋ ಅದೇರೀತಿ ಇದೆ. ಈ ಕೆಲಸಗಳ ಸ್ವರೂಪ ಒಂದೇ. ನನ್ನ ಅಭಿಪ್ರಾಯದಲ್ಲಿ, ನಮಗೆ ಸ್ವರಾಜ್ಯ ಬಂದ ಮೇಲೆ, ಈ ಇಲಾಖೆಯಲ್ಲಿ ಅಥವ ಈ ಇಲಾಖೆಯ ಮುಖೇನ ನಡೆಯತಕ್ಕ ಕೆಲಸಗಳಲ್ಲಿ ಅಷ್ಟು ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲ. ಏಕೆಂದರೆ ಹಿಂದೆ ಯಾವ ಎಸ್ಟಿಮೇಟ್ ಮಾಡಲ, ಯಾವ ಕೆಲಸಮಾಡಲಿ, ಖಚಿತವಾದ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದರು, ಮತ್ತು ಕೆಲಸವೂ ಕೂಡ ಬಹಳ ಚೆನ್ನಾಗಿ ಆಗುತ್ತಿತ್ತು. ಸ್ವರಾಜ್ಯ ಬಂದಮೇಲೆ, ಪಾರ್ಟಿ ಸರ್ಕಾರದಿಂದ, ಅಧಿಕಾರಿಗಳಿಗೆ ಮೊದಲಿದ್ದ ಹಿಡಿತ ಕಂಟ್ರಾಕ್ಟರುಗಳ ಮೇಲೆ ಈಗ ಇಲ್ಲ. ಕಾರಣವೇನೆಂದರೆ, ಯಾಗಾರಿಗೆ ಯಾರಾರು ಬೇಕಾದವರು ಇರುತ್ತಾರೆಯೋ ಅವರುಗಳಿಗೆ ಕಂಟ್ರಾಕ್ಟುಗಳನ್ನು ಕೊಡಬೇಕು. ಅವರ ಮಾತು ಕೇಳದಿದ್ದರೆ ಬಿಲ್‌ಗಳು ವಾಪಸು ಬರುವುದಿಲ್ಲ. ದೇಶದ ಅಭಿವೃದ್ಧಿ ಕಾರ್ಯಕ್ಕೆ ಸ್ವರಾಜ್ಯ ಬರುವುದಕ್ಕೆ ಮೊದಲು ಎಷ್ಟು ಕೆಲಸಗಳನ್ನು ಮಾಡುತ್ತಿದ್ದರೋ ಅವು ಒಟ್ಟು ದೇಶದ, ಅಥವ ಒಂದು ತಾಲ್ಲೂಕಿನ ಅಭಿವೃದ್ಧಿಗೆ ಎಂದು ಹೇಳಬಹುದಾಗಿತ್ತು. ಈಚೆಗೆ ನೋಡುವುದಾದರೆ, ಪಾರ್ಟಿ

ಸದಸ್ಯರ ಕೆರೆ, ಕಟ್ಟೆ ಭಾವಿ ಇಂಥವುಗಳಿಗೆ ದುಡ್ಡು ವ್ಯಯವಾಗುತ್ತಿರುವುದು ಬೇಕಾದಷ್ಟು ನಮ್ಮ ಗಮನಕ್ಕೆ ಬಂದಿದೆ. Instances ಬೇಕಾದರೆ ಕೊಡುವುದಕ್ಕೆ ತಯಾರಿದ್ದೇನೆ. ಮೇಜರ್ ವರ್ಕ್ಸ್ ಬಿಟ್ಟು ಪಾರ್ಟಿ ಸದಸ್ಯರ ಅನುಕೂಲಕ್ಕೋಸ್ಕರ ದೇಶದ ಹಣ ಖರ್ಚುಮಾಡತಕ್ಕದ್ದು ಖಂಡಿತ ನ್ಯಾಯವೂ ಅಲ್ಲ, ಧರ್ಮವೂ ಅಲ್ಲ. ಈಗ ಹತ್ತು ವರ್ಷವಾಯಿತು, ಇನ್ನು ಮೇಲೆಯಾದರೂ ಈ ರೀತಿ ಮಾಡುವುದನ್ನು ನಿಲ್ಲಿಸಿಬಿಡಿ ದೇಶದ ಅಭಿವೃದ್ಧಿ ಕಾರ್ಯಕ್ಕೆ ದೇಶದ ಹಣವನ್ನು ಖರ್ಚುಮಾಡಿ ಮತ್ತು ಹೀಗೆ ಮಾಡಿದರೆ ಜನಗಳ ಮೇಲೆ ಹಾಕುತ್ತಿರತಕ್ಕ ಸುಂಕ, ತೆರಿಗೆ ಇವುಗಳ ಸದುಪಯೋಗವಾಗುತ್ತದೆ. ಇಲ್ಲದೆ ಇದ್ದರೆ, ಅದನ್ನು ದುರುಪಯೋಗಮಾಡಿದಹಾಗಾಗುತ್ತದೆ. ಈ ಸಂದರ್ಭದಲ್ಲಿ ನಾನು ಒಂದು instance ಕೊಡುತ್ತೇನೆ. ಕನಕಪುರ ತಾಲ್ಲೂಕಿನಲ್ಲಿ ಬೇಕುಪ್ಪೆ ಹತ್ತಿರ ಅರ್ಕಾವತಿ ನದಿಗೆ ಒಂದು ಸೇತುವೆಯನ್ನು ಕಟ್ಟಿಸಬೇಕೆಂದು ಇತ್ತೀಚೆಗೆ ತೀರ್ಮಾನ ತೆಗೆದುಕೊಂಡರು. ಈ ಕೆಲಸಕ್ಕೆ ಎರಡು ಸಲ ಟೆಂಡರ್ ಕರೆದಿದ್ದಾರೆ. ಆ ಟೆಂಡರುಗಳ ಪ್ರಕಾರ ಕೆಲಸ ನಡೆಸಿಲ್ಲ. ಈಗ ಮೂರನೆಯ ಸಲ ಟೆಂಡರ್ ಕರೆಯುತ್ತಾರೆಂದು ಖಚಿತವಾದ ವರ್ತಮಾನ ಗೊತ್ತಾಗಿದೆ. ಆ ವಿಷಯ ಬೇರೆ. ಸಾಮಾನ್ಯವಾಗಿ ಒಂದು ಅಂದಾಜನ್ನು ಕೂಲಂಕಷವಾಗಿ ಪರೀಕ್ಷೆಮಾಡದೆ, ನಿಖರವಾದ ತೀರ್ಮಾನಕ್ಕೆ ಬರದೆ, ಈ ಸೇತುವೆಗೆ ಅಸ್ತಿಭಾರ ಹಾಕುವ ಕಾರ್ಯಕ್ರಮವನ್ನು ಏಕೆ ಮಾಡಿದಿರಿ ? ಮೊದಲು ರಸ್ತೆಗಾಗಿ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳಿಗೆ ಆಗಿದ್ದ ಅಂದಾಜು ಮೊಬಲಗನ್ನು ಸೇತುವೆಗಾಗಿ ಮಾಡಿದ್ದ ನಾಲ್ಕು ಲಕ್ಷ ರೂಪಾಯಿನಲ್ಲಿ ಕಡಮೆಮಾಡಿದ್ದಾರೆ. ಮೊದಲು ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿನ ಅಂದಾಜನ್ನು ಮಂಜೂರುಮಾಡಿ, ಇದರಲ್ಲಿ ಇಪ್ಪತ್ತು ಸಾವಿರ ರೂಪಾಯಿಗಳನ್ನು ರಸ್ತೆಗಾಗಿ ಖರ್ಚುಮಾಡಿದರು, ಪಾರ್ಟಿ ಸದಸ್ಯರ ದಾಕ್ಷಿಣ್ಯದ ಮೇಲೆ, ಮಂಜೂರಾಗಿದ್ದ ರಸ್ತೆ ಕೆಲಸವನ್ನು cancel ಮಾಡಿದರು. ಇದರಿಂದ 20 ಸಾವಿರ ರೂಪಾಯಿಯನ್ನು ಮಣ್ಣಿಗೆ ಹಾಕಿ, ಅನಂತರ ಸೇತುವೆ ಕೆಲಸವನ್ನು ಮಂಜೂರ್ಮಾಡಿದರು. ಈಗ ಸೇತುವೆಯನ್ನು ಕಟ್ಟಿಸುವುದಕ್ಕೆ ಸರ್ಕಾರದಲ್ಲಿ ಹಣವಿಲ್ಲ. ಈ ಕೆಲಸ ಈ ವರ್ಷದಲ್ಲಾಗುತ್ತದೆ ಎಂದು ನಂಬಿಲ್ಲ. ಅಥವ ಇನ್ನು ಹತ್ತು ವರ್ಷಕ್ಕಾದರೂ ಆಗುತ್ತದೆ ಎಂದು ನಾನು ನಂಬುವುದಿಲ್ಲ. ಆದರೆ ರಸ್ತೆಗಾಗಿ ಮಂಜೂರಾಗಿದ್ದ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ರಸ್ತೆ ಕೆಲಸವನ್ನು ಮುಗಿಸಿ, ಜನಗಳಿಗೆ ತಿರುಗಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರೆ, ದೇಶದ ಹಣ ಸದುಪಯೋಗವಾಗುತ್ತಿತ್ತು. ಆದರೆ ಈ ಬಾಬಿನಲ್ಲಿ 20 ಸಾವಿರ ರೂಪಾಯಿ ನಷ್ಟವಾಗಿದೆ. ಸೇತುವೆಯ ಕೆಲಸವಾದರೂ ಆಗಿದ್ದರೆ, ಜನಗಳಿಗೆ ಕಷ್ಟ ಬರುತ್ತಿರಲಿಲ್ಲ. ಆ ಕಾರಣ ನಾನು ಮಂತ್ರಿಗಳಿಗೆ ಸಲಹೆ ಮಾಡುವುದೇನೆಂದರೆ, ಇನ್ನು ಮೇಲೆ ಯಾವುದಾದರೂ ತೀರ್ಮಾನ ತೆಗೆದುಕೊಳ್ಳುವುದಾದರೆ, ನಿಧಾನವಾದರೂ ಚಿಂತೆಯಿಲ್ಲ, ಒಂದೇಸಲ ಖಚಿತವಾದ ತೀರ್ಮಾನವನ್ನು ತೆಗೆದುಕೊಳ್ಳಿ, ಮತ್ತು ತೀರ್ಮಾನ ತೆಗೆದುಕೊಂಡ ಮೇಲೆ ಬದಲಾಯಿಸಬೇಡಿ. ಒಂದು ಸಲ ತೆಗೆದುಕೊಂಡ ತೀರ್ಮಾನವನ್ನು ಮತ್ತೆ ಬದಲಾಯಿಸುವುದರಿಂದ ದೇಶದ ಹಣ ದುರುಪಯೋಗವಾಗುತ್ತದೆ.

ದೇಶದಲ್ಲಿ ಆಹಾರಾಭಾವವನ್ನು ನೀಗುವುದಕ್ಕೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಬಹುಮಟ್ಟಿಗೆ ಸಹಾಯಮಾಡಿದರು. ಈ ಇಲಾಖೆಯಿಂದಲೇ ಹೆಚ್ಚು ನೀರಾವರಿ ಕೆಲಸಗಳಾಗಬೇಕು. ಅಮೆರಿಕ ದೇಶದಲ್ಲಿ ವ್ಯವಸಾಯಕ್ಕೆ ಮಳೆಯ ನೀರು ಶೇಕಡ 90 ಭಾಗ ಉಪಯೋಗವಾಗುತ್ತಿದೆ. ನಮ್ಮ ದೇಶದಲ್ಲಾದರೋ ಶೇಕಡ ಐದು ಭಾಗ ಮಾತ್ರ ಉಪಯೋಗವಾಗಿ ಉಳಿದ 95 ಭಾಗ waste ಆಗುತ್ತಿದೆ. ಅಂಥ ಕಾರ್ಯಗಳಿಗೆ ತಾವು ಹೆಚ್ಚಿಗೆ ಗಮನ ಕೊಡಬೇಕು. ನಮ್ಮ ಕನಕಪುರ ಕ್ಷೇತ್ರದ ವಿಷಯವನ್ನು ತಮ್ಮ ಗಮನಕ್ಕೆ ತರುವುದಾದರೆ, ಅದು ಗುಡ್ಡಗಾಡಿನ ಪ್ರದೇಶ. ನಮ್ಮ ತಾಲ್ಲೂಕಿನಲ್ಲಿ ಇರತಕ್ಕ ಎರಡು ಲಕ್ಷ ಎಕರೆ ಜಮೀನು ಪೈಕಿ ಒಂದು ಲಕ್ಷ ಎಕರೆಯಷ್ಟು ಕೂಡ, ತರಿ ಸಾಗುವಳಿ ಮಾಡುವುದಕ್ಕೆ ಅವಕಾಶವಿಲ್ಲ. ಭಾರಿ ಭಾರಿ ಕಟ್ಟೆಗಳನ್ನೂ, ಕೆರೆಗಳನ್ನೂ ನಿರ್ಮಾಣಮಾಡುವುದಕ್ಕೆ ಬದಲಾಗಿ, ಸಣ್ಣಸಣ್ಣ ಕೆರೆಗಳನ್ನು ನಿರ್ಮಾಣ ಮಾಡಬೇಕು ; ಒಂದು ತಾಲ್ಲೂಕಿನಲ್ಲಿ ಹತ್ತಾರುಕಡೆ ಕೆರೆಗಳನ್ನು ನಿರ್ಮಾಣಮಾಡಬೇಕು. ಹೀಗೆ ಮಾಡಿ ಎಲ್ಲ ಕಡೆಗಳಲ್ಲಿಯೂ ತರಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬೇಕು. ಈ ಕೆಲಸಕ್ಕೆ ಸ್ಪೆಷಲ್ಆಗಿ ತಾವು ಒಂದು ಕಮಿಟಿಯನ್ನು ಮಾಡಿ ಎಷ್ಟು ಕಡೆ ಕೆರೆಗಳನ್ನು ಕಟ್ಟಬಹುದು, ಎಲ್ಲಿ ಅಣ್ ಕಟ್ಟಬಹುದು ಎಂಬ ವಿಚಾರದಲ್ಲಿ ಆ ಕಮಿಟಿಯವರ ಅಭಿಪ್ರಾಯಗಳನ್ನು ಪಡೆಯಬೇಕು ಎಂದು ಕಟ್ ಮೋಷನ್‌ನಲ್ಲಿ ಸೂಚಿಸಿದ್ದೇನೆ. ಈ ರೀತಿಮಾಡುವುದು waste ಎಂದು ಕೆಲವರು ಹೇಳಬಹುದು. ಅದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ತಜ್ಞರ ಕಮಿಟಿಯನ್ನು ನೇಮಕ ಮಾಡಬೇಕು. ಇಂಥ ತಜ್ಞರನ್ನೊಳಗೊಂಡ ಸಮಿತಿಯನ್ನು ನೇಮಕಮಾಡುವುದರಿಂದ ನಿಜವಾಗಿಯೂ ದೇಶಕ್ಕೆ ಸಹಾಯಕವಾಗುತ್ತದೆ. ಈ ಕಮಿಟಿಯಲ್ಲಿ ನೇಮಕವಾಗುವವರು ಟೆಕ್ನಿಕಲ್ ಇಲಾಖೆಗಳಲ್ಲಿ ಅನುಭವಸ್ಥರಾದವರಾಗಿರಬೇಕು ಎಂದು ಹೇಳುತ್ತೇನೆ.

12 NOON

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಇರತಕ್ಕಂಥ ಬೇಡಿಕೆಗಳ ಮೇಲೆ ಮಾತನಾಡುತ್ತಾ ಸರ್ಕಾರದ ಗಮನಕ್ಕೆ ಕೆಲವು ಅಂಶಗಳನ್ನು ತರಬೇಕೆಂದು ನಿಂತಿದ್ದೇನೆ. ಮಾನ್ಯ ಮಂತ್ರಿಗಳಾದ ಶ್ರೀ ವೀರಣ್ಣಗೌಡರು ಈ ಇಲಾಖೆಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡ ಮೇಲೆ ಮೈಲಿಗಲ್ಲಿಗೆ ಜಾಂಡಿಸ್ ರೋಗ ಬಂದ ಹಾಗೆ ಇದೆ. ಎಷ್ಟು ದೂರ ಎಲ್ಲಿಗೆ ಬಂದಿದ್ದೇವೆ ಎಂಬುದು ಗೊತ್ತಾಗುವುದಿಲ್ಲ. ಆ ಕಲ್ಲಿಗೆ ಸುಣ್ಣ ಬಳೆದು ನಂಬರು ಬರೆಯದಿದ್ದ ಜನಗಳಿಗೆ ಅರ್ಥವಾಗುವುದಿಲ್ಲ. ಇದು International ಕಾನೂನು ಆಗಿದ್ದರೂ, ಮಾನ್ಯ ಮಂತ್ರಿಗಳು ಸ್ವಲ್ಪ ದೊಡ್ಡ ಮನಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಾಗದ ಪತ್ರಬರೆದು ಇದನ್ನು ತೆಗೆಸಿ ಮೊದಲು ಇದ್ದಂತೆ ಮಾಡಿ. ಉದಾಹರಣೆಗೆ ತುಮಕೂರಿನಿಂದ ಬೆಂಗಳೂರಿಗೆ ಬರುವಾಗ ಡಾಬಸಪೇಟೆ ಹತ್ತಿರ ಬಂದಾಗ ಯಾವ ಕಡೆಗೆ ತಿರುಗಬೇಕು ಎಂದು ಅನುಮಾನವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಈ ಮೈಲಿಗಲ್ಲಿಗೆ ಬಂದ ಖಾಯಿಲೆಯನ್ನು ವಾಸಿ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿಚಾರ ನಾವು ಸುಮ್ಮನೆ ಮಾತನಾಡುತ್ತೇವೆ. ಎಲ್ಲಿ ಎಕಾನಮಿ ಮಾಡಬಹುದು, ಎಲ್ಲಿ ದುಡ್ಡು ಉಳಿಸಬಹುದು ಎಂಬ ವಿಚಾರಗಳಲ್ಲಿ ಅಂಕಿಅಂಶಗಳೊಡನೆ ಮಾತನಾಡದೆ ಸುಮ್ಮನೆ ಚಪಲಕ್ಕೋಸ್ಕರ ಮಾತನಾಡುತ್ತಾರೆಂದು ಆಪಾದನೆ ಮಾಡುತ್ತಾರೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಆದರೆ ಈಗ ನಾನು ಒಂದು ಎಕಾನಮಿ ವಿಚಾರ ಹೇಳುತ್ತೇನೆ. ಮೂಗಿಗಿಂತ ಮೂಗುತಿ ಭಾರ ಎನ್ನುವ ಹಾಗೆ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಆ ಇಲಾಖೆಯ ಕಟ್ಟಡಗಳನ್ನು ಕಟ್ಟಿಸುವದಕ್ಕಾಗಿ ಒಂದು ಎಂಜಿನಿಯರಿಂಗ್ ಡಿಪಾರ್ಟ್‌ಮೆಂಟು ಇದೆ. ಇದು ಯಾತಕ್ಕೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಇದನ್ನು ವಜಾ ಮಾಡಿದರೆ ದುಡ್ಡು ಉಳಿಯುವುದಿಲ್ಲವೆ ? ಹಾಗೆ ಉಳಿತಾಯವಾದ ದುಡ್ಡನ್ನು ಬೇರೆ ಮಾರ್ಗದಲ್ಲಿ ಉಪಯೋಗಿಸಿದರೆ ಜನೋಪಯುಕ್ತವಾದ ಕಾರ್ಯಗಳನ್ನು ಮಾಡುವುದಕ್ಕೆ ಆಗುವದಿಲ್ಲವೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಕಳ್ಳಂಬೆಳ್ಳದ ಹತ್ತಿರ 68ನೇ ಮೈಲಿಯಲ್ಲಿ 16 ವರ್ಷದಿಂದಲೂ ಒಂದು ಬಿಲ್ಡಿಂಗ್ ಇದೆ. ಇದಕ್ಕೆ ಸುಣ್ಣ ಬಳಿದಿಲ್ಲ, ಇಟ್ಟಿಗೆ ಹಾಕಿಲ್ಲ. ಬಾಗಿಲು ಇಲ್ಲ, ಕಿಟಿಕಿ ಇಲ್ಲ. ಇಂಜಿನಿಯರಿಂಗ್ ಡಿಪಾರ್ಟ್‌ನವರು ಏನು ಮಾಡುತ್ತಿದ್ದಾರೆ ಸ್ವಾಮಿ? ಆದರಿಂದ ಆಯಾ ಡಿವಿಜನ್ನಿನಲ್ಲಿ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನವರು ಕಟ್ಟತಕ್ಕ ಬಿಲ್ಡಿಂಗಳನ್ನು ಸಂಬಂಧಪಟ್ಟ P.W.D. ಡಿವಿಜನ್ನವರಿಗೆ ಕೊಟ್ಟರೆ ಕೆಲಸ ಸರಿಯಾಗಿ ಆಗುತ್ತದೆ, ದುಡ್ಡು ಮಿಗುಕ್ತದೆ ಎಂದು ಹೇಳುತ್ತೇನೆ. ಕಂಟ್ರಾಕ್ಟರು ಏನು ಮಾಡುತ್ತಾರೆ, ಸ್ವಾಮಿ ? ಈ ಕಂಟ್ರಾಕ್ಟರು ಮತ್ತು ಇಂಜಿನಿಯರು ಇಬ್ಬರೂ ಸೇರಿದರೆ ಶ್ರೀ ವೀರಣ್ಣಗೌಡರು 50 ವರ್ಷ ಮಂತ್ರಿಗಳಾಗಿದ್ದರೂ ಅಲ್ಲಿ ಕಳ್ಳತನ ನಡೆಯುವುದನ್ನು ಹುಡುಕುವದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟದಲ್ಲಿ ಇರುವ ಎಂಜಿನಿಯರಿಂಗ್ ಶಾಖೆಯನ್ನು ವಜಾ ಮಾಡಿ ಅದರಿಂದ ಉಳಿತಾಯವಾಗತಕ್ಕ ದುಡ್ಡನ್ನು ಬೇರೆ ಕಡೆಗೆ ಉಪಯೋಗಿಸಿ ಎಂದು ನಾನು ಸಲಹೆ ಮಾಡುತ್ತೇನೆ. ಎಸ್ಟಿಮೇಟ್ಸ್ ರಿವೈಜ್‌ಮಾಡುವುದನ್ನು ಬಿಟ್ಟುಬಿಡಬೇಕು. ಒಂದು ಹೊಸ ಸರ್ಕಾರ ಬಂದು ಹೊಸ ಮಂತ್ರಿಮಂಡಲ ಬಂದಾಗ ಅವರಿಗೆ ಬೇಕಾಗಿದ್ದನ್ನು ಅವರು ರಿವೈಜು ಮಾಡುತ್ತಾರೆ. ಹಿಂದಿನ ಮಂತ್ರಿಮಂಡಳದವರು ತಮಗೆ ಬೇಕಾದ್ದನ್ನು ತಾವು ರಿವೈಜ್‌ಮಾಡುತ್ತಾರೆ. ಆದರೆ ಒಂದೇ ವರ್ಷದಲ್ಲಿ ಎಷ್ಟು ಸಲ ತಾವು ಎಸ್ಟಿಮೇಟ್ಸುಗಳನ್ನು ರಿವೈಜ್ ಮಾಡುವುದು? ಇಟ್ಟಿಗೆ ಮಣ್ಣು ಮರಳು ಸುಣ್ಣ ಇವುಗಳ ಬೆಲೆಯಲ್ಲಿ ವ್ಯತ್ಯಾಸವಾಗುತ್ತದೇನು? ಕಬ್ಬಿಣ, ಸಿಮೆಂಟು, ವ ರ ಇವುಗಳನ್ನು ನೀವೇ ಕೊಡುತ್ತೀರಿ. ಇವುಗಳ ಬೆಲೆ ಹೇಗೆ ವ್ಯತ್ಯಾಸವಾಗುತ್ತದೆ? ಕಬ್ಬಿಣದ ಬೆಲೆ ಭಂಗಾರದ ಬೆಲೆಯ ಹಾಗೆ ವ್ಯತ್ಯಾಸವಾಗುವದಿಲ್ಲ. ಆದ್ದರಿಂದ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ದಾಕ್ಷಿಣ್ಯಕ್ಕೆ ಒಳಗಾಗದೆ ಈ ರೀತಿ ಎಸ್ಟಿಮೇಟ್ಸು ರಿವೈಜುಮಾಡುವದನ್ನು ಬಿಡಬೇಕು. ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ದಕ್ಷತೆಯ ಅಭಾವ ಕಂಡು ಬರುತ್ತದೆ. ಆದ್ದರಿಂದ ಈ ಇಲಾಖೆಯನ್ನು overhaul ಮಾಡಿ ಹೆಚ್ಚು ನಿಗಾ ಕೊಡಬೇಕೆಂದು ಹೇಳುತ್ತೇನೆ.

ಚಿಕ್ಕನಾಯಕನಹಳ್ಳಿಯ ಹತ್ತಿರ ಒಂದು ಕಟ್ಟಡ ಕಟ್ಟಿಸಿದೆ. ಈ ಕಟ್ಟಡ ಕಟ್ಟಿಸುವ ಸಂಬಂಧದಲ್ಲಿ ಎಂಜಿನಿಯರು ಮತ್ತು ಕಂಟ್ರಾಕ್ಟರು ಸೇರಿ ಸರ್ಕಾರಕ್ಕೆ ಮೋಸ ಮಾಡಿದ್ದಾರೆ. ಆಂಟಿಕರಪ್ಷನ್ ಡಿಪಾರ್ಟ್‌ಮೆಂಟಿನವರು ಇದರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಪ್ರಾಸಿಕ್ಯೂಷನ್ ನಡೆಸಬೇಕು. ಇದೇ ರೀತಿಯಾಗಿ ತುಮಕೂರು ಜಿಲ್ಲೆಯಲ್ಲಿಯ ಸರ್ಕಾರಕ್ಕೆ ಮೋಸಮಾಡಿದ್ದಾರೆ. ಆದಕಾರಣ ಸರ್ಕಾರವು ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಮಾಡಬೇಕು. ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟದಲ್ಲಿ ರೊಕ್ಕದ ಮೇಲೆ ಆಶೆ ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲವೇ ಎಂದು ನಾನು ಮಂತ್ರಿಯವರನ್ನು ಕೇಳುತ್ತೇನೆ. ದುಡ್ಡು ಸಂಪಾದನೆ ಮಾಡುವುದು ಒಂದೇ ಕೆಲಸ ಈ ಇಲಾಖೆಯಲ್ಲಿ ಇದೆ. ಆದಕಾರಣ ಈ ಇಲಾಖೆಯಲ್ಲಿ ಅವಶ್ಯವಿರುವ ಕಂಟ್ರೋಲ್ ಇಟ್ಟುಕೊಳ್ಳಬೇಕು. ಮಂತ್ರಿಯವರಾದರೂ ಸಾಕಷ್ಟು ಪ್ರಯತ್ನ ಮಾಡಿಲ್ಲವೆಂದು ವಿಷಾದದಿಂದ ನಾನು ಹೇಳಬೇಕಾಗಿದೆ.

"ಹಳ್ಳಿಯಿಂದ ದಿಳ್ಳಿ" ಎಂಬ ಒಂದು ಗಾದೆ ಇದೆ. ಹಳ್ಳಿಯ ಜನರು ಸುಖವಾಗಿ ಇದ್ದರೆ ದೇಶವೆಲ್ಲಾ ಸುಖದಿಂದ ಇರುತ್ತದೆ. ಹಳ್ಳಿಗಳಲ್ಲಿ ಮೊದಲು ಅಭಿವೃದ್ಧಿ ಕಾರ್ಯವನ್ನು ಮಾಡಬೇಕು. ಹಳ್ಳಿಗಳಿಗಾಗಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಸುವ ಯೋಜನೆಯನ್ನು ಮೊದಲು ಕೈಕೊಳ್ಳಬೇಕು. ತುಂಗಭದ್ರಾ ಹಿರಾಕುಡ ಮುಂತಾದ ದೊಡ್ಡ ದೊಡ್ಡ ಯೋಜನೆಗಳಿಂದ ಅಷ್ಟು ಲಾಭವಾಗುವದಿಲ್ಲ. ದೊಡ್ಡ ಯೋಜನೆಗಳಿಗೆ ಖರ್ಚು ಬಹಳ ಆಗುತ್ತದೆ; ಮತ್ತು ಆದಾಯ ಬಹಳ ಕಡಮೆ ಬರುತ್ತದೆ. ಆದಕಾರಣ ಸಣ್ಣ ಸಣ್ಣ ಯೋಜನೆಗಳನ್ನು ಮಾಡಿದರೆ ದೇಶದಲ್ಲಿಯ ಆಹಾರ ಅಭಾವ ತೊಲಗುತ್ತದೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಷಯ ಹೇಳುತ್ತೇನೆ. ಹಿಂದಿನ ಹೋಮ್ ಮಿನಿಸ್ಟರವರು ದೇಶಕ್ಕೆ ಮಾಡಿದಷ್ಟು ದ್ರೋಹ ಇನ್ನು ಯಾರೂ ಮಾಡಿಲ್ಲ. ಅವರು ರಾಜಕೀಯ ಪ್ರಭಾವಕ್ಕೆ ಒಳಗಾಗಿ ದೇಶಕ್ಕೆ ಲಾಭ ಬರುತ್ತಿದ್ದ ಅನೇಕ ಬಸ್ ಲೈನುಗಳನ್ನು ವಜಾ ಮಾಡಿದರು. ಮತ್ತು ಅನೇಕ ಬಸ್ ಲೈನುಗಳನ್ನು ಸರ್ಕಾರದಿಂದ ತಪ್ಪಿಸಿ ಖಾಸಗೀಜನರಿಗೆ ಒಪ್ಪಿಸಿದ್ದಾರೆ. ರೋಡ್ ಟ್ರಾನ್ಸ್‌ಪೋರ್ಟ್ ನ್ಯಾಷನಲೈಜ್ ಆದಮೇಲೆ ಹೆಚ್ಚು ಬಸ್ಸುಗಳನ್ನು ಓಡಿಸಬೇಕು. ಅದಕ್ಕೆ ಬದಲಾಗಿ ಬಸ್ ಸರ್ವಿಸ್ ನ್ಯಾಷನಲೈಜ್ ಆದನಂತರ ಬಹಳ ಕರ‍್‍ಜೆಷನ್ ಆಗುತ್ತಾ ಇದೆ. ಬಸ್‌ಗಳಲ್ಲಿಯ ಕಂಡಕ್ಟರುಗಳು ಸರಿಯಾಗಿ ಟಿಕೆಟ್ಸ್ ಕೊಡದೆ ಹಣವನ್ನು ಅಪಹರಿಸುತ್ತಾರೆ. ಇದರಿಂದ ಸರ್ಕಾರಕ್ಕೆ ಹಾನಿಯಾಗುತ್ತಿದೆ. ಸರ್ಕಾರಕ್ಕೆ ಬರಬೇಕಾದ ಹಣ ಸರಿಯಾಗಿ ಬರುವುದಿಲ್ಲ. ಸೂಪರ್‌ವೈಸರುಗಳು ಇದ್ದರೂ ಸರ್ಕಾರಕ್ಕೆ ಬರತಕ್ಕ ಹಣ ಸರಿಯಾಗಿ ಬಾರದೆ ಪೋಲಾಗುತ್ತದೆ. ರೋಡ್ ಟ್ರಾನ್ಸ್‌ಪೋರ್ಟಿನಿಂದ ನಾವು ಏನು ನಿರೀಕ್ಷಣೆ ಮಾಡುತ್ತಿದ್ದೆವೋ ಅದರ ಹತ್ತರಷ್ಟು ಉತ್ಪತ್ತಿ ಬರಲು ಈಗ ಅವಕಾಶವಿದೆ. ಅದಕ್ಕಾಗಿ ಅದನ್ನು ಕಾರ್ಪೊರೇಷನ್ ಮಾಡಬೇಕೆಂದು ಏನು ನೀವು ಹೇಳುತ್ತಿದ್ದೀರೋ ಅದನ್ನು ಕೂಡಲೇ ಮಾಡಬೇಕು. ಆಗ ಅಲ್ಲಿ ನಡೆಯುತ್ತಿರುವ ದುರ್ವ್ಯವಹಾರವೆಲ್ಲವೂ ನಿಂತು ಹೋಗುತ್ತದೆ. ಬುಕ್ ಮಾಡುವ ಏಜೆನ್ಸಿಗಳನ್ನು ಮೊದಲು ತಪ್ಪಿಸಿಬಿಡಿ. ಕಂಡಕ್ಟರೂ, ಏಜೆಂಟರೂ ಒಂದಾಗಿ ಚಿತ್ರದುರ್ಗದಿಂದ ಬೆಂಗಳೂರಿಗೆ ಬರುವವರಿಗೆ ಸಿರಾದಿಂದಲೋ ತುಮಕೂರಿನಿಂದಲೋ ಟಿಕೆಟ್ಟು ಕೊಟ್ಟು ಪ್ರತಿಯೊಂದು ಟಿಕೆಟ್ಟಿಗೂ 1 ರೂಪಾಯಿ ಅಥವಾ 2 ರೂಪಾಯಿಗಳಂತೆ ಕಂಡಕ್ಟರಿಗೆ ಉಳಿಯುತ್ತದೆ. ರೋಡ್ ಟ್ರಾನ್ಸ್‌ಪೋರ್ಟಿನಲ್ಲಿ ಈ ರೀತಿಯಾದ ವ್ಯವಹಾರ ನಡೆಯುತ್ತಾ ಇರುವುದನ್ನು ತಾವು ನೋಡಬಹುದು. ನ್ಯಾಷನಲೈಸ್ಡ್ ರೂಟುಗಳಲ್ಲಿ ಎಲ್ಲಿ ಆದಾಯ ಹೆಚ್ಚು ಕಂಡುಬರುತ್ತದೋ, ಅಂತಹ ರೂಟುಗಳಲ್ಲಿ ಹೆಚ್ಚಿಗೆ ಬಸ್ಸುಗಳನ್ನು ಹಾಕಬೇಕು. ನನಗೆ ಈ ವಿಷಯದ ಮೇಲೆ ಇನ್ನು ಹೆಚ್ಚಿಗೆ ಮಾತನಾಡಬೇಕೆಂಬ ಇಚ್ಛೆ ಇತ್ತು. ಆದರೆ ಸಭಾಧ್ಯಕ್ಷರು ನನಗೆ ಆಗಾಗ್ಗೆ ಸೂಚನೆ ಕೊಡುತ್ತಿರುತ್ತಾರೆ. ಅದಕ್ಕೋಸ್ಕರ ಅನೇಕ ವಿಷಯಗಳನ್ನು ಹೇಳುವುದಕ್ಕಾಗುವುದಿಲ್ಲ. ಇನ್ನೊಂದು ವಿಷಯ. ದೇಶದಲ್ಲಿ ಸರ್ಕಾರದ ಇಲಾಖೆಗಳಲ್ಲಿ ಲಂಚ ರುಷುವತ್ತು ಬೇಕಾದಷ್ಟು ನಡೆಯುತ್ತಾ ಇದೆ.

ಅವೆಲ್ಲವನ್ನೂ ಎರ್ರಾಡಿಕೇಟ್ ಮಾಡಬೇಕೆಂದು ಹೇಳುತ್ತೇನೆ. ಎಫಿಷಿಯನ್ಸಿ ಇಲಾಖೆಯವರು ಈಗ ಹಣ ಪಿಲ್‌ಫರ್ ಆಗುತ್ತಿರುವುದನ್ನು ಕಂಡುಹಿಡಿದು, ಅದನ್ನು ತಪ್ಪಿಸಿ, ಸರ್ಕಾರದ ಇಲಾಖೆಗಳ ಕಾರ್ಯಕಲಾಪಗಳು ಸುಸೂತ್ರವಾಗಿ ದಕ್ಷತೆಯಿಂದ ನಡೆಯುವುದಕ್ಕೆ ತಕ್ಕ ಏರ್ಪಾಡು ಮಾಡುತ್ತಾರೆಂದು ನಂಬಿದ್ದೇನೆ.

*ಶ್ರೀ ಎ. ಆರ್. ಪಂಚಗಾವಿ (ಗೋಕಾಕ್ II).—ಅಧ್ಯಕ್ಷ ಮಹಾಶಯರೇ, ಈ ಸಭೆಯ ಮುಂದೆ ಇರುವ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಈಗ ಬಿಜಾಪುರ ಜಿಲ್ಲೆಯಲ್ಲಿ ಘಟಪ್ರಭಾ ಯೋಜನೆ ಇದೆ. ಹಿಂದೆ ಈ ಘಟಪ್ರಭಾ ಯೋಜನೆಯನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದು ಮುಂಬೈ ಸರ್ಕಾರವನ್ನು ಕೇಳುತ್ತಾ ಬಂದಿದ್ದೇವೆ. ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಘಟಪ್ರಭಾಯೋಜನೆಗಾಗಿ ಸುಮಾರು 9 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇದ್ದಾರೆ. ಆದರೆ ಈ ಸಲ ಬಡ್ಜೆಟ್ಟಿನಲ್ಲಿ ಘಟಪ್ರಭಾ ಯೋಜನೆಗಾಗಿ 23½ ಲಕ್ಷ ಮತ್ತು 50 ಲಕ್ಷ ರೂಪಾಯಿಗಳ ಮೊತ್ತವನ್ನು ಮಾತ್ರ ಮಂಜೂರು ಮಾಡಿದ್ದಾರೆ. ಇಷ್ಟು ಸಾವಕಾಶವಾಗಿ ಇದರ ಕೆಲಸ ನಡೆದರೆ, ಈ ಯೋಜನೆ ನಿಜವಾಗಿ ಪೂರ್ತಿಯಾಗುವುದೇ ಅಸಂಭವವೆಂದು ನನಗೆ ತೋರುತ್ತದೆ. ಇಂಗ್ಲಿಷರ ಆಳ್ವಿಕೆಯಲ್ಲಿ ಈ ಘಟಪ್ರಭಾಯೋಜನೆಯನ್ನು ಪ್ರಾರಂಭ ಮಾಡಬೇಕೆಂದಿದ್ದರು. ಇದಕ್ಕಾಗಿ ಒಂದು ಯೋಜನೆಯನ್ನು ಸಹ ತಯಾರು ಮಾಡಿದ್ದರು. ರೈತರಿಗೆ ನೀರಾವರಿಗೋಸ್ಕರ ನೀರನ್ನು ಕೊಡುತ್ತಿದ್ದರು. ಆದರೆ ಈಗ ಅಲ್ಲಿನ ರೈತರಿಗೆ ನೀರು ಸಾಕಷ್ಟು ಸಿಕ್ಕುವುದೇ ಇಲ್ಲ. ಆದರೆ ಅವರ ಮೇಲೆ ಬೀಳುವ ಕರಭಾರ ಜಾಸ್ತಿಯಾಗಿದೆ. ಕಬ್ಬಿನ ಬೆಳೆಗೆ 65 ರೂಪಾಯಿಗಳಂತೆ ಕರವನ್ನು ವಸೂಲು ಮಾಡುತ್ತಿದ್ದಾರೆ. ಇದರ ಜೊತೆಗೆ ಲೋಕಲ್ ಫಂಡ್ ಸೆಸ್ ಬೇರೆ ವಸೂಲು ಮಾಡುತ್ತಿದ್ದಾರೆ. ಇನ್ನು ನೀರಿನ ತೆರಿಗೆ ವಿಷಯವನ್ನು ತೆಗೆದುಕೊಂಡರೆ, ಆ ಭಾಗದಲ್ಲಿ 10 ರೂಪಾಯಿಗಳಿಂದ 15 ರೂಪಾಯಿಗಳವರೆಗೂ ನೀರಾವರಿ ಕರವನ್ನು ವಸೂಲು ಮಾಡುತ್ತಿದ್ದಾರೆ. ಆದರೆ ಸಕಾಲಕ್ಕೆ ನಮಗೆ ನೀರಿನ ಸರಬರಾಯಿ ಇಲ್ಲದೆ, ನಮಗೆ ಆಗಾಗ್ಗೆ ಒದಗುವ ಸಂಕಷ್ಟಗಳನ್ನು ಪರಿಹಾರ ಮಾಡಿಕೊಡಲು ತಕ್ಕ ವ್ಯವಸ್ಥೆ ಇಲ್ಲದೇ ಇರುವ ಕಾರಣ, ಅನೇಕ ಬೆಳೆಗಳು ಒಣಗಿ ಹೋಗುತ್ತವೆ. ಜೂನ್ ತಿಂಗಳು ಮುಗಿದರೂ ರೋಹಿಣಿ ಮಳೆ ಬಾರದೆ ಕೆಲವು ಬೆಳೆಗಳು ಕೆಟ್ಟು ಹೋಗಿವೆ. ಸರ್ಕಾರದವರು ಈ ವಿಚಾರವನ್ನು ಪೂರ್ತಿಯಾಗಿ ಪರಿಶೀಲನೆ ಮಾಡಬೇಕು. ಹೊಸದಾಗಿ ಬೆಳೆ ಬೆಳೆಸುವ ಕ್ಷೇತ್ರದಲ್ಲಿ ನೀರಿನ ಸೌಕರ್ಯ ಅಷ್ಟಾಗಿರುವುದಿಲ್ಲ. ನೀರಿನ ತೆರಿಗೆ ಹೆಚ್ಚಿಗೆ ಕೊಟ್ಟರೂ, ನೀರಿನ ಹಂಚಿಕೆ ವ್ಯವಸ್ಥೆ ಸ್ವಲ್ಪವೂ ಸರಿಯಾಗಿಲ್ಲ. ಹೀಗಾಗಿ ಅಲ್ಲಿನ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಬೆಳೆ ಬರುವುದು ಕಡಮೆಯಿದ್ದರೂ, ಕರಭಾರವೇನೋ ಜಾಸ್ತಿ ಇದೆ. ಈಗ ಪೂರ್ತಿಯಾಗಿ ಹಡಗಲಿ ಪ್ರಾಜೆಕ್ಟು ಕಟ್ಟುವ ಭಾಗ ಮುಂಬೈ ಸರ್ಕಾರಕ್ಕೆ ಹೋಗಿದೆ. ಆ ಪ್ರದೇಶದಲ್ಲಿ ನೀರಿನ ಹಂಚಿಕೆಯನ್ನು ಆದಷ್ಟು ಜಾಗ್ರತೆ ಪೂರ್ತಿಗೊಳಿಸಿದರೆ, ಅಲ್ಲಿನ ರೈತರ ಸಂಕಷ್ಟಗಳು ನಿವಾರಣೆಯಾಗಬಹುದು. ನಮ್ಮ ಭಾಗಗಳು ಮೈಸೂರು ರಾಜ್ಯಕ್ಕೆ ಸೇರಿದ ಮೇಲೆ ಕರಭಾರದಲ್ಲಿ ಏನಾದರೂ ರಿಯಾಯತಿ ಸಿಕ್ಕಬಹುದೆಂದು ಭಾವನೆಯಿದೆ. ಆದ್ದರಿಂದ ನಾವು ಸರ್ಕಾರಕ್ಕೆ ಬೇಡಿಕೊಳ್ಳುವುದು ಏನೆಂದರೆ, ಘಟಪ್ರಭಾಯೋಜನೆಯು ಪೂರ್ತಿಯಾಗುವ ಮೊದಲು ಉಳಿಗ ಭಾಗಗಳಿಗೆ ಕರಭಾರವನ್ನು ಹಾಕಬಾರದು. ಈಗ ಕೊಡುತ್ತಿರುವ ನೀರು ಸಾಕಾಗುವುದಿಲ್ಲ. ನದಿಯಲ್ಲಿ ನೀರು ತೀವ್ರವಾಗಿ ಬಂದರೆ ಸರಿ. ಇಲ್ಲದಿದ್ದರೆ ಭಾವಿಗಳ ಅವಶ್ಯಕತೆ ಇದ್ದೇ ತೀರಬೇಕು. ಈಗ ಘಟಪ್ರಭಾ ಯೋಜನೆಯಿಂದ ಅನುಕೂಲ ಪಡೆಯುವ ರೈತರ ಮೇಲೆ ತೆರಿಗೆ ಭಾರ ಜಾಸ್ತಿಯಾಗುತ್ತದೆ. ನೀರಿನ ಮೇಲೆ ಹಾಕುವ ಕರವನ್ನೂ ಸಹ ಕಡಮೆಯಾಗಿ ವಸೂಲು ಮಾಡಬೇಕೆಂದು ಸರ್ಕಾರಕ್ಕೆ ಒಂದು ಸೂಚನೆ ಮಾಡುತ್ತೇನೆ. ನಮ್ಮ ಭಾಗದಲ್ಲಿ ಆಗಬೇಕಾದ ಉಳಿದ ಕೆಲವು ಕಾರ್ಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ವರ್ಷ ಬಡ್ಜೆಟ್ಟಿನಲ್ಲಿ ಧಾರವಾಡ ಜಿಲ್ಲೆಯ ರಸ್ತೆಗಳ ದುರಸ್ತಿ ಸಲುವಾಗಿ ನಮ್ಮ ಸರ್ಕಾರದವರು ಎಷ್ಟು ಹಣವನ್ನು ಒದಗಿಸಿದ್ದಾರೆಂಬುದನ್ನೂ ಸಹ ಸೂಚನೆ ಮಾಡಲಿಲ್ಲ. ಅಲ್ಲಿನ ರಸ್ತೆಗಳಿಗೆ ಎಷ್ಟು ಹಣವನ್ನೊದಗಿಸಿದ್ದಾರೆಂಬುದನ್ನೂ ಸಹ ತಿಳಿಸಿಲ್ಲ. ಈ ರೀತಿಯಾದ ಪರಿಸ್ಥಿತಿಯನ್ನು ನೋಡಿದರೆ, ಸಾಧಾರಣವಾಗಿ ಧಾರವಾಡದ ರಸ್ತೆಗಳು ಅತಿ ಕೆಟ್ಟ ಪರಿಸ್ಥಿತಿಯಲ್ಲಿರುವ ಹಾಗೆ ಕಾಣುತ್ತದೆ. ಆದ್ದರಿಂದ ಸರ್ಕಾರದವರು ಕೂಡಲೇ ವಿಶೇಷವಾಗಿ ಹಣವನ್ನು ಖರ್ಚು ಮಾಡಿ ಅಲ್ಲಿನ ರಸ್ತೆಗಳನ್ನು ಒಳ್ಳೆಯ ಸ್ಥಿತಿಗೆ ತರಬೇಕು. ನಮ್ಮ ಜನರಿಗೆ ವಿಶೇಷವಾಗಿ ರಸ್ತೆಗಳ ಸೌಕರ್ಯವಿಲ್ಲ. ಅಲ್ಲಿ ಈಗ ಒಂದು ದೊಡ್ಡ ರಸ್ತೆಯನ್ನು ತೆಗೆಯಬೇಕೆಂದು 50 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಆ ರಸ್ತೆಯನ್ನು ತೀವ್ರವಾಗಿ ಪೂರ್ಣಗೊಳಿಸುತ್ತಾರೆಂದು ನಾನು ನಂಬಿದ್ದೇನೆ.

ಇನ್ನೊಂದು ವಿಚಾರ. ನಮ್ಮ ಭಾಗದಲ್ಲಿರುವ ವಿಕಾಸ ಯೋಜನೆಯ ಬಗ್ಗೆ ಹಿಂದೆ ಸ್ವಲ್ಪ ಹಣವನ್ನು ಕೊಡಲಾಗಿತ್ತು. ಅದರಲ್ಲಿ ಆ ವರ್ಷ ಪೂರ್ತಿಯಾಗಿ ಹಣ ಖರ್ಚಾಗದೆ ಲಕ್ಷಗಟ್ಟಲೆ ಹಣ ಸರ್ಕಾರಕ್ಕೆ ಬಿಡುವ ಪ್ರಸಂಗ ಬಂದಿತ್ತು. ಹೀಗಾಗಿ ಇನ್ನು ಲಕ್ಷರೂಪಾಯಿಗಳಷ್ಟು ಸಿಲ್ಕು ಉಳಿದಿದೆ ಎಂದು ತಿಳಿಯುತ್ತೇನೆ. ನಮ್ಮ ಭಾಗದಲ್ಲಿ ಘಟಪ್ರಭಾಯೋಜನೆಗಾಗಿ 1,25,000 ರೂಪಾಯಿಗಳ ಗ್ರ್ಯಾಂಟನ್ನು ಕೊಟ್ಟಿದ್ದಾರೆ ಅದು ಸಾಲದು. ಅದರ ಜೊತೆಗೆ ಇನ್ನೂ ಸ್ವಲ್ಪ ಹಣವನ್ನ ಕೊಡಬೇಕೆಂದು ಮನವಿ ಮಾಡಿದ್ದಾರೆ. ಅದನ್ನೂ ಸಹ ಸರ್ಕಾರದವರು ವಿಚಾರಮಾಡಬೇಕು. ಇನ್ನೊಂದು ವಿಷಯ ಸ್ಕ್ರೀನಿಂಗ್ ಎಕ್ಸರೇ ಪ್ಲಾಂಟ್ ಸಂಬಂಧದಲ್ಲಿ 60 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಆ ಹಣ ಅನಾವಶ್ಯಕವಾಗಿ ಹಾಗೆಯೇ ಉಳಿದಿದೆ. ಆ 60 ಸಾವಿರ ರೂಪಾಯಿಗಳನ್ನು ಈ ಬಾಬಿಗೆ ಮಂಜೂರು ಮಾಡಬೇಕೆಂದು ಸಮಾಜ ಸ್ಥಾಪನಾ ಮಂತ್ರಿಗಳಲ್ಲಿ ವಿನಂತಿ ಮಾಡಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಪಟ್ಟನ್ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ ಈ ಸಭೆಯ ಮುಂದೆ ಬಂದಿರುವ ಡಿಮ್ಯಾಂಡಿನ ವಿಷಯವಾಗಿ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. P.W.D. ವರ್ಕ್ಸ್ ಹೇಗೆ ನಡೆಯುತ್ತದೆ ಎಂಬುದು ಮಾನ್ಯ ಮಂತ್ರಿಗಳು ಸ್ವಲ್ಪ ಲಕ್ಷ್ಯದಿಂದ ಮತ್ತು ತಾಳ್ಮೆಯಿಂದ ವಿಚಾರ ಮಾಡುವ ಮಾತು. ಒಂದು ನಾಲೆಗೆ ಎಸ್ಟಿಮೇಟ್ ಮಾಡುವ ವೇಳೆ ನೆಲದೊಳಗೆ ಕಲ್ಲು ಎಲ್ಲಿದೆ ಎನ್ನುವ ಪರಿಶೀಲನೆ ಮಾಡಿರುವುದಿಲ್ಲ. ಅಂಥ ಕಡೆ ಕಲ್ಲು ಎಷ್ಟಿದೆ ಎಂದು ಪರಿಶೀಲಿಸಿ ಎಸ್ಟಿಮೇಟ್ ಮಾಡಬೇಕು. ಈ ವಿಚಾರವನ್ನು ತಮ್ಮ ಗಮನದಲ್ಲಿಟ್ಟುಕೊಂಡು ಕಂಟ್ರಾಕ್ಟ್ ಕೊಡಬೇಕು. ತಾವು ಕೇಳಿದಷ್ಟು ಹಣಕ್ಕೆ ಮಂಜೂರಾತಿ ಬರುತ್ತದೆ ಎನ್ನುವ ಭರವಸೆ ಇರುವುದ

(ಶ್ರೀ ಎಂ. ಎಸ್. ಪಟ್ಟನ್)

ರಿಂದ ಅಲ್ಲಿ ಹಣ ಪೋಲಾಗುವದಕ್ಕೆ ಅವಕಾಶವಿದೆ ಯೆಂದು ಹೇಳುತ್ತೇನೆ. ಕಾಲುವೆ ತೋಡುವ ಸಂದರ್ಭ ದಲ್ಲಿ 20 ಸಾವಿರ 25 ಸಾವಿರ ರೂಪಾಯಿಗಳ ಪೀಸ್ ವರ್ಕ್ಸ್ ಕೇಳತಕ್ಕವರಿಗೆ ಕೊಟ್ಟು ಸ್ಯಾಂಕ್ಷನ್ ಮಾಡಿಕೊಡುತ್ತಾರೆ. ಪೀಸ್‌ವರ್ಕ್‌ಗಳನ್ನು ಮಾಡುವ ವರ ಹತ್ತಿರ ಸರಿಯಾದ ಸಾಮಾನುಗಳು ಇರತ್ತವೆಯೋ ಇಲ್ಲವೋ ಎಂದು ಅನುಮಾನ ನಮಗೆ ಕಂಡಬರು ತ್ತದೆ. ಪೀಸ್‌ವರ್ಕ್ ಸರಿಯಾದ ರೀತಿಯಿಂದ ನಡೆಯು ತ್ತದೆಯೇ, ಸರಿಯಾದ ರೀತಿಯಲ್ಲಿ ಎಸ್ಟಿಮೇಟ್ ಮಾಡಿ ದ್ದಾರೆಯೇ ಎಂದು ಪರಿಶೀಲನೆ ಮಾಡಲು ತಾಲ್ಲೋಕು ಕಮಿಟಿಗಳನ್ನು ನೇಮಿಸಿ ಆ ಸಮಿತಿಗಳು ಅವು ಸರಿ ಯಾಗಿ ನಡೆಯುತ್ತಿವೆಯೇ ಎಂಬುದನ್ನು ನೋಡಬೇಕು. ಈಗ P.W.D ನಲ್ಲಿ ಕೆಲಸ ನಡೆಯುವ ವಿಷಯದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ಈಗ ಕೋಯ್ನ ಪ್ರಾಜೆಕ್ಟ್, ಘಟಪ್ರಭಾ ಪ್ರಾಜೆಕ್ಟ್ ಮತ್ತು ನಮ್ಮ ತಾಲ್ಲೋಕಿನ ಮಲಪ್ರಭಾ ಇರ್ರಿಗೇಷನ್ ಪ್ರಾಜೆಕ್ಟ್ ಎಲ್ಲವೂ ನಡೆಯುತ್ತಿವೆ. ಈಗಾಗಲೇ 33 ಲಕ್ಷ ರೂಪಾಯಿಗಳು ಖರ್ಚಾಗಿವೆ ಎಂದು ನಮ್ಮ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅಲ್ಲಿಯ ಕೆಲಸ ನೋಡಿದರೆ ನನಗೆ ಆಶ್ಚರ್ಯವಾಗಿದೆ. 33 ಲಕ್ಷ ರೂಪಾಯಿಗಳು ಖರ್ಚಾಗಿವೆ ಎಂದು ಹೇಳಿದ ಮೇಲೆ ನನ್ನ ಸಹಪಾಠಿ ಮೆಂಬರುಗಳೊಡನೆ ನಾನು ಆ ಸ್ಥಳಕ್ಕೆ ಹೋಗಿ ನೋಡಿದ ಮೇಲೆ, ಸಣ್ಣ ಸಣ್ಣ ಕಾಲುವೆ ಯೋಜನೆಗಳನ್ನು ಮಾಡಿ ಹಣವನ್ನು ಉಳಿತಾಯ ಮಾಡಿಕೊಳ್ಳುವುದೊಳ್ಳೆಯದು, ಜನಗಳ ಮೇಲೆ ಹೆಚ್ಚಿನ ಟ್ಯಾಕ್ಸ್ ಹಾಕುವುದು ಹೆಚ್ಚಿನ ತೆರಿಗೆ ಭಾರ ಹೊರಿಸು ವುದು ಬೇಡವೆಂದೆನಿಸಿತು.

ನಮ್ಮ ರಾಮದುರ್ಗ ತಾಲ್ಲೋಕ್ ಬಹಳ ಹಿಂದು ಳಿದ ತಾಲ್ಲೋಕು. ಅದರ ಮೂರು ಭಾಗಗಳು ನೀರಿ ನಿಂದ ಕೂಡಿರುವುದರಿಂದ ಪ್ರತಿಯೊಂದು ಹಳ್ಳಿಯೂ ಒಂದು ಅಂದವಾದ ದ್ವೀಪದಹಾಗೆ ಇದೆ. ರೈತರಿಗೆ ಸಕಲ ಸೌಕರ್ಯಗಳನ್ನು ಕೊಟ್ಟು ತಾವು ಅವರನ್ನು ಉದ್ಧಾರ ಮಾಡುತ್ತೀರೆಂದು ಹೇಳುತ್ತೀರಿ. ಇಲ್ಲಿ ಸುಮಾರು 120 ಹಳ್ಳಿಗಳಲ್ಲಿ ಆ ರೀತಿ ಕಲ್ಯಾಣವನ್ನುಂಟು ಮಾಡಿರುವ ಕೇವಲ 50 ಹಳ್ಳಿಗಳನ್ನಾದರೂ ತೋರಿಸಿ. ಇವೊತ್ತು ಬೆಂಗಳೂರಿನಿಂದ ನಾವು ಹೋಗಿ ಅಲ್ಲಿನ ಜನ ಗಳಿಗೆ ಏನು ಉತ್ತರ ಹೇಳಬೇಕು ! ಇವೊತ್ತು ಅಲ್ಲಿಯ ರೈತರು ನಾಲ್ಕಾರು ಮೈಲಿಗಳ ದೂರದಲ್ಲಿರುವ ಕೋರ್ಟ್ ಕಚೇರಿಗಳಿಗೆ ಕಾಲು ನಡಿಗೆಯಲ್ಲಿ ಬರಬೇಕು. ರೈತನು ತಾನು ಬೆಳೆದ ಪದಾರ್ಥಗಳನ್ನು ತಲೆಯ ಮೇಲೆ ಗೂಡೆಗಳಲ್ಲಿ ಹೊತ್ತುಕೊಂಡು ಬರಬೇಕೇ ವಿನಾ ಬಂಡಿಗಳಲ್ಲಿ ಅವನ್ನು ತೆಗೆದುಕೊಂಡು ಬರಲು ಸಾಧ್ಯ ವಿಲ್ಲ. ಮಾನ್ಯ ಮಂತ್ರಿಗಳು ಪ್ರವಾಸ ಬಂದು ಕೆಲವು ರೋಡುಗಳ ಅಪ್ರೋಚ್ ರೋಡುಗಳನ್ನು ನೋಡಿದರೆ ಗೊತ್ತಾಗುತ್ತದೆ. P.W.D.ಯವರನ್ನು ಕೇಳಿದರೆ ನಮ್ಮಲ್ಲಿ ರೊಕ್ಕವಿಲ್ಲ ಎಂದು ಹೇಳುತ್ತಾರೆ. ತಾವು ಕೊಟ್ಟಿ ರುವ 50 ಸಾವಿರ ರೂಪಾಯಿಗಳು ಯಾವ ಯಾವ ತಾಲ್ಲೋಕು ಡೆವಲಪ್ ಮೆಂಟ್ ಬೋರ್ಡಿನ ಅವಶ್ಯಕತೆ ಯನ್ನು ಪೂರೈಸುವುದಕ್ಕೆ ಸಾಕಾಗುತ್ತದೆ? ಹೀಗೆ 10—15 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ. ರೈತರ ಭಾಗದ ಹಣವನ್ನು ಕೊಡಿಸಿ ಕೊಡಿ, ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಹಣವಿದೆ ಎಂದು ಸರ್ಕಾರದವರು ಹೇಳುತ್ತಾರೆ. ಡೆವಲಪ್ ಮೆಂಟ್ ಬೋರ್ಡ್ ಮೀಟಿಂಗನ್ನು ಮೂರು ತಿಂಗಳ ಕಾಲ ಹಿಂದೆಯೇ ಕರೆಯಿರಿ ಎಂದು ಹೇಳಿದರೆ ಅದಕ್ಕೆ ಉತ್ತರವೇ ಇಲ್ಲ. ಜಿಲ್ಲಾ ಬೋರ್ಡ್ ಮತ್ತು ಡೆವಲಪ್ ಮೆಂಟ್ ಬೋರ್ಡ್‌ಗಳು ಈ ರಸ್ತೆಗಳ ರಿಪೇರಿ ಕೆಲಸ ವನ್ನು ಮಾಡುತ್ತಾ ಇಲ್ಲ. ಅವನ್ನು ಸರಿಯಾದ ರೀತಿ ಯಲ್ಲಿ ಮಾಡುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ನೀರಿನ ವ್ಯವಸ್ಥೆ ವಿಷಯ. ಜಾಲಿಕೋಟೆ ಮುಂತಾದ 20 ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇವೊತ್ತಿಗೂ ಇಲ್ಲ. ಅಂಥವುಗಳನ್ನು ಒದಗಿಸು ವಂತೆ ತಾಲ್ಲೋಕು ಡೆವೆಲಪ್‌ಮೆಂಟ್ ಬೋರ್ಡಿನವ ರನ್ನು ಕೇಳಿದರೆ ನಮ್ಮಲ್ಲಿ ರೊಕ್ಕವಿಲ್ಲ ಎಂದು ಹೇಳು ತ್ತಾರೆ. ಏನೋ ನಾವು ನಾಲ್ಕು ಮಂದಿ ಕಷ್ಟಪಟ್ಟು ಹಳ್ಳಿಯವರಿಂದ ಅರ್ಧಭಾಗದ ರೊಕ್ಕವನ್ನು ಒಟ್ಟು ಗೂಡಿಸಿ ಉಳಿದ ಅರ್ಧ ಭಾಗವನ್ನು ಬೋರ್ಡಿನವರು ಕೊಡಿ ಎಂದರೆ ಅವರು ಕೊಡುತ್ತಿಲ್ಲ. ಕುಡಿಯುವ ನೀರಿನ ಸೌಕರ್ಯ ನಮ್ಮಲ್ಲಿ ಇಲ್ಲದ್ದರಿಂದ P.W.D. ಯವರು ಹೆಚ್ಚಿಗೆ ಈ ಬಗ್ಗೆ ಲಕ್ಷ್ಯಕೊಡಬೇಕೆಂದು ಹೇಳು ತ್ತೇನೆ. ಮೊಟ್ಟಮೊದಲನೆಯದಾಗಿ ಯಾವ ಯಾವ ಹಳ್ಳಿಗಳಿಗೆ 20-30 ಮೈಲಿಗಳವರೆಗೂ ರಸ್ತೆಗಳಿಲ್ಲ ಎಂಬ ವಿವಾದ ನಮ್ಮ ಮುಂದೆ ಇಲ್ಲ. ರಸ್ತೆಗಳಿಲ್ಲ. ಎಲ್ಲೆಲ್ಲಿ ಎರಡು-ಮೂರು-ನಾಲ್ಕು ಮೈಲಿ ಅಪ್ರೋಚ್ ರಸ್ತೆಗಳನ್ನು ಮಾಡಿದರೆ ದೊಡ್ಡ ದೊಡ್ಡ ರಸ್ತೆಗಳಿಗೆ ಹಳ್ಳಿಗಳನ್ನು ಸೇರಿಸುತ್ತವೋ ಅಂತಹ ರಸ್ತೆಗಳನ್ನು ಕೂಡಲೇ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಮಾನ್ಯ P.W.D. ಮಂತ್ರಿಗಳು ತಮ್ಮ ಖಾತೆಯಲ್ಲಿ ಎಲ್ಲೆಲ್ಲಿ ದುಂದು ವೆಚ್ಚವಾಗುತ್ತಿದೆಯೋ ಅದನ್ನೆಲ್ಲಾ ನಿಲ್ಲಿಸಿ ನಮಗೆ ಅಗತ್ಯವಾಗಿ ಬೇಕಾಗಿರುವ ಈ ರಸ್ತೆ ಗಳನ್ನು ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ ಹೇಳು ತ್ತೇನೆ. ಬಸ್ಸುಗಳೇನೋ ಸಾಕಾದಷ್ಟು ಓಡಾಡುತ್ತವೆ. ಆದರೆ ಬಸ್ಸುಗಳಲ್ಲಿ ಹುಬ್ಬಳ್ಳಿ, ಬಿಜಾಪುರ, ಭಾಗದಲ್ಲಿ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗುವುದು ಬಹಳ ಕಷ್ಟ. ಬಸ್ಸುಗಳು ಸರಿಯಾದ ಕಾಲದಲ್ಲಿ ಬರುವು ದಿಲ್ಲ; ವೇಳಾಪಟ್ಟಿಯನ್ನು ಬಸ್ ಸ್ಟ್ಯಾಂಡಿನಲ್ಲಿ ಹಾಕಿರುವುದಿಲ್ಲ. ಬಸ್ಸು ಕಾಲಕ್ಕೆ ಸರಿಯಾಗಿ ಬಸ್ ಸ್ಟ್ಯಾಂಡಿಗೆ ಬರುವುದೇ ಇಲ್ಲ. ಬಸ್ ಸ್ಟ್ಯಾಂಡಿಗೆ ಬಂದ ತಕ್ಷಣ ಎಲ್ಲರೂ, ಗುಂಪುಗುಂಪಾಗಿ ನೂರಾರು ಮಂದಿ ಒಂದೇ ಸಾರಿ ಹತ್ತಲಿಕ್ಕೆ ಹೋಗುತ್ತಾರೆ. ಮೊದಲನೆಯದಾಗಿ ಟಿಕೆಟ್ಟುಗಳನ್ನು ಪಡೆದವರಿಗೆ ಸೀಟುಗಳನ್ನು ಕೊಡುವಂತೆ ಏರ್ಪಾಡು ಮಾಡಿ ಪ್ರಯಾಣಿಕರಿಗೆ ಅನುಕೂಲಗಳನ್ನು ಕಲ್ಪಿಸಲು ನಮ್ಮ ಸರ್ಕಾರದವರು ಹೆಚ್ಚು ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಗ್ರಾಮಾಭಿವೃದ್ಧಿಗೆ ಹೆಚ್ಚಿನ ಹಣವನು ಒದಗಿಸಿ ಇಡೀ ದೇಶಕ್ಕೆ ಕಲ್ಯಾಣ ವನ್ನುಂಟು ಮಾಡುವ ಪರಿಸ್ಥಿತಿಯನ್ನುಂಟು ಮಾಡ ಬೇಕೆಂದು ವಿನಂತಿ ಮಾಡಿಕೊಂಡು ನನ್ನ ಭಾಷಣ ವನ್ನು ಮುಗಿಸುತ್ತೇನೆ.

12-30 P.M.

ಶ್ರೀ ಎ. ಆರ್. ಬದರೀನಾರಾಯಣ್ (ತೀರ್ಥ ಹಳ್ಳಿ) —ಮಾನ್ಯ ಸಭಾಪತಿಗಳೇ, ಈ ದಿವಸ ಈ ಸಭೆಯ ಮುಂದಿರತಕ್ಕಂಥ ಬೇಡಿಕೆಯನ್ನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನಾನು ನಿಂತಿ ದ್ದೇನೆ. ನಮ್ಮ ದೇಶದಲ್ಲಿ ಮರಾಮತ್ ಇಲಾಖೆಯ ಒಂದು ಕೆಲಸ ಮುಖ್ಯವಾದುದು ಎಂಬುದನ್ನು ನಾವು ಮರೆಯುವ ಹಾಗಿಲ್ಲ. ನಮ್ಮ ದೇಶದಲ್ಲಿರತಕ್ಕಂಥ ಅನೇಕ ಕಷ್ಟಗಳು ನಿವಾರಣೆಯಾಗಬೇಕಾದರೆ ಸಾಮಾ ನ್ಯವಾಗಿ ಸುಮಾರು 75 ಭಾಗ ಮರಾಮತ್ ಇಲಾ ಖೆಯಿಂದ ಆಗಬೇಕಾಗಿದೆ. ಈ ಇಲಾಖೆಗೆ ಈ ಬಜೆಟ್ಟಿ ನಲ್ಲಿ ಬಹಳವಾಗಿ ಹಣವನ್ನೊದಗಿಸಿದ್ದಾರೆ. ಜನಗಳಿಗೆ

ಮುಖ್ಯವಾಗಿ ಆಗಬೇಕಾದ್ದು ಸೇತುವೆಗಳು, ರಸ್ತೆಗಳು, ಕಟ್ಟಡಗಳು ಮುಂತಾದ ಜನೋಪಯುಕ್ತವಾದಂಥ ಕೆಲಸಗಳು. ಅಂಥ ಕೆಲಸಗಳನ್ನು ಮರಾಮತ್ ಇಲಾಖೆಯವರು ಸಾಮಾನ್ಯವಾಗಿ ಜನಗಳ ಕೃತಜ್ಞತೆಗೆ ಪಾತ್ರರಾಗುವ ಹಾಗೆ ಮಾಡಬೇಕೆಂದು ಆ ಇಲಾಖೆಯನ್ನು ಇಡಲಾಗಿದೆ. ಆದ್ದರಿಂದ ನಮ್ಮ ದೇಶದಲ್ಲಿ ಸೇತುವೆಗಳಾಗಬೇಕು ಮತ್ತು ರಸ್ತೆಗಳಾಗಬೇಕು ಎಂದು ನಾನು ಅನೇಕಾವರ್ತಿ ಈ ಸಭೆಯಲ್ಲಿ ಹೇಳಿದ್ದೇನೆ. ಅಲ್ಲದೆ ಮಲೆನಾಡಿನ ವಿಚಾರದಲ್ಲಿ ಹೇಳುವುದಾದರೆ ಅಲ್ಲಿ ಸಂಚಾರ ಸೌಕರ್ಯ ಯಾವ ಕೆಳಗಿನ ಮಟ್ಟದಲ್ಲಿದೆಯೆಂಬುದನ್ನು ಮಾನ್ಯ ಮಂತ್ರಿಗಳು ಅರಿತಿದ್ದಾರೆ. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೆ ಅನೇಕ ಕಡೆಗಳಲ್ಲಿ ಸೇತುವೆಯಿಲ್ಲ, ರಸ್ತೆಗಳಿಲ್ಲ; ಮಳೆಗಾಲದಲ್ಲಿ ಆರುತಿಂಗಳ ಕಾಲ ಒಂದೇ ಸಮನೆ ಮಳೆ ಹೊಯ್ಯುತ್ತಿರಬೇಕಾದರೆ ಸ್ಕೂಲಿಗೆ ಹೋಗುವುದಕ್ಕಾಗಲಿ, ಆಸ್ಪತ್ರೆಗೆ ಹೋಗುವುದಕ್ಕಾಗಲಿ, ಸಂತೆಗೆ ಹೋಗುವುದಕ್ಕಾಗಲಿ, ಯಾವುದಕ್ಕಾದರೂ ರಸ್ತೆಗಳು ಮತ್ತು ಸೇತುವೆಗಳು ಬಹಳವಾಗಿ ಬೇಕಾಗಿವೆ. ಆದ್ದರಿಂದ ಮಲೆನಾಡಿನ ಈ ಅವಶ್ಯಕತೆಯನ್ನು ಕಂಡು ಹಿಂದಿನ ಸರ್ಕಾರಗಳವರು ಮಲೆನಾಡಿನ ವಿಚಾರದಲ್ಲಿ ಅಲ್ಲಿನ ಸೌಕರ್ಯಕ್ಕಾಗಿ ಬಹಳ ಹಣ ಒದಗಿಸಿದ್ದರು; ಹಿಂದಿನ ಸರ್ಕಾರದಲ್ಲಿ 5 ಲಕ್ಷ ರೂಪಾಯಿಗಳನ್ನು ಹಳೆಯ ಮೈಸೂರಿಗೆ ಒದಗಿಸಿದ್ದರು. ಆದರೆ ಈ ದಿವಸ ಸೇತುವೆ ಮತ್ತು ರಸ್ತೆಗಳಿಗೆ ಮಲೆನಾಡಿನ ಬಗ್ಗೆ ಯಾವ ಹಣವನ್ನೂ ಒದಗಿಸಿಲ್ಲ. ನಮ್ಮ ರಾಜ್ಯಪಾಲರ ಭಾಷಣದಲ್ಲಾಗಲಿ, ಹಣಕಾಸಿನ ಸಚಿವರ ಭಾಷಣದಲ್ಲಾಗಲಿ ಮಲೆನಾಡಿನ ಅಭಿವೃದ್ಧಿ ಬಗ್ಗೆ ಮಲೆನಾಡಿನ ಸೌಕರ್ಯದ ಬಗ್ಗೆ ಏನೂ ಹೇಳಿಲ್ಲ. ಅಲ್ಲದೆ ಬಡ್ಜೆಟ್ಟಿನಲ್ಲೂ ಕೂಡ ಮಲೆನಾಡಿನ ಸೇತುವೆ ಮತ್ತು ಸಂಚಾರ ಸೌಕರ್ಯಗಳಿಗಾಗಿ ಯಾವ ಹಣವನ್ನೂ ಮೀಸಲಾಗಿಟ್ಟಿಲ್ಲ. ಹಳೆಯ ಮೈಸೂರಿನಲ್ಲಿ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಈಗ ಕರ್ಣಾಟಕದ ಅನೇಕ ಭಾಗ ಒಂದುಗೂಡಿರುವಾಗ, ಮಲೆನಾಡಿನ ಅನೇಕ ಭಾಗ ಬಂದಿರುವಾಗ—ಈಗತಾನೆ ಮಹಿಳಾ ಸದಸ್ಯರೊಬ್ಬರು ಕಾರವಾರ ಜಿಲ್ಲೆಯಲ್ಲಿ ಸಂಚಾರ ಸೌಕರ್ಯ ಚೆನ್ನಾಗಿಲ್ಲವೆಂದು ಹೇಳಿದರು, ಅಲ್ಲದೆ ಶ್ರೀ ಸುಂತಂಕರ್ ರವರೂ ಕೂಡ ಬೆಳಗಾಂ ಪ್ರದೇಶದ ಮಲೆನಾಡು ಪ್ರಾಂತದಲ್ಲಿ ಸಂಚಾರ ಸೌಕರ್ಯದ ಅಭಾವವಿದೆಯೆಂದು ಹೇಳಿದರು—ಅಂದಮೇಲೆ ಮಲೆನಾಡಿನ ವಿಚಾರಗಳನ್ನು ಗಮನಿಸಿ ಸಂಚಾರ ಸೌಕರ್ಯಕ್ಕೆ ಹೆಚ್ಚು ಹಣ ಒದಗಿಸುವ ಆವಶ್ಯಕತೆಯಿತ್ತು, ಒದಗಿಸಿಲ್ಲ ಎಂಬುದು ವ್ಯಕ್ತವಾಗುತ್ತದೆ. ಈಗಲಾದರೂ ಇದನ್ನು ಗಮನಿಸಿ ಮಲೆನಾಡಿಗೆ ಜಾಸ್ತಿ ಹಣ ಒದಗಿಸಿ ಸೌಕರ್ಯ ಕಲ್ಪಿಸಬೇಕೆಂದು ಮರಾಮತ್ ಸಚಿವರನ್ನು ಬಹಳ ವಿನಯದಿಂದ ಪ್ರಾರ್ಥಿಸುತ್ತೇನೆ.

ಅಲ್ಲದೆ ಜಿಲ್ಲಾ ಬೋರ್ಡ್ ರಸ್ತೆಗಳಲ್ಲಿ ಮುಖ್ಯವಾದ ರಸ್ತೆಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹಿಂದೆ ಸರ್ಕಾರದವರು ಒಂದು ಆರ್ಡರ್‌ಮಾಡಿ ಜಿಲ್ಲೆಗಳಿಂದ ಒಂದು ಪ್ರಪೋಸಲ್ ಬರಮಾಡಿಕೊಂಡರು. ಆ ಪ್ರಪೋಸಲ್ ಪ್ರಕಾರ ಜಿಲ್ಲೆಗೆ 250 ಮೈಲಿ ರಸ್ತೆಯನ್ನು ಸರ್ಕಾರದವರು ತೆಗೆದುಕೊಳ್ಳುವರೆಂಬ ನಿರೀಕ್ಷಣೆಯಿತ್ತು. ಹಿಂದೆ ಪ್ರಶ್ನೋತ್ತರ ಕಾಲದಲ್ಲಿ ಮಾನ್ಯ ಸಚಿವರು ಉತ್ತರ ಹೇಳುತ್ತಾ ಒಂದು ಪ್ರಪೋಸಲ್ ಯಾವುದಿದೆ ಅದು ಇನ್ನೂ ಕಾರ್ಯಗತಮಾಡುವುದಕ್ಕೆ ಸಾಧ್ಯವಾಗಿಲ್ಲ, ಇಂಜನಿಯರುಗಳು ಹೆಚ್ಚಿನ ಹಣ ಬೇಕೆಂದು ಕೇಳಿದ್ದಾರೆ, ಅದನ್ನು ಒದಗಿಸುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಅದನ್ನು ಹೇಗೆ ಒದಗಿಸಬೇಕು, ಎಷ್ಟು ಒದಗಿಸಬೇಕು ಎಂಬುದು ಮಾನ್ಯ ಮಂತ್ರಿಗಳಿಗೆ ಸೇರಿದ್ದು. ಮುಖ್ಯವಾಗಿ ರಸ್ತೆಗಳು ಈಗ ಹಾಳಾಗಿವೆ. ಜಿಲ್ಲಾ ಬೋರ್ಡಿನಲ್ಲಿ ಸಾಕಾದಷ್ಟು ಹಣವಿಲ್ಲ. ಇದಕ್ಕೆ ಹೆಚ್ಚಿನ ಹಣ ಬರುವ ಹಾಗೆ ಸ್ಥಳೀಯ ಸಂಸ್ಥೆಗಳ ಸಚಿವರು ಪ್ರಯತ್ನ ಮಾಡುತ್ತಾರೆಂದು ನಿರೀಕ್ಷ ಮಾಡುತ್ತೇನೆ. ಈಗ ಸಂಸ್ಥಾನದಲ್ಲಿ ಬಹಳ ಮುಖ್ಯವಾದ ರಸ್ತೆಗಳು ಸರ್ಕಾರದ ಲಿಸ್ಟಿಗೆ ಸೇರುತ್ತವೆ, ಕೂಡಲೆ ಅವುಗಳ ಕೆಲಸ ಕೈಕೊಳ್ಳಬೇಕು ಎಂದು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಚಾರ, ಮರಾಮತ್ ಇಲಾಖೆಯಲ್ಲಿ ಎಸ್ಟಿಮೇಟ್ ಆಗುವುದೇ ನಿಧಾನ, ಆದಮೇಲೆ ಮಂಜೂರಾಗುವದು ಇನ್ನೂ ನಿಧಾನ, ಮಂಜೂರಾದಮೇಲೆ ಟೆಂಡರ್ ಕರೆದು ಕೆಲಸ ಕೊಡುವುದು ಬಹಳ ನಿಧಾನ, ಹೀಗಾಗಿ ಯಾವ ಒಂದು ಅಂದಾಜು ಈ ದಿವಸ ತಯಾರಾಗಿರುವುದು ಕಾರ್ಯರೂಪಕ್ಕೆ ಬಂದು ಕೆಲಸ ಮಾಡುವ ವೇಳೆಗೆ ಆ ಅಂದಾಜಿನ ಖರ್ಚುಬಾಬು ಒಂದಕ್ಕೆ ಮೂರರಷ್ಟಾಗಿ ಕೆಲಸಗಳು ನಿಧಾನವಾಗಿ ಬಹಳ ಹಣವೂ ಖರ್ಚಾಗುತ್ತದೆ, ಕೆಲಸಗಳೂ ನಿಧಾನವಾಗುತ್ತವೆ. ಆ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಅಂದಾಜನ್ನು ಕ್ಷಿಪ್ರವಾಗಿ ತಯಾರು ಮಾಡಿಸಬೇಕು, ಕ್ಷಿಪ್ರವಾಗಿ ಮಂಜೂರು ಮಾಡಬೇಕು, ಕಾರ್ಯರೂಪಕ್ಕೆ ಕ್ಷಿಪ್ರವಾಗಿ ತರಬೇಕು. ಹಾಗೆ ಮಾಡಿದರೆ ಹೆಚ್ಚಾಗಿ ಖರ್ಚಾಗುವ ಹಣ ಕಡಮೆಯಾಗುತ್ತದೆಂದು ನಿರೀಕ್ಷಣೆ ಮಾಡಬಹುದು. ಅಲ್ಲದೆ ಮರಾಮತ್ ಇಲಾಖೆ ವಿಚಾರದಲ್ಲಿ ಈಗ ಕೆಲಸ ಬಹಳ ನಿಧಾನವಾಗುತ್ತಿದೆಯೆಂದು ಬಹಳವಾಗಿ ಟೀಕೆಮಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಶಿವಮೊಗ್ಗ—ಹರಿಹರ ರಸ್ತೆ ಬಹಳ ಮುಖ್ಯವಾದುದು. ಅಲ್ಲಿ ಪ್ರತಿದಿವಸ 30-40 ಬಸ್ಸುಗಳು, ಅನೇಕ ಲಾರಿಗಳು ತಿರುಗಾಡುತ್ತವೆ. ಅಲ್ಲಿರುವ ಬೇಲದಹಳ್ಳಿ ಸೇತುವೆ ಮುರಿದು ಹೋಗಿ ಎರಡು ವರ್ಷಗಳಾದರೂ ಇನ್ನೂ ರಿಪೇರಿಯಾಗಿಲ್ಲ. ಹೆಚ್ಚು ಪ್ರವಾಹ ಬಂದಾಗ ಬಸ್ಸು ಅಲ್ಲಿ ಟ್ರಾನ್ಷಿಪ್ ಆಗಬೇಕಾಗುತ್ತದೆ, ದೋಣಿಯಲ್ಲಿ ದಾಟಬೇಕಾಗುತ್ತದೆ, ಸೇತುವೆ ಕೆಲಸ ಅಲ್ಲೇಕೆ ಇಷ್ಟು ನಿಧಾನವಾಗಿದೆಯೆಂಬುದನ್ನು ಗಮನಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಹೀಗೆ ಅನೇಕ ವಿಚಾರಗಳಲ್ಲಿ ಕೆಲಸ ನಿಧಾನವಾಗುತ್ತಿದೆ. ಕಂಟ್ರಾಕ್ಟರು ಅಸಮರ್ಥಕರಾಗಿರುವುದರಿಂದ ಅಥವಾ ಬೇರೆ ಕಾರಣದಿಂದ ನಿಧಾನವಾಗುತ್ತಿದೆ. ಅದನ್ನು ಪರಿಶೀಲಿಸಿ ಜಾಗ್ರತೆ ಸರಿಪಡಿಸಿದರೆ ಹೆಚ್ಚು ಸೌಕರ್ಯವಾಗುವುದಲ್ಲದೆ ಹಣವೂ ಉಳಿತಾಯವಾಗುತ್ತದೆಯೆಂದು ನಿರೀಕ್ಷಣೆ ಮಾಡಬಹುದು.

ಇನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಉಳಿತಾಯ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳಿಗೆ ಮೂರುನಾಲ್ಕು ಸಲಹೆ ಕೊಡಬೇಕೆಂದಿದ್ದೇನೆ. ಅಮಾನಿ ಕೆಲಸ ಇಂಜನಿಯರಿಂಗ್ ಇಲಾಖೆಯಲ್ಲಿ ಮಾಡುತ್ತಾರೆ. ದೊಡ್ಡ ದೊಡ್ಡ ಇರಿಗೇಷನ್ ಪ್ರಾಜೆಕ್ಟುಗಳಲ್ಲಿ, ದೊಡ್ಡ ಕಟ್ಟಡಗಳ ನಿರ್ಮಾಣದಲ್ಲಿ, ಸರ್ಪ್ಲಸ್ ಮೆಟೀರಿಯಲ್ಸ್ ಉಳಿಯುತ್ತವೆ. ಅದರ ವಿಲೇವಾರಿ ಎಷ್ಟು ಮಟ್ಟಿಗೆ ಆಗುತ್ತದೆ, ಹೇಗಾಗುತ್ತದೆ ಎಂದು ಕೂಲಂಕಷವಾಗಿ ವಿಮರ್ಶೆಮಾಡಬೇಕಾಗಿದೆ. ಅಲ್ಲದೆ ಆಂಟಿ ಕರಪ್ಷನ್ ಮತ್ತು ಎಫಿಷಿಯೆನ್ಸಿ ಆಡಿಟ್ ಇಲಾಖೆಯಲ್ಲಿ ಇಂಜಿನಿಯರ್ ಆಫೀಸರಿದ್ದರೆ ಅವರಿಗೆ ಇರುವ ನ್ಯೂನತೆ ತಿಳಿಸಲು ಅನುಕೂಲವಾಗುತ್ತದೆ. ಆ ಇಲಾಖೆಯಲ್ಲಿ ಇಂಜನೀಯರ್ ಆಫೀಸರನ್ನು ಇಡಬೇಕು. ಅದಲ್ಲದೆ ಮರಾಮತ್ ಶಾಖೆ ಮಂತ್ರಿಗಳ ಹತ್ತಿರ ಅವರ ಪರ್ಸನಲ್ ಅಸಿಸ್ಟೆಂಟ್ ಆಗಿರುವವರೂ ಕೂಡ ಇಂಜಿನಿಯರಿಂಗ್

(ಶ್ರೀ ಎ. ಆರ್. ಬದರೀನಾರಾಯಣ್)

ಇಲಾಖೆಯವರೇ ಆಗಿದ್ದರೆ ಹೆಚ್ಚಿನ ಅನುಕೂಲ ಎಂಬುದನ್ನು ಮನಗಾಣಬೇಕು. ಕಂಟ್ರಾಕ್ಟರುಗಳ ಹೆಸರುಗಳು ಕೂಡ ರಿಜಿಸ್ಟರ್ ಆಗಬೇಕು. ಅವರ ಪೂರ್ವೋತ್ತರವೇನು, ಹಿಂದೆ ಹೇಗೆ ಕೆಲಸಮಾಡಿದ್ದಾರೆ, ಮುಂದೆ ಹೇಗೆ ಮಾಡಬಹುದು, ಅವರ ನಡತೆ ಹೇಗಿದೆ ಎಂಬುದನ್ನು ಕೂಡ ನಿಗಾದಲ್ಲಿಡಬೇಕು. ಅದಕ್ಕಾಗಿ ಒಂದು ರಿಜಿಸ್ಟರಿಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನೂ ಅನೇಕ ವಿಷಯಗಳಿವೆ. ಅವನ್ನು ಹೇಳಲು ಕಾಲವಿಲ್ಲದ್ದರಿಂದ ಒಂದೇ ಒಂದು ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಮಲೆನಾಡಿನ ಕಮ್ಯೂನಿಕೇಷನ್ ಸೇತುವೆಗಳು ಮತ್ತು ರಸ್ತೆ ಬಗ್ಗೆ 5 ಲಕ್ಷ ರೂಪಾಯಿಗಳನ್ನು ಹಿಂದೆ ಕೊಟ್ಟಿದ್ದರು, ಈಗ ಕಡೆಯ ಪಕ್ಷ 10 ಲಕ್ಷ ರೂಪಾಯಿಗಳನ್ನಾದರೂ ಒದಗಿಸಬೇಕು ಎಂದು ಪ್ರಾರ್ಥಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಮಾನ್ಯ ಸಭಾಪತಿಗಳೇ, ಈ ದಿವಸ ಈ ಡಿಮ್ಯಾಂಡುಗಳ ಮೇಲೆ ಮಾತನಾಡುವಾಗ ಸರ್ಕಾರದ ನೀತಿಯ ಮೇಲೆ ಮಾತನಾಡಲು ಸಹಾ ನನಗೆ ಕೊಟ್ಟಿರುವ ಹತ್ತು ನಿಮಿಷಗಳಲ್ಲಿ ನನ್ನನ್ನು ಚುನಾಯಿಸಿ ಕಳುಹಿಸಿರತಕ್ಕ ಪ್ರಜೆಗಳಲ್ಲಿ ಒಬ್ಬರಿಗಾದರೂ ತಕ್ಕ ರಸ್ತೆಗಳನ್ನು ಮಾಡಿಸಲು ಸಾಧ್ಯವೇ ಎಂಬುದನ್ನು ಯೋಚಿಸಿ ಹೇಳಬೇಕಾಗಿದೆ. ನಮ್ಮ ಮಂತ್ರಿಗಳಾದ ಶ್ರೀವೀರಣ್ಣಗೌಡರು ಕೂಡ ನಮ್ಮ ಕಡೆಯಿಂದ ಬಂದಿರತಕ್ಕವರು. ಅವರಿಗೂ ನಮ್ಮ ಕಡೆಯಲ್ಲಿರುವ ಕಷ್ಟಗಳೆಲ್ಲ ಗೊತ್ತು. ನಮ್ಮ ಕಡೆಯ ರಸ್ತೆಗಳನ್ನು ಸರಿಪಡಿಸಬೇಕೆಂದು ಎಷ್ಟೋ ದಿವಸಗಳಿಂದ ಸರ್ಕಾರವನ್ನು ಕೇಳುತ್ತಿದ್ದರೂ ಏನೂ ಆಗಲಿಲ್ಲ. ಸ್ವಾಮೀ, ನಮ್ಮ ಚನ್ನಪಟ್ಟಣ ಬಹಳ ಹಿಂದುಳಿದಿದೆ. ಜನ ಸಂಖ್ಯೆ ಪ್ರಕಾರವೂ ಕೂಡ 100ರಲ್ಲಿ 92 ಭಾಗ ಜನ ಹಿಂದುಳಿದವರು. ಇದು ಶ್ರೀಮಾನ್ ವೀರಣ್ಣಗೌಡರಿಗೂ ತಿಳಿದಿರುವ ವಿಷಯ. ಯಾವ ಪ್ರದೇಶವೂ ಮುಂದಕ್ಕೆ ಬರಬೇಕಾದರೆ communication ಇಲ್ಲದಿದ್ದರೆ ಅಲ್ಲಿ ಜಮೀನು ಇರತಕ್ಕ ರೈತರಿಗೆ ಏನೂ ಅನುಕೂಲವಾಗುವುದಿಲ್ಲ. ವ್ಯವಸಾಯಗಾರರು ಉದ್ಧಾರವಾಗಬೇಕಾದರೆ ಅವರ ಜೀವನ ಉತ್ತಮವಾಗಬೇಕು. ಈ ದೃಷ್ಟಿಯಿಂದ ಅವರ ಸ್ಥಿತಿ ಉತ್ತಮವಾಗಬೇಕಾಗಿದ್ದರೆ, ವ್ಯಾಪಾರಸ್ಥರಿಗೆ ವ್ಯಾಪಾರ ಚೆನ್ನಾಗಿ ಆಗಬೇಕಾಗಿದ್ದರೆ, communications ಇಲ್ಲದೆ ಯಾವ ಪ್ರದೇಶವೂ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ನನ್ನ ತಾಲ್ಲೂಕಿನಲ್ಲಿ ರಸ್ತೆಗಳು ಎಂದರೆ ಇಲ್ಲವೇ ಇಲ್ಲ. ಈಗ ನಮ್ಮೂರಿನಿಂದ ಮದ್ದೂರಿಗೇನೋ ರಸ್ತೆಯಿದೆ. ಚಿಕ್ಕಮಾಗಳೂರಿಗೆ ಹೋಗಬೇಕಾದರೆ ಸರಿಯಾದ ರಸ್ತೆಗಳಿಲ್ಲದಿರುವುದರಿಂದ ಬೇರೆ ಕಡೆಗಳಿಂದ ಸುತ್ತಿಕೊಂಡು ಹೋಗಬೇಕಾಗಿದೆ. ಇವೊತ್ತಿನ ದಿವಸ ನಮ್ಮ ತಾಲ್ಲೂಕು ಪ್ರತಿಯೊಂದು ಭಾಗದಲ್ಲೂ ಹಿಂದುಳಿದಿವೆ. ಚನ್ನಪಟ್ಟಣದಿಂದ ಮದ್ದೂರಿನ ಕಡೆಗೆ ಹೋಗುವ ಒಂದು ಮೋಟಾರಿನ ರೋಡು ಬಿಟ್ಟರೆ. ಸುತ್ತಮುತ್ತಲಿನ ಪ್ರದೇಶಗಳಿಗೆ ಹೋಗಲು ಸರಿಯಾದ ರಸ್ತೆ ಸೌಕರ್ಯಗಳಿಲ್ಲ. ಚನ್ನಪಟ್ಟಣದಿಂದ ಚಿರಸಾರೆಗೆ ಹೋಗುವ ರಸ್ತೆ ಹನ್ನೊಂದು ಮೈಲಿಗಳಿರುವುದು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದೆ. ಈ ಹನ್ನೊಂದು ಮೈಲಿಗಳನ್ನು ಸರ್ಕಾರದವರು ತೆಗೆದುಕೊಂಡರೆ, ಮದ್ದೂರು, ಮದ್ದೂರಿನಿಂದ ತುಮಕೂರು ಈ ಕಡೆಗಳಿಗೆ ಹೋಗಲು ಅನುಕೂಲವಾಗುತ್ತದೆ. ಅದರಲ್ಲೂ ಕೂಡ ತುಮಕೂರಿನಿಂದ ಕುಣಿಗಲ್ಲಿಗೆ ಹೋಗಬೇಕಾದರೆ ಬಹಳ ತೊಂದರೆಯಾಗಿದೆ. ಇಲ್ಲಿ ಎರಡು ಮೈಲಿಗಳ ರಸ್ತೆ ಡಿಸ್ಟ್ರಿಕ್ಟು ಬೋರ್ಡಿಗೆ ಸೇರಿದೆ. ಇದನ್ನು ಸರ್ಕಾರದ P.W.D. ಇಲಾಖೆಯವರು ವಹಿಸಿಕೊಂಡರೆ ತುಮಕೂರು ಜಿಲ್ಲೆಗೆ ಕನೆಕ್ಷನ್ ಕೊಡುವಂತಾಗುತ್ತದೆ. ಬರೀ ಈ ಎರಡು ಮೈಲಿಗಳ ರಸ್ತೆಯನ್ನು ಮಾಡದೆ ಇರುವುದರಿಂದ ಪ್ರಯಾಣ ಮಾಡುವ ಜನರಿಗೆ ತೊಂದರೆಯಾಗಿದೆ. ಈ ಎರಡು ಎರಡೂವರೆ ಮೈಲಿ ಇರುವ ಈ ಜಿಲ್ಲಾ ಬೋರ್ಡಿನ ರಸ್ತೆಯನ್ನು ಸರ್ಕಾರಿ ರೋಡಿನ ಜೊತೆಗೆ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇವೊತ್ತಿನ ದಿವಸ ಹಿಂದೆ ಹಳೆಯ ಮೈಸೂರಿನ ರೆಪ್ರೆಸೆಂಟೇಟೀವ್ ಅಸೆಂಬ್ಲಿಯಲ್ಲಿ ನಾನು ಹೇಳುತ್ತಿದ್ದಂತೆಯೇ ಈ ಚನ್ನಪಟ್ಟಣದ ತಾಲ್ಲೂಕಿನಲ್ಲಿ ನೀರಾವರಿಗೆ ಏನೂ ಪ್ರಾಮುಖ್ಯತೆ ಕೊಟ್ಟಿಲ್ಲ. ಕೆರೆ ಕಟ್ಟೆಗಳನ್ನು ಬೇರೆ ಬೇರೆ ಪ್ರಾಜೆಕ್ಟುಗಳನ್ನೇನೋ ಕಟ್ಟುತ್ತಾರೆ. ಆದರೆ ಕಟ್ಟಿದ ಮೇಲೆ ಅದರಿಂದ ಸರಿಯಾದ ಫಲವು ನಮಗೆ ದೊರೆಯಬೇಕು. ಆದರೆ ಈಗ ಹಾಗೆ ಆಗುತ್ತಿಲ್ಲ. ನಮ್ಮ ಚನ್ನಪಟ್ಟಣದ ಹತ್ತಿರದಲ್ಲೇ ಕಣ್ವಪ್ರಾಜೆಕ್ಟನ್ನು ಕಟ್ಟಿದರು. ಆದರೆ ನೀರು ಸರಿಯಾಗಿ ತುಂಬಲಿಲ್ಲ. ಹೀಗೆ ಇದಕ್ಕೆ ಸುಮಾರು 30—40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಕೂಡ ಇದರಿಂದ ಜನಗಳಿಗೆ ಅಷ್ಟು ಪ್ರಯೋಜನವಾಗುತ್ತಿಲ್ಲ. ವ್ಯವಸಾಯ ಮಾಡುವ ರೈತರಿಗೆ ಭತ್ತ ಬೆಳೆಯಲು ಅಥವಾ ಇನ್ಯಾವ ಬೆಳೆಯನ್ನಾದರೂ ಬೆಳೆಯಲು ಸಾಕಾದಷ್ಟು ನೀರು ಒದಗುವುದಿಲ್ಲ. ಇದರಿಂದ ವ್ಯವಸಾಯಗಾರರಿಗೆ ಕಷ್ಟವಾಗಿದೆ. ಈಗ ಈ ನಮ್ಮ ರಾಮನಗರದ ಹತ್ತಿರ ಮೊದಲಿನಿಂದ ಒಂದು ಕೆರೆಗೆ ನೀರು ತೊರೆಯಿಂದ ಬರುವಂತೆ ಒದಗಿಸಬೇಕು ಎಂದು ಹಿಂದಿನ ಒಂದು ಪ್ಲಾನಿದೆ. ಜೊತೆಗೆ ಕುಣಿಗಲ್ ಕಡೆ ಬೇಕಾದಷ್ಟು ನೀರಾವರಿ ಯೋಜನೆಗಳನ್ನು ಮಾಡಲು ಪ್ರಯತ್ನಮಾಡಿ ಈಗ ಐದು ವರ್ಷದಿಂದಲೂ ಮಾಡುತ್ತಿದ್ದಾರೆ. 1951—52ನೆಯ ಇಸವಿಯಿಂದಲೂ ಬೇಕಾದಷ್ಟು ಮಾಡುತ್ತಿದ್ದಾರೆ. ಅದಾದ ಮೇಲೆ ಈಗಲೂ ಮಾಡುತ್ತಿದ್ದಾರೆ. ಇನ್ನೂ ಅಷ್ಟು ಮಾಡಲಿ ; ನಾವು ಅದನ್ನು ಬೇಡವೆಂದು ಹೇಳುವುದಿಲ್ಲ. ಅದೇ ರೀತಿಯಾಗಿ ನಮ್ಮ ಚನ್ನಪಟ್ಟಣದ ತಾಲ್ಲೂಕಿನಲ್ಲಿ ಮತ್ತು ಅದರ ಸುತ್ತಲಿನ ಪ್ರದೇಶಗಳಿಗೆ ಒಂದು ಕೆರೆಯನ್ನಾದರೂ ಸರಿಪಡಿಸಿ ನೀರಾವರಿಗೆ ತಕ್ಕಂತೆ ಮಾಡಿ ಒಂದು ನೂರು ಜನಗಳಲ್ಲಿ 25ಜನಕ್ಕಾದರೂ ಒಂದೊಪ್ಪತ್ತಿನ ಅನ್ನ ತಿನ್ನುವಷ್ಟು ಅವಕಾಶ ಮಾಡಿ ಎಂದು ಹೇಳುತ್ತಾ ಬಂದಿದ್ದೇನೆ. ಯುಗಾದಿ ಹಬ್ಬದ ಹೊತ್ತಿಗಾದರೂ ಸ್ವಲ್ಪ ಪ್ರಯತ್ನ ನಡೆಸಿ ಇಷ್ಟನ್ನಾದರೂ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ (ಚಂದ್ರಶೇಖರಪುರ),—ಕುಣಿಗಲ್ಲಿನಿಂದ ಚನ್ನಪಟ್ಟಣಕ್ಕೆ ನೀರನ್ನು ತೆಗೆದುಕೊಂಡು ಬರುವ ವಿಷಯದಲ್ಲಿ ತಾವು ಮಾತನಾಡುತ್ತಿದ್ದೀರೇನು ? ಕುಣಿಗಲಿನಿಂದ ತರಲು ನೀರಿನ ಸೌಕರ್ಯವಿಲ್ಲ. ನಿಮ್ಮ ಇಷ್ಟ ಪ್ರಕಾರ ಸಾಧ್ಯವಾಗುವುದಾಗಿದ್ದರೆ ತೆಗೆದುಕೊಳ್ಳಬಹುದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸರ್ಕಾರದವರು ಕಷ್ಟಪಟ್ಟರೆ ಅದನ್ನು ತರುವುದೇನು ಕಷ್ಟವಿಲ್ಲ ಎಂದರೆ ಮನಸ್ಸು ಮಾಡಿದರೆ ಕಷ್ಟವಾಗುವುದಿಲ್ಲ. ಮನಸ್ಸುಮಾಡದಿದ್ದರೇ ಕಷ್ಟವಾಗುತ್ತದೆ. ನಮ್ಮ ಚನ್ನಪಟ್ಟಣದ ತಾಲ್ಲೂಕಿನಲ್ಲೇ ಎಷ್ಟೋಕೆರೆಗಳ ತೂಬು ಒಡೆದು ಹೋಗಿವೆ. ಈ ಕೆರೆಗಳನ್ನು ರಿಪೇರಿ ಮಾಡಿ

ದ್ದರೆ ಕೂಡ ನಮಗೆ ನೀರು ಸಿಕ್ಕುತ್ತಿತ್ತು. ಇದನ್ನು ಕೂಡ ಮಾಡದೆ ಅಷ್ಟಕ್ಕೇ ನಿಂತುಹೋಗಿದೆ. ಈಗಲೇನೋ ಕಾವೇರಿಯಿಂದ ನೀರು ತರಬೇಕೆಂದು ಯೋಚಿಸಿದ್ದಾರೆಂದು ತಿಳಿಯಿತು. ಇದರ ಯೋಜನೆಯ ಪ್ರಕಾರ ಸುಮಾರು ಹತ್ತು ವರ್ಷಗಳಲ್ಲಿ ಈ ಕಾವೇರಿಯ ನೀರನ್ನು ಮದ್ದೂರು, ಸೋಮನಹಳ್ಳಿಯ ಮುಖಾಂತರ ಹಾದು ಹೋಗುವ ಹಾಗೆ ಮಾಡಬೇಕೆಂದಿದ್ದಾರೆ ಎಂದು ತಿಳಿದಿದೆ. ಅದೇ ಲೆವಲ್‌ನಲ್ಲಿ ಈ ಕಾವೇರಿಯಿಂದ ತರತಕ್ಕ ನೀರನ್ನು ನಮ್ಮ ಚನ್ನಪಟ್ಟಣದ ಗಡಿಯಿಂದ ತೆಗೆದುಕೊಂಡು ಹೋಗಲು ಸಾಧ್ಯವಿದೆಯೋ ಎನ್ನುವುದನ್ನು ನಾನು ಈಗ ಸಲಹೆ ಮಾಡುತ್ತಿದ್ದೇನೆ. ಈ ಸಲಹೆಯನ್ನು ಸ್ವಲ್ಪ ತೀವ್ರವಾಗಿ ಮನಸ್ಸಿಗೆ ತೆಗೆದುಕೊಂಡು ಯೋಚಿಸುತ್ತಾರೆಂದು ನಂಬುತ್ತೇನೆ. ಶ್ರೀಮಾನ್ ವೀರಣ್ಣಗೌಡರು ಈಗ ಪಿ.ಡಬ್ಲ್ಯು.ಡಿ. ಮಿನಿಸ್ಟರು ಆಗಿದ್ದಾರೆ. ಅವರ ಕಾಲದಲ್ಲಿ ಆದರೂ ಇದನ್ನು ಮಾಡಿಕೊಟ್ಟರೆ ಮಾಡಿ ಕೊಡಬಹುದು. ಅವರು ಈ ಸಲಹೆಯನ್ನು ಸರಿಯಾಗಿ ಪರಿಶೀಲಿಸುತ್ತಾರೆಂದು ನಂಬಿ ಈ ಸಲಹೆ ಮಾಡುತ್ತಿದ್ದೇನೆ. ಅಲ್ಲದೆ ನಮ್ಮ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಕೋರುತ್ತೇನೆ. ನೀರಾವರಿಗೆ ತಕ್ಕ ಸೌಕರ್ಯವಿಲ್ಲದೆ ಇರುವುದರಿಂದ ನಮ್ಮ ಚಗಚಗೆರೆ ಪ್ರಾಂತದಲ್ಲಿ ಇರುವ ಪ್ರದೇಶವನ್ನು ಯಾರೂ notice ಮಾಡಿಲ್ಲ. ರಾಮನಗರದ ಹತ್ತಿರ ಇರುವ ಈ ಪ್ರಾಂತದಲ್ಲಿ ಒಂದು ಹಳ್ಳದಲ್ಲಿ ಹುಚ್ಚು ಹೊಳೆಯು ಹಾಗೆ ನೀರು ಹರಿದು ಹೋಗುತ್ತಿದೆ. ಇದನ್ನು ಯಾರೂ ತಡೆಯುತ್ತಿಲ್ಲ. ಈ ಜಾಗದಲ್ಲಿ ಒಂದು ಕಟ್ಟೆಯನ್ನು (Dam)ನ್ನು ಕಟ್ಟಿದರೆ ಸುಮಾರು 3—4 ಸಾವಿರ ಎಕರೆ ಜಮೀನು ನೀರಾವರಿಯಾಗುತ್ತದೆ. ಇದನ್ನು ನಮ್ಮ ಮಾನ್ಯ ಮಂತ್ರಿಗಳು ಮಾಡಿಕೊಟ್ಟರೆ ಜನ ಇವರ ಹೆಸರನ್ನು ಶಾಶ್ವತವಾಗಿ ನೆನೆಸಿಕೊಂಡಿರುತ್ತಾರೆ. ಏನೋ ಒಂದು ಒಳ್ಳೆಯ ಅವಕಾಶ ಅವರ ಕೈಯಲ್ಲಿದೆ. ಅದನ್ನು ಕಳೆದುಕೊಂಡರೆ ಅನಂತರ ಮಾಡುವುದಕ್ಕೆ ಆಗುವುದಿಲ್ಲ. ಹಿಂದಿನಿಂದಲೂ ಕೂಡ ಇದನ್ನು ಮಾಡುವಂತೆ ರೆಪ್ರೆಸೆಂಟೇಷನ್ನುಗಳು ಬಂದಿವೆ. ಆದ್ದರಿಂದ ಇದನ್ನು ಈಗಲಾದರೂ ಮಾಡಿಸಿಕೊಡಬೇಕು.

ಇನ್ನು ಜಿಲ್ಲಾ ಬೋರ್ಡುಗಳಲ್ಲಿ ಕೆಲವು ರಸ್ತೆಗಳಿವೆ. ಅವನ್ನು P.W.D. ರೋಡುಗಳಾಗಿ ಮಾಡಿದ್ದರೆ ಆ ರಸ್ತೆಗಳು ಚೆನ್ನಾಗಿ ಇರುತ್ತಿದ್ದುವು. ಬೈರಾಪಟ್ಟಣ, ಬೇವೂರು ಈ ಕಡೆಗಳಲ್ಲೆಲ್ಲ ಜಿಲ್ಲಾ ಬೋರ್ಡಿನ ರಸ್ತೆಗಳಿವೆ. ಅವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ವಹಿಸಲು ಹಿಂದೆಯೇ ಜಿಲ್ಲಾ ಬೋರ್ಡಿನಿಂದ ಕ್ರಮಗಳು ನಡೆದಿತ್ತು ಮತ್ತು ಜಿಲ್ಲಾ ಬೋರ್ಡಿನಿಂದ ಮಂಜೂರು ಆಗಿತ್ತೆಂದು ಕೇಳಿದ್ದೆ. ಆದರೆ ಸರ್ಕಾರದಿಂದ ಈ ಜಿಲ್ಲಾ ಬೋರ್ಡಿಗೆ ತಕ್ಕ ಪರಿಹಾರವನ್ನು ಕೊಟ್ಟಿಲ್ಲದಿರುವುದರಿಂದ ಆ ರಸ್ತೆ ಕೆಲಸಗಳು ಹಾಗೆಯೇ ಉಳಿದಿವೆ. ಈಗಲಾದರೂ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದರೆ ಏನಾದರೂ ಪ್ರಯೋಜನವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ತರುತ್ತಿದ್ದೇನೆ. ಅದರಲ್ಲಿಯೂ ಬಡವರ ಪ್ರಯೋಜನಕ್ಕಾಗಿ ಅವರಿಗೆ ಎಷ್ಟೋ ಕೆಲಸಗಳಿದ್ದರೂ ಅದರೊಳಗೆ ಇದನ್ನೂ ಒಂದೆಂದು ಭಾವಿಸಿ ತ್ವರಿತವಾಗಿ ರಿಕಾರ್ಡುಗಳನ್ನು ತರಿಸಿಕೊಂಡು ಸಾಧ್ಯವಾದಷ್ಟು ಅನುಕೂಲ ಮಾಡುತ್ತಾರೆಂದು ನಂಬುತ್ತೇನೆ. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಸರ್ವೆ ನಡೆದಿಲ್ಲ. ಸರ್ವೆ ನಡೆಸಬೇಕೆಂದು ನಾನೆ ಎರಡು ಸಲ ಫೋನು ಮಾಡಿ ಹೇಳಿದ್ದೇನೆ. ಆದರೂ ಏನೂ ಕೆಲಸ ನಡೆದಿಲ್ಲ. ಈಗಲಾದರೂ ಪಿ. ಡಬ್ಲ್ಯು.ಡಿ. ಮಿನಿಸ್ಟರಾದ ಶ್ರೀಮಾನ್ ವೀರಣ್ಣಗೌಡರು ಒಂದು ದೊಡ್ಡ ಮನಸ್ಸು ಮಾಡಿ ಈ ತಾಲ್ಲೂಕಿನ ರೆವೆನ್ಯೂವನ್ನು ಹೆಚ್ಚು ಮಾಡಲು ಈ ರೀತಿಯಾದ ಕೆಲಸಗಳನ್ನು ಮಾಡಿದರೆ ಸರ್ಕಾರಕ್ಕೆ ಆದಾಯ ಬರುತ್ತದೆ.

ಈಗ ಬಸ್ಸು ರಾಷ್ಟ್ರೀಕರಣವನ್ನು ಪೂರ್ತಿಯಾಗಿ ಮಾಡದೆ ಇರುವುದರಿಂದ ಬಸ್‌ಲೈಸೆನ್ಸ್‌ಗಳನ್ನು ತಮಗೆ ಬೇಕಾದವರಿಗೆ ಕೊಡುವುದಕ್ಕನುಕೂಲವಾಗಿದೆ. ಪೂರ್ತಿ ರಾಷ್ಟ್ರೀಕರಣಮಾಡಬೇಕು. ಹಾಗೆ ಮಾಡದೆ ಅರ್ಧಂಬರ್ಧ ಮಾಡಿ ಕೆಲವರಿಗೆ ಅನುಕೂಲವಾಗುವ ಹಾಗೆ ಮಾಡಿದರೆ ಪ್ರಯೋಜನವಿಲ್ಲವೆಂದು ಮಾತ್ರ ಹೇಳಿ ಮುಗಿಸುತ್ತೇನೆ.

ಶ್ರೀ ಕೆ. ಎ. ಪಾಟೀಲ್ (ತಾಳೀಕೋಟೆ).—ಮಾನ್ಯ ಅಧ್ಯಕ್ಷರೇ, ಈ ಹೊತ್ತಿನ ದಿವಸ ಈ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ನಮ್ಮ ಮುಂದೆ ಬಂದಿರುವುದು ಆನಂದದ ಸಂಗತಿ. ನನ್ನ ಕ್ಷೇತ್ರದಲ್ಲಿರುವ ಕುಂದುಕೊರತೆಗಳನ್ನು ಹೇಳುತ್ತೇನೆ. ಅದರಲ್ಲಿಯೂ ಬಿಜಾಪುರದಲ್ಲಿ ರಸ್ತೆಗಳ ಪರಿಸ್ಥಿತಿ ಚಿಂತಾಜನಕವಾಗಿದೆ. ತಾಳೀಕೋಟೆ ಕ್ಷೇತ್ರದಲ್ಲಂತೂ ರಸ್ತೆಗಳೇ ಇಲ್ಲವೆಂದು ಹೇಳಬೇಕಾಗಿದೆ. ಸೇತುವೆಗಳಂತೂ ಇಲ್ಲವೇ ಇಲ್ಲ. ಅಲ್ಲಿನ ಜನರ ಪರಿಸ್ಥಿತಿ ಹೇಗಿದೆಯೆಂದರೆ, ಮಳೆಗಾಲದಲ್ಲಿ ಸುಮಾರು ಆರು ತಿಂಗಳ ಕಾಲ ಇರುವೆಗಳಂತೆ ಜೀವಿಸಬೇಕಾಗಿದೆ. ದೋಣಿಯಲ್ಲಿ ನೀರು ತುಂಬಿ ಹರಿಯುತ್ತಿದ್ದು ಒಂದು ಕಡೆಯಿಂದ ಮತ್ತೊಂದು ಕಡೆ ಸಂಚಾರ ಮಾಡಲು ಅಸಾಧ್ಯವಾಗುತ್ತದೆ. ಅದರಿಂದ ಆರು ತಿಂಗಳಿಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಮೊದಲೇ ಅವರು ಮಾಡಿಕೊಳ್ಳಬೇಕಾಗಿದೆ. ಮಳೆಗಾಲದಲ್ಲಿ ಆ ಪ್ರದೇಶ ಮಲೆನಾಡಿಗಿಂತ ಹೆಚ್ಚಾಗಿರುತ್ತದೆ. ಮಲೆನಾಡನ್ನೇ ಬೇರೆಯಾಗಿ ಮಾಡಿ ಅಲ್ಲಿನ ಕೆಲಸಗಳನ್ನು ಮಾಡಬೇಕೆಂದು ಶ್ರೀಮಾನ್ ಬದರೀ ನಾರಾಯಣ್ ಅವರು ಹೇಳಿದರು. ಹಾಗೆಯೇ ನಮ್ಮ ತಾಳೀಕೋಟೆಯಲ್ಲಿ ದೋಣಿ ಭಾಗವನ್ನು ಬೇರೆಯಾಗಿ ಮಾಡಿದರೆ ಒಳ್ಳೆಯದು. ಆ ಪ್ರದೇಶದಲ್ಲಿ ಎಲ್ಲ ಅನುಕೂಲತೆಗಳೂ ಇದ್ದು ಸರಿಯಾಗಿ ಬೆಳೆದರೆ ಒಟ್ಟು ನಮ್ಮ ಮೈಸೂರು ದೇಶಕ್ಕೇ ಆಹಾರ ಸೌಕರ್ಯವನ್ನೊದಗಿಸಬಹುದು. ಮಲೆನಾಡಿಗಿಂತ ಬಹಳ ಚೆನ್ನಾಗಿ ವ್ಯವಸಾಯ ಮಾಡುವ ಪ್ರದೇಶ ಅದು. ಹೀಗಿದ್ದರೂ ಆ ಭಾಗದಲ್ಲಿ ಯಾವ ರಸ್ತೆಗಳನ್ನೂ ಹಾಕಿಲ್ಲ, ಸೇತುವೆಗಳನ್ನೂ ಹಾಕಿಲ್ಲ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರ ಹೇಳಬೇಕಾಗಿದೆ. ಏನೋ ವಿರೋಧ ಪಕ್ಷದವರು ಹೇಳುತ್ತಾರೆಂದು ಭಾವಿಸಿ ಉದಾಸೀನ ಮಾಡಬಾರದು. ನನಗೆ 15 ಸಾವಿರ ಓಟುಗಳು ಬಂದು ನಾನು ಆ ಕ್ಷೇತ್ರದಿಂದ ಚುನಾಯಿತನಾಗಿದ್ದರೂ ಅಲ್ಲಿ ಕಾಂಗ್ರೆಸ್‌ಗೆ ಸೇರಿರುವವರು ಇದ್ದಾರೆ. ಆದಕಾರಣ ಯಾವುದೇ ಒಂದು ಪಕ್ಷದವರು ಬಂದಿದ್ದರೂ ಅನೇಕರು ಕಾಂಗ್ರೆಸ್ ಪಕ್ಷದವರಲ್ಲದಿದ್ದರೆ ಅವರ ಕ್ಷೇತ್ರಕ್ಕೆ ಕೆಲಸ ಮಾಡಬಾರದೆಂಬ ಭಾವನೆಯನ್ನಿಟ್ಟುಕೊಳ್ಳಬಾರದು.

ಬಿಜಾಪುರದಿಂದ ಉಕ್ಕಲಿ ಮೇಲಿಂದ ತುಂಬಿಗೆವರೆಗೆ ರಸ್ತೆ ಮಾಡಿದರೆ ಸುಮಾರು 20 ಹಳ್ಳಿಗಳಿಗೆ ರಸ್ತೆಯ ಸೌಕರ್ಯ ಒದಗುತ್ತದೆ. ಉಕಮನಾಳದ ದೋಣಿಗೆ ಸೇತುವೆ ಕಟ್ಟಿದರೆ ತುಂಬಿಗೆವರೆಗೆ ಓಡಾಡುವುದಕ್ಕೆ ಅನುಕೂಲ ವಾಗುತ್ತದೆ. ಹಿಟ್ನಹಳ್ಳಿ ದೋಣಿಗೆ ಸೇತುವೆ ಅಗತ್ಯ. ಮಳೆಗಾಲದಲ್ಲಿ ಮೂರು ತಿಂಗಳಕಾಲ ಆಕಡೆಯವರು ಅಲ್ಲೇ, ಈಕಡೆಯವರು ಇಲ್ಲೇ, ಇರಬೇಕಾಗುತ್ತದೆ. ಆದಕಾರಣ ದೇವರ ಹಿಪ್ಪರಿಗೆ ಹೂವಿನ ಹಿಪ್ಪರಿಗೆ ನಡುವೆ ಸಾತೇಹಾಳ ಸೇತುವೆ ಕಟ್ಟಬೇಕು. ಬಾಗೇವಾಡಿಯಿಂದ ತೆಲಗಿ

(ಶ್ರೀ ಕೆ. ಎ. ಪಾಟೀಲ್)

ವರೆಗೆ ಸಿಕ್ಕುವ ಹಳ್ಳಗಳಿಗೆ ಸೇತುವೆಗಳನ್ನು ಕಟ್ಟ ಬೇಕು. ಹೀಗೆ ಮಾಡುವುದರಿಂದ ಆ ಪ್ರಾಂತದ ಜನ ರಿಗೆ ಟಪ್ಪಾಲ್ ಮತ್ತು ರೈಲ್ವೆ ಸೌಕರ್ಯ ದೊರಕು ತ್ತದೆ. ಕೊಲ್ಹಾರದ ಸುತ್ತಮುತ್ತ ಹಳ್ಳಿಗಳಿವೆ. ನಡುವೆ ನದಿ ಇರುವುದರಿಂದ ಕೊಲ್ಹಾರ ದಾಟಿ ಬಾಗಲ ಕೋಟೆ ದಾಟಿ ಹೋಗಬೇಕಾದರೆ ಬಹಳ ತ್ರಾಸವಾಗು ತ್ತದೆ. ಮಂತ್ರಿಗಳು ಯೋಚನೆಮಾಡಿ ಈ ತೊಂದರೆ ಪರಿಹಾರ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳ ಬೇಕು. ಬಿಜಾಪುರ—ತುಂಬಿಗೆ ರಸ್ತೆಯನ್ನು ಖಂಡಿತ ಮಾಡಬೇಕು. ತಾಳೀಕೋಟೆ ಹತ್ತಿರ ಅಂಬಳನೂರು ಹಳ್ಳಕ್ಕೆ ಸೇತುವೆ ಕಟ್ಟಬೇಕು. ಡೋಣಿಯ ನೀರು ಉಪ್ಪುನೀರು, ಕುಡಿಯುವ ನೀರಲ್ಲ. ದನಕರುಗಳಿಗೂ ಈ ನೀರು ಕುಡಿಯಲಾಗುವುದಿಲ್ಲ. ಆದಕಾರಣ ಕಡೆ ಕೊಳ ಕೆರೆಯನ್ನು ಬೇಗ ಕಟ್ಟಿಸಬೇಕು. ಅಲ್ಲದೆ ಡೋಣೂರು, ಕುಮಟಗಿ ಕೆರೆಗಳನ್ನು ರಿಪೇರಿ ಮಾಡ ಬೇಕು. ಐನೂರು ಜನಸಂಖ್ಯೆಗೆ ಕಡಮೆ ಇರುವ ಗ್ರಾಮಗಳಿಗೆ ಸರ್ಕಾರದವರೇ ಸ್ವಂತ ಖರ್ಚಿನಿಂದ ನೀರಿನ ಸೌಕರ್ಯವನ್ನೊದಗಿಸಬೇಕು. ಸರ್ಕಾರದ ವರು ಮಲೆನಾಡಿನ ವಿಚಾರದಲ್ಲಿ ಏನು ಹೇಳುತ್ತಾರೋ ಅದೆಲ್ಲವೂ ನನ್ನ ಕ್ಷೇತ್ರಕ್ಕೆ ಅನ್ವಯಿಸುತ್ತದೆ. ಡೋಣ ಬಾಡಿಲಲ್ಲಿ ಎ. ಇ. ಎಸ್. ಬ್ಲಾಕ್ ತೆರೆದು ಅಲ್ಲಿನ ಪ್ರಜೆಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳು ತ್ತೇನೆ.

Sri V. VENKATAPPA (Minister for Education).—How long will the House sit, Sir?

Mr. SPEAKER.—I have proposed to the Hon'ble the Leader of the Opposition that after Sri Rachia's speech we should adjourn. The reply may be given by the Hon'ble Minister tomorrow and afterwards other subjects may be discussed. I have not as yet received a good response from him. He said they should be finshed today.

*ಶ್ರೀ ಬಿ. ರಾಚಯ್ಯ (ಚಾಮರಾಜನಗರ—ಅನು ಸೂಚಿತಜಾತಿಗಳು).—ಮಾನ್ಯ ಸಭಾಪತಿಗಳೇ, ಈ ಹೊತ್ತು ನಮ್ಮ ಮುಂದಿರುವ ಹತ್ತು ಬೇಡಿಕೆಗಳ ಮೇಲೆ ನನಗೆ ಕೊಟ್ಟಿರುವ ಹತ್ತುನಿಮಿಷ ಕಾಲದಲ್ಲಿ ಎಲ್ಲ ವಿಷಯಗಳನ್ನೂ ತಿಳಿಸುವುದು ಕಷ್ಟ. ಆದಷ್ಟು ವಿಷಯಗಳನ್ನು ಸಂಕ್ಷೇಪವಾಗಿ ತಿಳಿಸುತ್ತೇನೆ. ಮೊದ ಲನೆಯದಾಗಿ ಮರಾಮತ್ ಇಲಾಖೆಯ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ತಿಳಿಸಲಿಚ್ಛಿಸುತ್ತೇನೆ.

[SRI M. M. PATEEL in the Chair]

ದೇಶದಲ್ಲಿ ಬಹಳ ಹೆಚ್ಚಿನ ಕೆಲಸ ಈ ಮರಾಮತ್ ಇಲಾಖೆಯಿಂದ ನಡೆಯಬೇಕಾಗಿರುವುದರಿಂದ ಈ ಇಲಾಖೆಯನ್ನು ಮೂರು ಭಾಗಗಳಾಗಿ ವಿಂಗಡಿಸಿ ದ್ದಾರೆ. ಕಟ್ಟಡಗಳನ್ನು ಕಟ್ಟಿಸುವುದಕ್ಕೊಂದು, ನೀರಾ ವರಿ ಯೋಜನೆಗಳನ್ನು ಮಾಡುವ ಶಾಖೆ ಒಂದು ಮತ್ತು ರಸ್ತೆ ಮತ್ತು ಇದಕ್ಕೆ ಸಂಬಂಧ ಪಟ್ಟ ಸೇತುವೆಗಳನ್ನು ಕಟ್ಟುವುದೊಂದು ಶಾಖೆ. ಈ ಮೂರು ಭಾಗಗಳಲ್ಲಿ ಕೆಲಸ ಬಹಳ ವಿಳಂಬವಾಗಲು ಅವಕಾಶವಾಗಿದೆ. ಶ್ರೀ ಮುಕ್ಕಣ್ಣಪ್ಪನವರು ಮಾತನಾಡುವಾಗ, ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಬೇರೆಬೇರೆ ಇರುವುದನ್ನು ತಪ್ಪಿಸಬೇಕೆಂದು ಹೇಳಿದರು. ಬೇರೆಬೇರೆ ಇಲಾಖೆ ಗಳು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಬೇಕಾದಷ್ಟು ಹಣ ವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಕೊಟ್ಟರೂ ಜಾಗ್ರತೆ ಕಟ್ಟಡಗಳಾಗದೆ ಅವರಿಗೆ ಬಹಳ ತೊಂದರೆಯಾಗುತ್ತಿದೆ ಉದಾಹರಣೆಗೆ ವಿದ್ಯಾಭ್ಯಾಸದ ಇಲಾಖೆಯ ಎಷ್ಟೋ ಸ್ಕೂಲು ಮತ್ತು ಹಾಸ್ಟೆಲ್ ಕಟ್ಟಡಗಳಾಗದೆ ಕೆಲಸ ಬಹಳ ನಿಧಾನವಾಗಿದೆ. ಎರಡನೆಯದಾಗಿ ತಾಲ್ಲೂಕು ಮತ್ತು ಜಿಲ್ಲಾ ಹೆಡ್ ಕ್ವಾರ್ಟರುಗಳಲ್ಲಿ ಕ್ವಾರ್ಟರ್ಸ್ ಕಟ್ಟಬೇಕಾಗಿರುವುದನ್ನು ಕಟ್ಟದೆ, ನಿಧಾನವಾಗಿದೆ. ಹೀಗಿರುವಾಗ ಇವುಗಳನ್ನೆಲ್ಲಾ ಜಾಗ್ರತೆ ನಡೆಸಲು ಬೇರೆಬೇರೆ ಇಲಾಖೆ ಅಥವಾ ಶಾಖೆಗಳಿರಬೇಕಾದುದು ಅತ್ಯಗತ್ಯವೆಂದು ತಿಳಿದುಕೊಂಡಿದ್ದೇನೆ. ನೀರಾವರಿ ಕಾಮಗಾರಿಗಳ ವಿಚಾರದಲ್ಲಿ ಹೇಳುವುದಾದರೆ, ಮೇಜರ್ ಮತ್ತು ಮೈನರ್ ನೀರಾವರಿ ಯೋಜನೆಗಳ ಬಗ್ಗೆ ಎಲ್ಲವನ್ನೂ ಹೇಳಲು ನನಗೆ ಕಾಲಾವಕಾಶವಿಲ್ಲ ದಿರುವಕಾರಣ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದೆ ರಡು ವಿಷಯಗಳನ್ನು ಮಾತ್ರ ನಿವೇದಿಸಿಕೊಳ್ಳು ತ್ತೇನೆ.

1 P.M.

ಈ ಸುವರ್ಣಾವತಿ ನದಿ ಚಾಮರಾಜನಗರ, ಯಳಂ ದೂರು, ಟಿ.-ನರಸೀಪುರ ಮತ್ತು ಕೊಳ್ಳೇಗಾಲ ಈ ನಾಲ್ಕು ತಾಲ್ಲೂಕುಗಳಿಗೂ ಸೇರಿರುತ್ತದೆ. ಈ ಹಿಂದೆ ಇದ್ದಂಥ ಅನೇಕ ದಿವಾನರುಗಳೂ ಮತ್ತು ಸರ್ಕಾರವೂ ಈ ನದಿಯಿಂದ ಈ ನಾಲ್ಕು ತಾಲ್ಲೂಕುಗಳಿಗೂ ಅನು ಕೂಲವಾಗುವಂತೆ ಅನೇಕ ಕೆರೆ ಕಟ್ಟೆಗಳನ್ನು ಕಟ್ಟಿ ಈ ನದಿಯ ನೀರಿನಿಂದ ಜನರಿಗೆ ಅನುಕೂಲವಾದ ರೀತಿಯಲ್ಲಿ ಬೆಳೆಗಳನ್ನು ಬೆಳೆಯುವುದಕ್ಕಾಗಿ ಸೌಕರ್ಯಗಳನ್ನು ಕಲ್ಪಿ ಸಿಕೊಟ್ಟಿದ್ದರು. ಆದರೆ ಆಕಾಲದಲ್ಲಿ ಹಾಗೆ ಕಟ್ಟಿಸಲಾದ ಅನೇಕ ಕೆರೆ ಕಾಲುವೆಗಳು ಈ ದಿವಸ ರಿಪೇರಿಯಾಗದೆ ಜನರಿಗೆ ಬಹಳ ಅನಾನುಕೂಲವಾಗಿದೆ. ಆದರೆ ಇತ್ತೀ ಚೆಗೆ ಸರ್ಕಾರದವರು ಆ ರಿಪೇರಿಯಾಗತಕ್ಕ ಕೆರೆ ಕಾಲುವೆ, ಕಟ್ಟೆಗಳ ಬಗ್ಗೆ 98 ಸಾವಿರ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಿರುತ್ತಾರೆ. ಆದರೆ ನಾನೀಗ ಹೇಳುತ್ತಿರುವ ಕೆಲಸ ಆ ಅಂದಾಜುಗಳಲ್ಲಿ ಸೇರಿರುವುದಿಲ್ಲ. ಸರ್ಕಾರದವರು ಈ ಕೆಲಸವನ್ನು ಕೂಡಲೇ ಮಂಜೂರು ಮಾಡಿಸಿ ರೈತರಿಗೆ ಅನು ಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಯಳಂದೂರು ತಾಲ್ಲೂಕು ಹಿಂದಿನಿಂದಲೂ ಜಹಗೀರ್ ದಾರರ ವಶದಲ್ಲಿತ್ತು. ಆದ್ದರಿಂದ ಆ ಪ್ರದೇಶ ಅಕ್ಕ ಪಕ್ಕದ ತಾಲ್ಲೂಕುಗಳಿಗಿಂತಲೂ ಬಹಳ ಹಿಂದುಳಿದಿದೆ. ಆದರೆ ಆ ಪ್ರದೇಶದಲ್ಲಿ ಸುಮಾರು 33 ಕೆರೆ-ಕಾಲುವೆ ಗಳ ರಿಪೇರಿ ಬಗ್ಗೆ ಹಿಂದಿನ ಸಾಲಿನ ಬಡ್ಜೆಟ್ಟಿನಲ್ಲಿ 9·4 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಆ ಮೊಬ ಲಗಿನಲ್ಲಿ ಈ ವರೆಗೆ 3½ ಲಕ್ಷ ರೂಪಾಯಿಗಳಾಗಲೇ ಖರ್ಚಾಗಿದೆ. ಅದ್ದರಿಂದ ಸರ್ಕಾರದವರು ದಯವಿಟ್ಟು ಈ ಕೆಲಸವನ್ನು ತ್ವರಿತಗೊಳಿಸಬೇಕೆಂದು ನಾನು ಅವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಮೈನರ್ ಪ್ರಾಜೆಕ್ಟುಗಳ ವಿಚಾರ ತೆಗೆದುಕೊಂಡರೆ ಕೆಲವು ಕೆರೆ ಕಟ್ಟೆಗಳು ಮತ್ತು ಕಾಲುವೆಗಳು ಪ್ರಕೃತಿಯ ಒಂದು ವಿಕೋಪದಿಂದ ಮಳೆ ಹೆಚ್ಚಾಗಿಬಿದ್ದು ಅವು ಒಡೆದು ಹೋಗಿವೆ. ಇದರಿಂದ ರೈತರಿಗೆ ಬಹಳ ಅನಾನು ಕೂಲವಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ಮುಂಜಾಗ್ರತೆ ಕಾರ್ಯ ಕೈಗೊಳ್ಳಲು ಕೆಲವು ಕಾಂಗಾರಿಗಳ ರಿಪೇರಿಗಳನ್ನು ತೆಗೆದುಕೊಳ್ಳಲು ಅನು ಮತಿ ಕೊಟ್ಟಿದ್ದಾರೆ. ಆದರೆ ಇನ್ನು ಕೆಲವು ಕಾಂಗಾರಿ ಗಳು ಹಾಗೇ ಅನುಮತಿ ದೊರೆಯದೆ ಉಳಿದಿರುತ್ತವೆ. ಇವುಗಳಿಗೂ ಕೂಡ ಸರ್ಕಾರದವರು ನಿಗಾ ಕೊಟ್ಟು

ರೈತರಿಗೆ ಅನುಕೂಲಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನು ಕಮ್ಯುನಿಕೇಷನ್ ವಿಚಾರದಲ್ಲಿ ಒಂದೊಂದು ರಸ್ತೆಯನ್ನೂ ಒಂದೊಂದು ಬಾಬಾಗಿ ವಿಂಗಡಿಸಿದ್ದೀರಿ. ಈಗ ಈ ರಸ್ತೆಗಳಲ್ಲಿ ಸ್ಟೇಟ್ ಫಂಡ್ ರಸ್ತೆ P.W.D. ರಸ್ತೆ, ಡಿಸ್ಟ್ರಿಕ್ಟ್ ಬೋರ್ಡುರಸ್ತೆ, ಇಂಟರ್ ವಿಲೇಜ್ ಕಮ್ಯುನಿಕೇಷನ್ ರೋಡ್ ಎಂದು ನಾನಾ ವಿಭಾಗಗಳಲ್ಲಿರುತ್ತವೆ. ಇದರಿಂದ ಒಂದೊಂದು ತರಹೆ ರಸ್ತೆಗೆ ಒಂದೊಂದು ರೀತಿಯ ಮೊಬಲಗನ್ನು ಒದಗಿಸುತ್ತಿದ್ದಾರೆ. ಅದರಿಂದ ಕೆಲವು ರಸ್ತೆಗಳು ಚೆನ್ನಾಗಿವೆ, ಕೆಲವು ಬಹಳ ನಾದುರಸ್ತಾಗಿವೆ. ಇದಲ್ಲದೆ ಈ ದಿವಸ P.W.D. ರಸ್ತೆಯಲ್ಲಿ ಮತ್ತೆ A.B.C. ಎಂಬುದಾಗಿ ಮೂರು ವಿಭಾಗಗಳನ್ನು ಮಾಡಲಾಗಿದೆ. ಈ ರಸ್ತೆಗಳಿಗೆ A.R. grants ನ್ನು ಮಂಜೂರು ಮಾಡುವಾಗ ಈ ವಿಭಾಗಗಳಿಗೆ ಅಷ್ಟು ಲಕ್ಷ್ಯಕೊಡದೆ ಯಾವ ಯಾವ ರಸ್ತೆಗಳ ಆವಶ್ಯಕತೆ ಹೇಗಿದೆ ಎಂಬುದನ್ನು ನೋಡಿಕೊಂಡು ದುಡ್ಡನ್ನು ಕೊಡಬೇಕಾದದ್ದು ಅತಿ ಮುಖ್ಯವಾದಂಥ ವಿಚಾರ. ನಮ್ಮ ಚಾಮರಾಜನಗರದಿಂದ ಟಿ.-ನರಸೀಪುರಕ್ಕೆ ಹೋಗತಕ್ಕ ರಸ್ತೆ P.W.D. ರಸ್ತೆ ಆಗಿದ್ದರೂ ಅನೇಕ ಕಡೆ ಈ ರಸ್ತೆಗೆ ಇನ್ನೂ ಆಸ್ಫಾಲ್ಟ್ ಆಗಿಲ್ಲ. ಇದು ಇನ್ನೂ Unsanctioned estimate ಗಳ ರಸ್ತೆಗಳ ಲಿಸ್ಟಿನಲ್ಲಿ ಸೇರಿರುತ್ತದೆ. ಈ ರಸ್ತೆಯಲ್ಲಿ ಬಸ್‌ಗಳ ಓಡಾಟ ಬಹಳವಾಗಿದೆ. ಇದರಹಾಗೆಯೇ ಕೌಲಂದೆ-ಮಾಂಬಳ್ಳಿ ರೋಡುಸಹ ಅನ್ ಸ್ಯಾಂಕ್ಷನ್ಡ್ ವರ್ಕ್ಸ್‌ನಲ್ಲಿ ಸೇರಿದೆ. ಹೀಗೆ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹೋಗತಕ್ಕ ರಸ್ತೆಗಳ ವಿಚಾರವೇ ಹೀಗಿರುವಾಗ ನಾವು ಊರಿಂದೂರಿಗೆ ಹೋಗತಕ್ಕ ರಸ್ತೆಗಳ ವಿಚಾರವನ್ನು ಮಾತನಾಡಬೇಕಾದ್ದೇ ಇಲ್ಲ. ಹೀಗಾಗಿ ಆ ತಾಲ್ಲೂಕಿನ ನಾನಾ ಭಾಗಗಳಲ್ಲಿ ಹೋಗತಕ್ಕ ಸುಮಾರು 967 ಮೈಲಿ ಇಂಟರ್ ವಿಲೇಜ್ ಕಮ್ಯುನಿಕೇಷನ್ ಪೈಕಿ ಕೇವಲ ಅಲ್ಲಲ್ಲಿ ಕೆಲವು ಕೈಮರಗಳು ಮಾತ್ರ ನಿಂತಿರುತ್ತವೆಯೇ ಹೊರತು ರಸ್ತೆ ಹೆಸರೇ ಇಲ್ಲ. ಈ ಹಿಂದೆ ಇದ್ದಂಥ ಸರ್ಕಾರ ಈ ರಸ್ತೆಯಲ್ಲಿ 250 ಮೈಲಿಗಳನ್ನು P.W.D.ಗೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿತ್ತು. ಆದರೆ ಅದಿನ್ನೂ ಜಾರಿಗೆ ಬಂದಂತೆ ಕಾಣುತ್ತಿಲ್ಲ. ಈ ದಿವಸ ಜಿಲ್ಲಾ ಬೋರ್ಡುಗಳವರು ತಮ್ಮಲ್ಲಿ ಹಣ ಇಲ್ಲವೆಂದು ಅನೇಕ ರಸ್ತೆಗಳ ಕೆಲಸವನ್ನೇ ಕೈಬಿಟ್ಟಿದ್ದಾರೆ. ಹಳ್ಳಿಯಿಂದ ಹಳ್ಳಿಗೆ ಹೋಗಲು ಎತ್ತು ಗಾಡಿ ಸಹ ತಿರುಗಾಡಲು ಅವಕಾಶವಿಲ್ಲದಂತಾಗಿ ಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ಜಿಲ್ಲಾ ಬೋರ್ಡ್ ರಸ್ತೆಗಳ ಪೈಕಿ ಕೆಲವನ್ನು P.W.D. ಗೋ ಅಥವಾ ಸ್ಟೇಟ್ ಫಂಡ್ ರಸ್ತೆಗೋ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಯಳಂದೂರಿನ ಹತ್ತಿರ ಸುವರ್ಣಾವತಿ ನದಿಗೆ ಒಂದು ಸೇತುವೆ ಕಟ್ಟಲು ಈ ವರ್ಷ ಬಡ್ಜೆಟ್ಟಿನಲ್ಲಿ ಹಣವನ್ನು ತೆಗೆದಿಟ್ಟಿದ್ದಾರೆ. ಹೋದ ವರ್ಷದ ಬಡ್ಜೆಟ್ಟಿನಲ್ಲೂ ಹೀಗೆ ಹಣವನ್ನು ತೆಗೆದಿಡಲಾಗಿತ್ತು. ಆದರೆ ಆ ಹಣ ಲ್ಯಾಪ್ಸಾಗಿ ಹೋಯಿತು. ಈ ವರ್ಷವಾದರೂ ಹಾಗೆ ಲ್ಯಾಪ್ಸಾಗುವುದಕ್ಕೆ ಅವಕಾಶ ಕೊಡದೆ ಬೇಗ ಆ ಅಂದಾಜನ್ನು ಮಂಜೂರುಮಾಡಿ ಸೇತುವೆ ಕೆಲಸ ಈ ವರ್ಷವೇ ಮುಗಿದು ಅಲ್ಲಿಯ ಜನರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕುಡಿಯುವ ನೀರಿನ ಸರಾಬರಾಯಿ ಬಗ್ಗೆ ಚಾಮರಾಜನಗರ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಅನೇಕ ಮುನಿಸಿಪಾಲಿಟಿಗಳಿಗೆ ಸರ್ಕಾರದವರು ಹಣವನ್ನು ಸಾಲವಾಗಿ ಮಂಜೂರು ಮಾಡಿರುತ್ತಾರೆ. ಆದರೆ ಇವುಗಳನ್ನು ಕಾರ್ಯರೂಪಕ್ಕೆ ತರುವ ಹೊಣೆ P.W.D. ಕೈಲಿ ನಿಂತುಹೋಗಿದೆ. ಅನಾಯಕವಾಗಿ ಮುನಿಸಿಪಾಲಿಟಿಗಳು ಈ ದಿವಸ ಬಡ್ಡಿ ತೆರಬೇಕಾಗಿದೆ. ಇತ್ತಲಾಗಿ ಜನಗಳಿಗೆ ನೀರಿನ ಸೌಕರ್ಯವಿಲ್ಲ, ಅತ್ತ ದಂಡದ ಬಡ್ಡಿ ತೆರುವುದು ಹೀಗಾಗಿದೆ. ಈ ಕಡೆಗೆ ಸರ್ಕಾರದವರು ತಮ್ಮ ಗಮನಕೊಟ್ಟು ಈ ಯೋಜನೆಯನ್ನು ತ್ವರಿತದಿಂದ ಯಶಸ್ವಿಗೊಳಿಸಬೇಕೆಂದು ಸರ್ಕಾರದವರಿಗೊಂದು ಸೂಚನೆ ಕೊಡುತ್ತೇನೆ. ಈ ಹಿಂದೆ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಗಳ ಸಂಬಂಧವಾಗಿ ಕೆಲವು ರಸ್ತೆಗಳನ್ನು ಮಾಡಿಸಲಾಗಿತ್ತು. ಅವುಗಳೀಗ ಮಳೆ ಹೊಡೆತಕ್ಕೆ ಸಿಕ್ಕಿ ಕೊಚ್ಚಿಹೋಗಿವೆ. ಅವುಗಳ ಬಗ್ಗೆ ತಾವು ಒಂದು ಸ್ಪೆಷಲ್ ಗ್ರ್ಯಾಂಟನ್ನಾದರೂ ಕೊಟ್ಟು ಈ ರಸ್ತೆಗಳನ್ನು ಜನರ ಉಪಯೋಗಕ್ಕೆ ಅನುಕೂಲವಾಗುವಂತೆ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಾನು ಒಂದೆರಡು ಮಾತುಗಳನ್ನಾಡಿ ನನ್ನ ಭಾಷಣ ಮುಗಿಸುವವನಿದ್ದೇನೆ. ವಿರೋಧಪಕ್ಷದ ಮಾನ್ಯ ಸದಸ್ಯರಾದ ಶ್ರೀ ಲಿಂಗೇಗೌಡರು ಟೆಂಡರುವಿಚಾರದಲ್ಲಿ ಮತ್ತು ಅಂದಾಜಗಳನ್ನು ಮಂಜೂರು ಮಾಡತಕ್ಕ ವಿಚಾರದಲ್ಲಿ ಸರ್ಕಾರದ ಮೇಲೆ ಕೆಲವು ಆಕ್ಷೇಪಣೆಗಳನ್ನು ಮಾಡಿದರು, ಅವರು ಕಾಂಟ್ರಾಕ್ಟ್ ಕೆಲಸಗಳನ್ನು ತಮಗೆ ಬೇಕಾದವರಿಗೆ ಕೊಡಲು ಹಾಗೆಲ್ಲಾ ಮಾಡುತ್ತಿದ್ದಾರೆಂದು ಹೇಳಿದರು. ಆದರೆ ಕಂಟ್ರಾಕ್ಟರುಗಳಲ್ಲಿ ಯಾರು ಕಾಂಗ್ರೆಸ್, ಯಾರು ನಾನ್ ಕಾಂಗ್ರೆಸ್ ಎಂಬ ವಿಚಾರ ನನಗೆ ಗೊತ್ತಿಲ್ಲ. ಕಾಂಗ್ರೆಸಿನಲ್ಲಿರತಕ್ಕ ಅನೇಕ ಜನರು ಇತ್ತೀಚೆಗೆ ಈ ಕಾಂಟ್ರಾಕ್ಟ್ ಕೆಲಸವನ್ನು ಬಿಟ್ಟುಬಿಟ್ಟಿದ್ದಾರೆ. ಇವರು ಯಾವ ಸರ್ಕಾರವೇ ಇರಲಿ, ದೇಶದ ಕೆಲಸಕಾರ್ಯಗಳನ್ನು ತಾವು ಲಾಭ ಪಡೆಯದಂತೆ ಮಾಡಲು ಹಿಂದಿನಿಂದಲೂ ಪ್ರಯತ್ನ ಮಾಡುತ್ತಿದ್ದಾರೆ. ಈ P. W. D. ಬಾಬಿನಲ್ಲಿ ಲಂಚಗುಳಿತನವನ್ನು ನಿರ್ಮೂಲಮಾಡಬೇಕೆಂದು ಹೇಳುತ್ತಿರುವಾಗ ಕಂಟ್ರಾಕ್ಟರುಗಳೂ, ಇಂಜಿನಿಯರುಗಳೂ ಒಂದಾಗಿಬಿಟ್ಟರೆ ಅಲ್ಲಿಗೆ ಆಗಿಯೇ ಹೋಯಿತು. ಆದರೆ ಅವರು ಟೆಂಡರುಗಳನ್ನು ಅಂಗೀಕರಿಸುವಾಗ ಅವರ ಯೋಗ್ಯತೆಯನ್ನು ನೋಡಿ ಅದನ್ನು ಅಂಗೀಕರಿಸಬೇಕೆಂದು ಹೇಳಿದರು. ಆ ಮಾತನ್ನು ನಾನು ಸಹ ಒಪ್ಪುತ್ತೇನೆ. ಈ ಕಟ್ಟಡಗಳನ್ನು ಕಂಟ್ರಾಕ್ಟ್ ಮೂಲಕ ಕಟ್ಟಿಸತಕ್ಕ ವಿಚಾರದಲ್ಲಿ ನಮ್ಮ ಚಾಮರಾಜನಗರದ ಹೈಸ್ಕೂಲಿನ ವಿಚಾರವನ್ನೇ ತೆಗೆದುಕೊಳ್ಳೋಣ. ಇಲ್ಲಿಗೆ 5-6 ವರ್ಷಗಳ ಕೆಳಗೆ 80 ಸಾವಿರ ರೂಪಾಯಿಗಳಿಗೆ ಟೆಂಡರ್ ಕರೆದು ಕೆಲಸಕೊಟ್ಟರು. ಹೋದವರ್ಷ ಒಂದು ದಿವಸ ಮಳೆ ಬಂತು ಅಷ್ಟೆ. ಆ 80 ಸಾವಿರ ರೂಪಾಯಿಗಳ ಕಟ್ಟಡ ಸಂಪೂರ್ಣವಾಗಿ ಬಿದ್ದುಹೋಯಿತು, ಎಂಭತ್ತು ಸಾವಿರ ರೂಪಾಯಿಗಳ ನಷ್ಟವಾಯಿತು. ಹೀಗೆ ಅನೇಕ ಸಂದರ್ಭಗಳಲ್ಲಿ ಕೆಲವು ಕಂಟ್ರಾಕ್ಟರುಗಳೇ ಮಾರ್ಕೆಟ್ ರೇಟಿಗಿಂತಲೂ ಕಡಮೆ ಟೆಂಡರ್ ಹಾಕಿ ಇಂಥ ಕೆಲಸಗಳನ್ನು ಮಾಡಿಬಿಡುತ್ತಾರೆ. ಆದರೆ ಯಾವ ಕಂಟ್ರಾಕ್ಟರು ಹೆಚ್ಚುಲಾಭ ಪಡೆಯದೆ ಕೆಲಸ ಮಾಡಿಕೊಡಲು ಬರುತ್ತಾನೋ ಅಂಥವನಿಗೆ ಕಂಟ್ರಾಕ್ಟ್ ಮೂಲಕ ಕೆಲಸಗಳನ್ನು ಕೊಡಬೇಕೆಂಬುದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಶ್ರೀ ಬದರೀನಾರಾಯಣ್ ಅವರು ಒಂದು ಸಲಹೆಯನ್ನು ಈ ವಿಚಾರದ ಬಗ್ಗೆ ಕೊಟ್ಟಿದ್ದಾರೆ. ಅದೇನೆಂದರೆ P.W.D. ನಲ್ಲಿ ಕೆಲಸಮಾಡತಕ್ಕಂಥ ಹೆಚ್ಚು ಅನುಭವವುಳ್ಳ ಇಂಜಿನಿಯರೊಬ್ಬರನ್ನು

(ಶ್ರೀ ಬಿ. ರಾಚಯ್ಯ)

ಎಫಿಷಿಯೆನ್ಸಿ ಆಡಿಟ್ ಬಾಬಿಗೆ ಹಾಕಿದರೆ ಅನುಕೂಲ ವಿದೆ ಎಂದು. ಆದರೆ P.W.D.ನಲ್ಲಿರತಕ್ಕವರೆಲ್ಲ ಲಂಚ ತಿನ್ನುತ್ತಾರೆಂದರೆ ಅದಕ್ಕೆ ನಾನು ಒಪ್ಪುವುದಿಲ್ಲ. ಕೆಲವರಿದ್ದರೆ ಇರಬಹುದು. P.W.D. ಬಾಬಿನಲ್ಲಿ ದಕ್ಷರಾದವರನ್ನು ಎಫಿಷಿಯೆನ್ಸಿ ಆಡಿಟ್ ಶಾಖೆಗೆಹಾಕಿದರೆ ಆಗ "ತೋಳ ತೋಳ ಕುರಿ ಕಾಯುತ್ತೀಯಾ?" ಎಂದು ಕೇಳಿದರೆ "ಕೂಲಿ ಏನೂ ಬೇಡ" ಎಂದಿತಂತೆ ಎನ್ನುವಹಾಗೆ ಆಗುತ್ತದೆ. ಆದ್ದರಿಂದ ಆ ಸಲಹೆ ಅಷ್ಟೇನೂ ಅನುಕೂಲವಾಗಿಲ್ಲವೆಂದು ಹೇಳಿ ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. SPEAKER in the Chair.]

ಶ್ರೀ ಬಿ. ಇ. ರಾಮಯ್ಯ (ಸಿರುಗುಪ್ಪ).—ಸ್ವಾಮಿ, ಈಗ ನಮ್ಮ ಮುಂದಿರುವ ಡಿಮ್ಯಾಂಡನ್ನು ಸಮರ್ಥಿಸುತ್ತಾ ನಾನು ಕೆಲವು ವಿಚಾರಗಳನ್ನು ಸೂಚಿಸಲು ಬಯಸುತ್ತೇನೆ. ಮಾನ್ಯ ಮಂತ್ರಿಗಳು ಬಳ್ಳಾರಿ ಜಿಲ್ಲೆಗೆ ಅಷ್ಟಾಗಿ ಗಮನಕೊಟ್ಟಿಲ್ಲವೆಂದು ನಾನು ಹೇಳಬೇಕಾಗಿದೆ. ಏಕೆಂದರೆ ಬಳ್ಳಾರಿ ಜಿಲ್ಲೆ ಅತಿ ಹಿಂದುಳಿದ ಜಿಲ್ಲೆಯಾಗಿದೆ. ಅಲ್ಲಿನ ರಸ್ತೆಗಳು ಬಹಳ ಮಟ್ಟಿಗೆ ಸರಿಯಾಗಿಲ್ಲ. ಅದರಲ್ಲೂ ಬಳ್ಳಾರಿಯ ಜಿಲ್ಲೆಯ ಸಿರಗುಪ್ಪ ತಾಲ್ಲೂಕು ತೀರ ಹಿಂದುಳಿದ ತಾಲ್ಲೂಕು. ಈ ತಾಲ್ಲೂಕಿನ ಅಭಿವೃದ್ಧಿಸಾಧನೆಗಾಗಿ ದೇಶನೂರು ಹತ್ತಿರವಿರುವ ತುಂಗಭದ್ರನದಿಗೆ ಒಂದು ಸೇತುವೆಯನ್ನು ಕಟ್ಟಿಸಿಕೊಡಬೇಕೆಂದು ಬಹಳ ದಿವಸಗಳಿಂದ ಕೇಳಿಕೊಳ್ಳುತ್ತಿದ್ದೇವೆ. Investigation ಮಾಡುತ್ತೇವೆನ್ನುವುದರಲ್ಲೇ ಈ ಕೆಲಸ ನಿಂತಿದೆ. ಆದಷ್ಟು ಜಾಗ್ರತೆ investigation ಕೆಲಸ ಮುಗಿಸಿ ಕಾರ್ಯವನ್ನು ತೀವ್ರ ಕೈಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಿರಗುಪ್ಪ ಹತ್ತಿರ ಈ ಸೇತುವೆಯನ್ನು ಕಟ್ಟುವುದರಿಂದ ರಾಯಚೂರು, ಬಿದರೆ, ಬಿಜಾಪುರ ಜಿಲ್ಲೆಗಳಿಂದ ಬೆಂಗಳೂರಿಗೆ ಹೋಗಿ ಬರಲು ಬಹಳ ಅನುಕೂಲವಾಗುತ್ತದೆ.

ಸಿರುಗುಪ್ಪ ತಾಲ್ಲೂಕಿನಲ್ಲಿ ಅಚ್ಚೊಳ್ಳಿ ಫಿರ್ಕಾ ಬಹಳ ಹಿಂದುಳಿದ ಫಿರ್ಕಾ ಆಗಿದೆ. ಮಳೆಗಾಲದಲ್ಲಿ ಅಲ್ಲಿಗೆ ಯಾವ ಅಧಿಕಾರಿಗಳೂ ಹೋಗುವಹಾಗಿರುವುದಿಲ್ಲ. ಅಲ್ಲಿಗೆ ರಸ್ತೆಯೇ ಇಲ್ಲದೆ ತಾಲ್ಲೂಕ್ ಹೆಡ್‌ಕ್ವಾರ್ಟರಿನಿಂದ ಅಲ್ಲಿಗೆ ಹೋಗುವುದೇ ದುಸ್ತರವಾಗಿದೆ. ಆದ್ದರಿಂದ ಅಲ್ಲಿಗೆ ಹೋಗುವ ರಸ್ತೆಯನ್ನು ದುರಸ್ತು ಮಾಡಬೇಕೆಂದು ಹೇಳುತ್ತೇನೆ. ಈಗ ತಾವು ತುಂಗಭದ್ರಾ ಅಣೆಕಟ್ಟನ್ನು 50 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿದ್ದರೂ ಅದರ ಕೆಳಗಿನ ಅಚ್ಚುಕಟ್ಟು ಅಷ್ಟಾಗಿ ಅಭಿವೃದ್ಧಿಗೆ ಬಂದಿಲ್ಲ. ತೊಂಭತ್ತು ಸಾವಿರ ಎಕರೆಗಳು ಸಾಗುವಳಿಗೆ ಬರುತ್ತವೆಂದು ಅಂದಾಜು ಹಾಕಿರುವಲ್ಲಿ ಇದುವರೆಗೆ ಕೇವಲ 4,500 ಎಕರೆಗಳು ಮಾತ್ರ ಸಾಗುವಳಿಯಾಗಿವೆ. ಇದಕ್ಕೆ ಮುಖ್ಯವಾದ ಕಾರಣ ಆ ಭಾಗದಲ್ಲಿ ಸಿರುಗುಪ್ಪ ತಾಲ್ಲೂಕು ಮುಂತಾದ ಭಾಗಗಳಿಗೆ ಸೇರುವಂತೆ feeding ರಸ್ತೆ ಅನುಕೂಲವಿಲ್ಲ. ಒಂದು ಚೀಲ ಧಾನ್ಯವನ್ನು ಸಾಗಿಸಬೇಕಾದರೂ, ಕೋಣಗಳ ಮೇಲೆ ಹೇರಿಕೊಂಡು ಹೋಗಬೇಕಾಗಿದೆ. ಇಷ್ಟು ಕಷ್ಟದಲ್ಲಿ ವ್ಯವಸಾಯ ನಡೆಸುವುದು ಬಹಳ ಕಷ್ಟವಾಗಿ ನೀವು ನಿರೀಕ್ಷಿಸಿದಷ್ಟು ಜಮೀನು ಸಾಗುವಳಿಗೆ ಬರಲಿಲ್ಲವೆಂದು ನಾನು ತಿಳಿಸಬೇಕಾಗಿದೆ. ಹಾಗೆಯೇ ಆ ಭಾಗದಲ್ಲಿ ಕಾಳೂರಿನಿಂದ ಬರುವ ಮಾರ್ಗದಲ್ಲಿ ಕರೂರು ಅಡ್ಡ ರಸ್ತೆಗೆ ರೋಡ್ ಹಾಕಿಸಬೇಕು. ರಾರಾವಿ ಹತ್ತಿರದ ಕಾಜ್‌ವೇ ಕಟ್ಟಿ ಒಡೆದು ಹೋದ ಭಾಗಕ್ಕೆ 40 ಸಾವಿರ ರೂಪಾಯಿ ಅಂದಾಜು ಹಾಕಿದ್ದು ಈ ವರ್ಷದ ಬಡ್ಜೆಟ್ಟಿನಲ್ಲಿ ಕೇವಲ 5,000 ರೂಪಾಯಿಗಳನ್ನು ಒದಗಿಸಿದ್ದೀರಿ, ಈ ವರ್ಷ ಈ ಕೆಲಸವನ್ನು ಪ್ರಾರಂಭಿಸಬೇಕೆಂದು ಹೇಳುತ್ತೇನೆ.

ಆಮೇಲೆ ಕಂಪ್ಲಿಯಿಂದ ಅಚ್ಚೊಳ್ಳಿಗೆ ಒಂದು ರಸ್ತೆಯನ್ನು ಮಾಡಿಸಬೇಕಾಗಿದೆ. ನದಿಯ ದಂಡೆಯ ಮೇಲೆ ಹಾಕಿದರೆ ಈ ರಸ್ತೆ 25 ಮೈಲಿ ಯೊಳಗೇ ಆಗುತ್ತದೆ. ದಯವಿಟ್ಟು ಇದನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ.

A MEMBER.—Mr. Speaker, there appears to be no quorum.

Mr. SPEAKER.—There are more than 21 members, there is quorum. The Minister may reply.

*ಶ್ರೀ ಎಚ್. ಕೆ. ವೀರಣ್ಣಗೌಡ.—ಅಧ್ಯಕ್ಷರೇ, ಈ ಇಲಾಖೆಗೆ ಸಂಬಂಧ ಪಟ್ಟಹಾಗೆ ಈ ಹೊತ್ತು ನಡೆದಿರತಕ್ಕ ಚರ್ಚೆಯಲ್ಲಿ ಹೊರಪಟ್ಟಿರತಕ್ಕಂಥ ಅಂಶಗಳನ್ನು ಕ್ರೋಡೀಕರಿಸಿ ಹೆಚ್ಚುಕಾಲ ತೆಗೆದುಕೊಳ್ಳದೆ ಮಾತನಾಡುವುದಕ್ಕೆ ನಿಂತಿದ್ದೇನೆ. ಹೀಗೆ ಮಾಡುವುದರಿಂದ ಮಾನ್ಯ ಸದಸ್ಯರು 18 ಜನರಲ್ಲಿ ಪ್ರತಿಯೊಬ್ಬರೂ ಸೂಚಿಸಿರತಕ್ಕಂಥ ಪ್ರತಿಯೊಂದು ಅಂಶವನ್ನೂ ಉತ್ತರಿಸುವುದಕ್ಕೆ ಸಾಧ್ಯವಾಗದಿರಬಹುದು. ಅದರ ಅಗತ್ಯವೂ ಇಲ್ಲವೆಂದು ಕಾಣುತ್ತದೆ. ಏಕೆಂದರೆ ಸಾಮಾನ್ಯವಾಗಿ ಒಂದೇತರಹ ಸಲಹೆಗಳು ಬಂದಿವೆ. ಖೋತಾ ಸೂಚನೆಗಳನ್ನು ಕಳುಹಿಸಿರುವುದರಲ್ಲಿಯೂ ಅನೇಕವು ಒಂದೇ ತೆರನಾಗಿದ್ದು ಒಟ್ಟಿನಲ್ಲಿ ಅವುಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

ಒಟ್ಟು 78 ಖೋತಾ ಸೂಚನೆಗಳು ಬಂದಿವೆ ಅವುಗಳನ್ನು ಸಂಚಾರಸೌಲಭ್ಯ, ನೀರಾವರಿಸೌಕರ್ಯ ಮತ್ತು ಇತರ ಅಂಶಗಳು (miscellaneous) ಎಂದು ಭಾಗಮಾಡಿಕೊಂಡು ನಾನು ಉತ್ತರ ಹೇಳಲು ಉಪಕ್ರಮಿಸುತ್ತೇನೆ.

ಸಂಚಾರಸೌಲಭ್ಯಕ್ಕೆ ಸಂಬಧಪಟ್ಟಂತೆ ಸುಮಾರು 35 ಖೋತಾ ಸೂಚನೆಗಳನ್ನು ಮಾನ್ಯ ಸದಸ್ಯರು ಕಳುಹಿಸಿದ್ದಾರೆ. ನೀರಾವರೀ ವಿಚಾರದಲ್ಲಿಯೂ ಸುಮಾರು 35 ಇವೆ. ಇನ್ನುಳಿದ ಏಳು ಎಂಟು ಸೂಚನೆಗಳು ಬೇರೆ ಬೇರೆ ವಿವರ ಅಂಶಗಳನ್ನೊಳಗೊಂಡಿವೆ. ಈ ಭಾಗದಲ್ಲಿಯೂ ಮಾನ್ಯ ಸದಸ್ಯರುಗಳು ಒಂದೇ ತೆರನಾಗಿ ರಸ್ತೆಗಳ ಸ್ಥಿತಿ ಸರಿಯಾಗಿಲ್ಲ, ಕೆಲಸವನ್ನು asphalt ಮಾಡಿಸಬೇಕು ಇಲ್ಲವೇ concrete ಮಾಡಿಸಬೇಕು, ಹೊಸದಾಗಿ ಕೆಲವು ರಸ್ತೆಗಳನ್ನು ಮತ್ತು ಸೇತುವೆಗಳನ್ನು ಮಾಡಿಸಿಕೊಡಬೇಕು, ಜಿಲ್ಲಾ ಬೋರ್ಡ್ ರಸ್ತೆಗಳನ್ನು ಸರ್ಕಾರಕ್ಕೆ ತೆಗೆದುಕೊಂಡು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳಬೇಕು, ಇದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ಸೌಲಭ್ಯ ಕಡಮೆಯಿರುವುದರಿಂದ ಅಲ್ಲಿಗೆ ಹೆಚ್ಚಿಗೆ ಗಮನ ಕೊಡಬೇಕು ಈರೀತಿಯಲ್ಲೆಲ್ಲಾ ಸಲಹೆ ಮಾಡಿದ್ದಾರೆ. ಆ ವಿಷಯವಾಗಿ ಹೆಚ್ಚು ವಾದಮಾಡುವುದಕ್ಕೆ ಏನೇನೂ ಅವಶ್ಯಕತೆಯಿಲ್ಲ. ಸದಸ್ಯರು ಏನೇನು ಮಾತನಾಡಿದ್ದಾರೋ ಮತ್ತು ಖೋತಾ ಸೂಚನೆಗಳಲ್ಲಿ ಏನೇನು ಕಳುಹಿಸಿಕೊಟ್ಟಿದ್ದಾರೋ ಅವೆಲ್ಲವೂ ಅತ್ಯಗತ್ಯವಾದ ಕಾರ್ಯಗಳು ಎಂದು ಸರ್ಕಾರದವರು ತಕರಾರೇ ಇಲ್ಲದೆ ಒಪ್ಪಿಕೊಳ್ಳುತ್ತಾರೆ. ತೊಂದರೆಯಿರುವುದೇನಿದ್ದರೂ

ಹಣದ ತೊಂದರೆಯೋ ಎಲ್ಲಾ ಜಿಲ್ಲೆಯಲ್ಲಿರತಕ್ಕ ಈ ಎಲ್ಲ ತೊಂದರೆಗಳನ್ನು ಒಂದೇ ವರ್ಷದಲ್ಲಿ ವಿಚಾರಣೆ ಮಾಡುವುದಕ್ಕೆ ಸಾಧ್ಯವಿದೆ. ಹೆಚ್ಚಿಗೆ ಸಿಬ್ಬಂದಿಯನ್ನಿಟ್ಟುಕೊಂಡರೆ ಆಯಿತು. ಆದರೆ ಸಿಬ್ಬಂದಿಯ ಖರ್ಚು ಕೋಟ್ಯಾಂತರ ರೂಪಾಯಿಗಳಾಗುತ್ತದಲ್ಲ ಎಂಬ ಯೋಚನೆಯಿದೆ ಅಷ್ಟೆ. ಆದ್ದರಿಂದ ಹಣವಿಲ್ಲದ ನೆಪದಿಂದಲೇ ಈ ಕಾರ್ಯಗಳನ್ನು ನಿಲ್ಲಿಸುವುದು ಸಾಧ್ಯವಾಗುವುದಿಲ್ಲ. ಅನೇಕ ಸಾರಿ ನಾನು ಹೇಳಿದ್ದೇನೆ. ಹಣವಿಲ್ಲವೆಂಬ ಒಂದು ಕಾರಣದ ಮೇಲೆ ಸರ್ಕಾರದವರು ಅವಶ್ಯಕವಾಗಿ ಮಾಡಬೇಕಾದ ಕಾರ್ಯಗಳನ್ನು ಕೈಬಿಡಲಾಗುವುದಿಲ್ಲ ಎಂದು. ಏನಿದ್ದರೂ, ಯಾವಾಗ ಮಾಡಬೇಕೆಂಬುದೇ ಇರುವ ಪ್ರಶ್ನೆ. ಕೆಲವು ವೇಳೆ ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಸಾಲ ತೆಗೆದುಕೊಳ್ಳುವುದಕ್ಕೂ ಒಂದು ಅವಕಾಶವಿದೆ. ಸಾಲ ತೀರಿಸುವುದಕ್ಕೆ ಒಂದು ಮಾರ್ಗ ಮಾಡಿಕೊಂಡು ಆನಂತರ ಸಾಲವೆತ್ತಬೇಕು. ಈಗ ಒಂಬತ್ತು ಕೋಟಿ ರೂಪಾಯಿಗಳ ಹೆಚ್ಚಿಗೆ ಖೋತಾ ಬಡ್ಜೆಟ್ ಇಟ್ಟುಕೊಂಡಿದ್ದೇವೆ. ಆದ್ದರಿಂದ ಇವೆಲ್ಲಾ ಅಗತ್ಯವಾದ ಕಾರ್ಯಗಳೇ ಆದರೂ ಹಣಬೇಕು. ಒಂದೇ ಒಂದು ಉದಾಹರಣೆ ಹೇಳುವುದಾದರೆ, ಹಿಂದಿನ ಮೈಸೂರಿನ ಜಿಲ್ಲಾ ಬೋರ್ಡ್ ರಸ್ತೆಗಳನ್ನು ಸರ್ಕಾರಕ್ಕೆ ತೆಗೆದುಕೊಂಡು ದುರಸ್ತುಮಾಡಿಸಬೇಕಾದರೆ ಸುಮಾರು ಎರಡು ಕೋಟಿ ರೂಪಾಯಿಗಳು ಬೇಕಾಗುತ್ತವೆಂದು ಹೇಳಿದ್ದಾರೆ. ಹೊಸದಾಗಿ ಸೇರಿರತಕ್ಕ ಪ್ರದೇಶಗಳನ್ನು ಈ ಸಂದರ್ಭದಲ್ಲಿ ಲೆಕ್ಕಕ್ಕೆ ತೆಗೆದುಕೊಂಡರೆ ಇನ್ನೂ ಹೆಚ್ಚಿಗೆ ಬೇಕಾಗುತ್ತದೆ. ಏಕೆಂದರೆ, ನಾನು ಖುದ್ದು ಪ್ರವಾಸ ಮಾಡಿ ನೋಡಿದ್ದೇನೆ. ಸಂಚಾರಸೌಲಭ್ಯ ಅಲ್ಲಿಯೂ ಬಹಳ ಕಡಮೆಯಿದೆ. ಉತ್ತರ ಕರ್ನಾಟಕ ಜಿಲ್ಲೆಗೆ ನಾನು ಈಗ ಕೆಲವುದಿವಸಗಳ ಹಿಂದೆ ಹೋಗಿದ್ದೆ. ನದಿಯ ಪ್ರವಾಹ ಬಂದಿದ್ದು ರಸ್ತೆ ಮುಚ್ಚಿಹೋಗಿ ಒಂದು ದಿವಸವೆಲ್ಲಾ ನಾನು ಕಾದುಕೊಂಡಿದ್ದು ಮುಂದಕ್ಕೆ ಹೋಗಬೇಕಾಯಿತು. ಆದ್ದರಿಂದ ಸದಸ್ಯರು ಹೇಳಿದ್ದನ್ನು ನಾನು ಒಪ್ಪುತ್ತೇನೆ.

ಈ ಸಮಸ್ಯೆ ಬಗೆಹರಿಯುವುದು ಹೇಗೆ ಎಂದು ಕೇಳಬಹುದು. ಇದೇ ಸಲುವಾಗಿ ಇಷ್ಟೊಂದು ದಿವಸದಿಂದ ಅನುಭವಿಸಿದ್ದೇವೆ, ಸ್ವಲ್ಪ ತಡೆಯಬೇಕು. ಕೆಲವು ಸ್ನೇಹಿತರ ಗುರುತು ಹೆಚ್ಚಾಗಿರುವುದರಿಂದಲೋ, ಬಹಳ ಪ್ರಭಾವಶಾಲಿಗಳಾಗಿರುವುದರಿಂದಲೋ ಸರ್ಕಾರದವರು ಕೆಲವು ಕಡೆ ಕೆಲಸಮಾಡಿಸಿರುತ್ತಾರೆ ಎನ್ನುವುದು ಸರಿಯಲ್ಲ. ಹಿಂದೆ ಈ ಸಭೆಯಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ಇಡೀ ಹೊಸ ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟಹಾಗೆ ರಸ್ತೆಗಳು ಮತ್ತು ಸೇತುವೆಗಳ ಒಂದು ನಕ್ಷೆಯನ್ನು ತಯಾರು ಮಾಡುವ ಹಾಗೆ ಚೀಫ್ ಇಂಜನಿಯರಿಗೆ ಹೇಳಿದ್ದೇನೆ. ಆ ಕೆಲಸ ಮಾಡುತ್ತೇನೆ ಎಂದು ಹೇಳಿದ್ದಾರೆ. ಅದು ಮುಗಿಯುವುದರಲ್ಲಿ ಇದೆ. ನಾನು ಸ್ವತಃ ವೈಯಕ್ತಿಕವಾಗಿ ಹೇಳುವುದಾದರೆ ಕೆಲವು ರಸ್ತೆಗಳನ್ನು ಸುಮ್ಮನೆ ನೋಡಿದ್ದೇನೆ. ಅಷ್ಟು ಚೆನ್ನಾಗಿ ಪರಿಚಯ ಇಲ್ಲ, ಯಾವ ಜಿಲ್ಲೆಯಿಂದ ಯಾವ ಜಿಲ್ಲೆಗೆ, ತಾಲ್ಲೂಕಿನಿಂದ ತಾಲ್ಲೂಕಿಗೆ, ತಾಲ್ಲೂಕಿನಿಂದ ಜಿಲ್ಲಾ ಮುಖ್ಯಪಟ್ಟಣಗಳಿಗೆ, ಹೀಗೆ ಯಾವ ಯಾವ ಮುಖ್ಯವಾದ ರಸ್ತೆಗಳನ್ನು ಮಾಡಬೇಕು ಮತ್ತು ಸೇತುವೆಗಳನ್ನು ಕಟ್ಟಬೇಕು ಎನ್ನುವುದನ್ನು ನಿರ್ಧರ ಮಾಡಬೇಕಾಗುತ್ತದೆ. ಎರಡು, ಮೂರು ವರ್ಷ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಬೇಕು. ಹೀಗೆ ಕಾರ್ಯಕ್ರಮ ಹಾಕಿಕೊಂಡು ತಡೆದು ತಡೆದು ಕೆಲಸ ಮಾಡಿದರೂ ಸಹ ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತವೆ. ಆ ಹಣವನ್ನು ನಮ್ಮ ಸರ್ಕಾರದ ಬಂಡವಾಳದಿಂದ ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೇ ಕೇಂದ್ರ ಸರ್ಕಾರದವರು ನಮ್ಮ ಸಹಾಯಕ್ಕೆ ಬರಬೇಕೆಂದು ಸ್ಪೆಷಲ್ ಗ್ರಾಂಟು ಅಥವಾ ಸ್ಪೆಷಲ್ ಆಗಿ ಅರ್ಧ ಸಹಾಯ ಅರ್ಧ ಸಾಲ ಈ ರೀತಿ ಸಹಾಯ ದೊರಕಿಸಿಕೊಳ್ಳಲು ಪ್ರಯತ್ನಮಾಡಿ, ಈ ರಸ್ತೆ ಸೇತುವೆಗಳ ಕಾರ್ಯಕ್ರಮವನ್ನು ಮುಗಿಸುವುದಕ್ಕೆ ಸಹಾಯಮಾಡಿ ಎಂದು ಅವರನ್ನು ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಕಳೆದ ತಿಂಗಳು ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದಾಗ ಈ ಸಂಬಂಧವಾಗಿ ಅವರಿಗೆ ತಕ್ಕ ಸಾಹಿತ್ಯ ಒದಗಿಸಿ ಅವರೂ ಸಹ ಮಾತನಾಡಿದ್ದಾರೆ, ಅವರಿಂದ ಭರವಸೆಯೂ ಬಂದಿದೆ. ನಿರ್ದಿಷ್ಟವಾದ ಕಾರ್ಯಕ್ರಮ ಗೊತ್ತಾಗಿಲ್ಲ. ಎಷ್ಟು ಹಣ ಕೊಡುತ್ತಾರೆ. ಯಾವಾಗ ತೆಗೆದುಕೊಳ್ಳಬೇಕು ಎಂಬುದು ಗೊತ್ತಿಲ್ಲ. ಎರಡು ಅಥವಾ ಮೂರು ತಿಂಗಳುಗಳಲ್ಲ ಈ ಕಾರ್ಯಕ್ರಮ ನಿರ್ಧರ ಪಡಿಸಿಕೊಂಡು ಮತ್ತು ಅಗತ್ಯವಿದ್ದರೆ ದೆಹಲಿಯ ಕೇಂದ್ರ ಸರ್ಕಾರದವರಿಗೆ ಅರಿಕೆಮಾಡಿಕೊಂಡು ಈ ಸರ್ಕಾರದ ಹಣದಿಂದಲೇ ಸ್ವಲ್ಪಭಾಗ ಖರ್ಚುಮಾಡಿ ಈ ಕಾರ್ಯವನ್ನು ಮಾಡಬೇಕೆಂದು ಸರ್ಕಾರದ ಆಶಯವಾಗಿದೆ. ಬಹುಶಃ ಈ ಆಶಯವನ್ನು ಸದಸ್ಯರು ಮನಗಂಡಿದ್ದಿರಬಹುದು. ಆದರೂ ಆಯಾ ಪ್ರಾಂತ್ಯದವರು ಅವರವರ ಅಗತ್ಯ, ಕೊರತೆ ಮನಗಂಡು ಒತ್ತಾಯಪಡಿಸುತ್ತಾ ಇದ್ದಾರೆ. ಅದೇ ಪ್ರಕಾರ ಸರ್ಕಾರದವರು ಆ ವಿಷಯದಲ್ಲಿ ಗಮನ ಕೊಡುತ್ತಾ ಇದ್ದಾರೆ ಎಂದು ಭರವಸೆ ಕೊಡುತ್ತೇನೆ. ಇನ್ನು ಕೆಲವು ರಸ್ತೆ ವಿಚಾರದಲ್ಲಿ ಹೇಳಿದರು. ಅದು ಡಿಸ್ಟ್ರಿಕ್ಟು ಬೋರ್ಡ್ ರಸ್ತೆ ವಿಚಾರ. ಅವುಗಳನ್ನು ತೆಗೆದುಕೊಳ್ಳುತ್ತೇವೆ. ಪ್ರಾಯಶಃ ಅದಷ್ಟು ಕಡಿಮೆಮಾಡಿ ತೆಗೆದುಕೊಳ್ಳುತ್ತೇವೆ ಎಂದರೂ ಕೂಡ ಎರಡು ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಮತ್ತು ಅವನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಳ್ಳಲು ಮೈಲಿಗೆ 750 ರೂಪಾಯಿ ಬೇಕಾಗುತ್ತದೆ. ಇದನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಎಸ್ಟಿಮೇಟು ಕಳುಹಿಸಬೇಕೆಂದು ಕಳೆದ ಮಾರ್ಚಿ ತಿಂಗಳಿನಲ್ಲಿ ಚೀಫ್ ಇಂಜನಿಯರಿಗೆ ಬರೆಸಿದ್ದೇನೆ. ಆ ಕಾರ್ಯಮಾಡಿ ಕಳುಹಿಸುತ್ತಾರೆ. ಈ ರಸ್ತೆಗಳನ್ನು ಕೂಡ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಬೇಕಾಗುತ್ತದೆ.

ರೂರಲ್ ಡೆವಲಪ್‌ಮೆಂಟ್ ಕೆಲಸ ಆಗಲಿ ಅಥವಾ ಇಂಟರ್ ವಿಲೇಜ್ ಕಮ್ಯುನಿಕೇಷನ್ ಹೆಡ್‌ನಲ್ಲಾಗಲಿ ಬರತಕ್ಕ ರಸ್ತೆಗಳ ವಿಚಾರ ಅನೇಕರು ಹೇಳಿದ್ದಾರೆ. ಹಳ್ಳಿಗಾಡಿನಲ್ಲಿ ಸಂಚಾರ ಸೌಕರ್ಯ ಇಲ್ಲ ಎಂದು ಹೇಳಿದರು. ಈ ಕಾರ್ಯವನ್ನು, ನಿಜವಾಗಿಯೂ ಸದಸ್ಯರು ಇಷ್ಟು ಹೇಳಿದರೂ ಹೀಗೆ ಉತ್ತರ ಬಂತಲ್ಲಾ ಎಂದು ಅಸಮಾಧಾನ ಪಟ್ಟುಕೊಳ್ಳಬಾರದು—ಸರ್ಕಾರದವರು ತೆಗೆದುಕೊಂಡು ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಅಥವಾ ರೂರಲ್ ಡೆವಲಪ್‌ಮೆಂಟ್ ಕಮಿಟಿಯವರು ತೆಗೆದುಕೊಂಡು ಈ ರಸ್ತೆಗಳನ್ನುಮಾಡಬೇಕು. ಈ ಪ್ರಶ್ನೆ ಮುಖ್ಯವಾದದ್ದು. ಫ್ಯಾಮಿನ್ ರಿಲೀಫ್ ವರ್ಕ್ಸ್ ಮುಂತಾದ ಕೆಲಸಗಳ ಜೊತೆಗೆ ಅವರು ಇದನ್ನು ಮಾಡುತ್ತಾರೆ.

ಶ್ರೀ ಕೆ. ಕೆಂಚಪ್ಪ.—ಒಂದು ವಿಷಯ. ರೀಕ್ಲಾಸಿಫಿಕೇಷನ್ ಆಫ್‌ರೋಡ್ಸ್ ಪ್ರಕಾರ ಅನೇಕ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ವರ್ಗಮಾಡಿದೆ, ಅದಕ್ಕೆ ತೀರ್ಮಾನವನ್ನು ತಾವು ತೆಗೆದುಕೊಂಡಿದ್ದೀರಿ. I.V.C. ರೂರಲ್‌ಡೆವಲಪ್‌ಮೆಂಟ್ ಕಮಿಟಿಯಿಂದ ಮಾಡಿರತಕ್ಕ

(ಶ್ರೀ ಕೆ. ಕೆಂಚಪ್ಪ)

ರಸ್ತೆ, ಫ್ಯಾಮಿನ್ ರಿಲೀಫ್‌ನಲ್ಲಿ ಮಾಡಿರತಕ್ಕ ರಸ್ತೆ, ಇವುಗಳನ್ನೆಲ್ಲಾ ಜಿಲ್ಲಾ ಬೋರ್ಡಿನವರಿಗೆ ಕೊಟ್ಟಿದ್ದೀರಿ. ಎಂದಮೇಲೆ ಜಿಲ್ಲಾ ಬೋರ್ಡಿನವರಿಗೆ ಇಷ್ಟನ್ನು ಮಾಡುವುದಕ್ಕೆ ಸಾಕಾಗುವಷ್ಟು ಹಣ ಒದಗಿಸುವ ವಿಚಾರದಲ್ಲಿ ಏನು ಮಾಡಿದ್ದೀರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಣ ಒದಗಿಸತಕ್ಕ ವಿಚಾರದಲ್ಲಿ ಹಿಂದಿನ ಸರ್ಕಾರ ಮತ್ತು ಹಿಂದಿನ ಆಡಳಿತದ ಮಾತಿಗೂ ಇವೊತ್ತಿನ ಪರಿಸ್ಥಿತಿಗೂ ಸ್ವಲ್ಪ ಬದಲಾವಣೆ ಆಗಿದೆ. ಆದ್ದರಿಂದ ಇವೊತ್ತು ಆ ವಿಚಾರಗಳನ್ನು ಪುನಃ ಮುಂದಾಲೋಚನೆಮಾಡಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಹಿಂದೆ ಭೂಕಂದಾಯದಲ್ಲಿ ಒಂದು ಭಾಗ ಜಿಲ್ಲಾ ಬೋರ್ಡುಗಳಿಗೆ ಕೊಡಬೇಕು, ಅವರ ಆದಾಯವನ್ನು ಹೆಚ್ಚು ಮಾಡಬೇಕು, ಆ ಮುಖಾಂತರ ಅವರು ಹೆಚ್ಚು ಕೆಲಸ ಮಾಡಬೇಕೆಂದು ತೀರ್ಮಾನವಾಗಿತ್ತು. ಈಗ ಪರಿಸ್ಥಿತಿ ಬದಲಾಯಿಸಿ, ಹಿಂದೆ ಏನು ನಿರ್ಧರ ತೆಗೆದುಕೊಂಡಿತ್ತೋ ಅದನ್ನು ಪುನರ್ವಿಮರ್ಶೆಮಾಡಿ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗಿದೆ.

ಶ್ರೀ ಕೆ. ಕೆಂಚಪ್ಪ.—ಹೀಗೆ ಮೊಗಂ ಆಗಿ ಹೇಳುವುದು ಸರಿಯಲ್ಲ. ಏಕೆಂದರೆ ಇದು ಪಬ್ಲಿಕ್ ವರ್ಕ್ಸ ಇಲಾಖೆಗೆ ಸೇರಿದ್ದು. ಎಸ್ಟಿಮೇಟ್ ಮಾಡತಕ್ಕವರು ಅವರು ಕೆಲಸ ಮಾಡಲು ಹಣ ಕೊಡಬೇಕಾದರೆ ಜಿಲ್ಲಾ ಬೋರ್ಡಿನವರ ಉತ್ಪನ್ನವನ್ನು ಎಷ್ಟರ ಮಟ್ಟಿಗೆ ಅಭಿವೃದ್ಧಿಪಡಿಸಿದ್ದೀರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನೇ ನಾನು ಹೇಳುತ್ತಾ ಇರುವುದು. ಈಗ ಜಿಲ್ಲಾ ಬೋರ್ಡುಗಳು ಕೆಲಸ ನಡೆಯುತ್ತಿಲ್ಲ; ಮತ್ತು ವಿಲೀನೀಕರಣವಾದುದರಿಂದ ಸಂಸ್ಥಾನ ದೊಡ್ಡದಾಗಿದೆ. ಅಲ್ಲಿನ ಜಿಲ್ಲಾ ಬೋರ್ಡುಗಳಿಗೂ ಇಲ್ಲಿನ ಜಿಲ್ಲಾ ಬೋರ್ಡುಗಳಿಗೂ ಕಾನೂನಿನಲ್ಲಿ ವ್ಯತ್ಯಾಸವಿದೆ. ಆದ್ದರಿಂದ ಈ ವಿಚಾರಗಳನ್ನೆಲ್ಲಾ ಒಟ್ಟಾಗಿ ವಿಮರ್ಶೆಮಾಡಿ ಒಂದು ಅಂತ್ಯವಾದ ನಿರ್ಧಾರ ಕೈಕೊಳ್ಳಬೇಕಾಗಿದೆ. ಗ್ರಾಮಾಂತರ ಪ್ರದೇಶದ ಸಂಚಾರ ಸೌಲಭ್ಯದ ವಿಚಾರದಲ್ಲಿ ಕೆಂಚಪ್ಪನವರು ಸಲಹೆ ಮಾಡಿದ ಹಾಗೆ ಆಯಾ ಸ್ಥಳೀಯ ಸಂಸ್ಥೆಗಳ ಉತ್ಪನ್ನ ಹೆಚ್ಚಾಗುವ ರೀತಿಯಲ್ಲಿ ಸರ್ಕಾರದವರು ಕಾರ್ಯಕ್ರಮವನ್ನು ಕೈಕೊಂಡು, ಅವರು ಆ ಉತ್ಪನ್ನದಿಂದ ಈ ಕಾರ್ಯ ಕೈಕೊಳ್ಳಬೇಕಾದದ್ದು ಅಗತ್ಯವಾಗಿದೆ ಎಂಬುದನ್ನು ಸರ್ಕಾರ ಒಪ್ಪಿಕೊಳ್ಳುತ್ತಾ ಇದೆ. ಜಲ್ಲಿ ಹಾಕದೇ ಇರತಕ್ಕ ರಸ್ತೆ ಆದರೆ ಮಳೆಗಾಲದಲ್ಲ ಕೊಚ್ಚಿ ಹೋಗುತ್ತದೆ. ಇದರಲ್ಲಿ ಹಣ ನಷ್ಟವಾಗುತ್ತದೆ ಎಂಬ ಪ್ರಶ್ನೆ ಅಲ್ಲ. ಮೊದಲು ಜಿಲ್ಲಾ ಬೋರ್ಡಿಗೆ ಸಂಬಂಧಪಟ್ಟಹಾಗೆ ಮತ್ತು ಸರ್ಕಾರದ ಇಲಾಖೆಗೆ ಸಂಬಂಧಪಟ್ಟ ಹಾಗೆ ಎಲ್ಲಾ ರಸ್ತೆಗಳನ್ನೂ ತೆಗೆದುಕೊಂಡು ಸುವ್ಯವಸ್ಥಿತವಾದ ರೀತಿಯಲ್ಲಿ ಎಲ್ಲಾ ರಸ್ತೆ, ಸೇತುವೆಗಳನ್ನೂ ಕಟ್ಟಿಕೊಡಬೇಕೆಂದರೆ ನೂರಾರು ಕೋಟಿ ರೂಪಾಯಿಗಳು ಬೇಕಾಗುತ್ತವೆ. ನೂರಾರು ವರ್ಷದಿಂದ ಹೀಗೆಯೇ ನಡೆದುಕೊಂಡು ಬಂದಿರುವುದನ್ನು ಇವತ್ತೇ ಎಲ್ಲಾ ಸರಿಪಡಿಸುತ್ತೇವೆ ಎಂದರೆ ಅದು ಉತ್ಪ್ರೇಕ್ಷೆಯ ಮಾತಾಗುಬೇಕಾಗುತ್ತದೆ. ಆದ್ದರಿಂದ ಸಾಧ್ಯವಾದಮಟ್ಟಿಗೂ ಈ ಕಾರ್ಯವನ್ನು ಒಂದು ಕ್ರಮವರಿತು ಮಾಡಬೇಕಾಗಿದೆ. ಒಟ್ಟಿನಲ್ಲಿ ಹೇಳುವುದು ಈ ಸೇತುವೆಗಳು, ರಸ್ತೆಗಳು ಮತ್ತು ಸಂಚಾರ ಸೌಲಭ್ಯಗಳ ಬಗ್ಗೆ ಸರ್ಕಾರಕ್ಕೆ ಹಣ ಎಷ್ಟು ಮಟ್ಟಿಗೆ ಸಿಕ್ಕುತ್ತದೆ ಎಂಬುದನ್ನು ನೋಡಿಕೊಂಡು ಮತ್ತು ಎಷ್ಟುಮಟ್ಟಿಗೆ ಕೇಂದ್ರದ ಸಹಾಯ ಪಡೆದುಕೊಳ್ಳಲು ಪ್ರಯತ್ನಮಾಡಬೇಕೋ ಆ ಪ್ರಯತ್ನ ಮಾಡಿ, ಒಂದು ಕ್ರಮವಾದ ಕಾರ್ಯಕ್ರಮವನ್ನು ನಿರ್ಧಾರವಮಾಡಿ ಆ ರೀತಿ ಕೆಲಸ ಮಾಡುವುದರಲ್ಲಿ ಸಂದೇಹವಿಲ್ಲ. ಇಷ್ಟು ಭರವಸೆ ಮಾತ್ರ ಕೊಡುತ್ತೇನೆ.

ಶ್ರೀ ಕೆ. ಕೆಂಚಪ್ಪ.—1949ನೆಯ ಇಸವಿಯಿಂದ ಈ ರೀ ಕ್ಲಾಸಿಫಿಕೇಷನ್ ವಗೈರೆ ಹೇಳಿದ್ದು ಪದೇಪದೇ ಬರುತ್ತಾ ಇದೆ. ಈಗಿನ ಸರ್ಕಾರದವರು ಹಿಂದಿನವರ ಮೇಲೆ ಹಾಕುತ್ತಿದ್ದೀರಿ. ಮುಂದೆ ಬರುವವರು ತಮ್ಮ ಮೇಲೆ ಹಾಕುತ್ತಾರೆ. ಹೀಗೆ ಬರಬರುತ್ತಾ ಒಬ್ಬರ ಮೇಲೆ ಒಬ್ಬರು ಹಾಕುತ್ತಾ ಹೋದರೆ ಹೇಗೆ? 1949ನೆಯ ಇಸವಿಯಿಂದ ಎಷ್ಟೋ ಕೆಲಸಗಳಾಗದೇ ತಡವಾಗುತ್ತಿದೆ. This shows the inefficiency and incapacity in preparing a Plan.

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ರೀತಿ ಕಠಿಣ ಶಬ್ದಗಳಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಹಿಂದಿನ ಮಂತ್ರಿಮಂಡಲವಾಗಲಿ, ಹಿಂದಿನ ಸರ್ಕಾರವಾಗಲಿ ಅಥವಾ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಇದ್ದ ಸರ್ಕಾರವಾಗಲಿ ಅದನ್ನು ಆಕ್ಷೇಪಣೆ ಮಾಡುವ ಉದ್ದೇಶ ನನಗಿಲ್ಲ.

ಅಧ್ಯಕ್ಷರು.—ಈ ಸರ್ಕಾರಕ್ಕೂ, ಹಿಂದಿನ ಸರ್ಕಾರಕ್ಕೂ ಸಂಬಂಧ ಇಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದು ಯಾವ ಸರ್ಕಾರ ಎಂಬ ವಿಷಯವಲ್ಲ. ಇಂದಿನ ಪರಿಸ್ಥಿತಿ ಹಿಂದಿನ ಸರ್ಕಾರದಲ್ಲಿ ಇರಲಿಲ್ಲ. ಯಾರನ್ನೂ ಆಕ್ಷೇಪಣೆ ಮಾಡುವ ವಿಷಯವೇನೂ ಇಲ್ಲ. ಏನೇ ಆಗಲಿ ಹಿಂದಿನ ಕಥೆಯನ್ನು ಬಿಟ್ಟು ಹೇಗೆ ಹಣ ಒದಗಿಸಬೇಕೆಂಬುದನ್ನು ಹೊಸದಾಗಿ ಪರ್ಯಾಲೋಚನೆ ಮಾಡಿ ಒಂದು ಸಂತೋಷಕರವಾದ ಧೃಢವಾದ ನಿರ್ಧಾರ ಕೈಕೊಳ್ಳಬೇಕಾಗಿದೆ. ಆದ್ದರಿಂದ ಸ್ವಲ್ಪ ನಿಧಾನವಾಗಬಹುದು. ಎಂಟು ತಿಂಗಳಿನಿಂದೀಚೆಗೆ ಆಗಿರುವ ವಿಷಯವನ್ನು ಹೇಳಬೇಕಾದರೆ, ಶ್ರೀ ಸುಂತನ್‌ಕರ್‌ರವರು ಹೇಳಿದ discussing the Policy of Government in not doing this and that ಎನ್ನುವುದರಲ್ಲಿ, ಆರು, ಎಂಟು ತಿಂಗಳೊಳಗಾಗಿ ಎರಡು ಕೋಟಿ ಜನ ಇರತಕ್ಕ ಒಂದು ದೊಡ್ಡ ರಾಜ್ಯದಲ್ಲಿ ಎಲ್ಲಾ ಸೇತುವೆ, ಎಲ್ಲಾ ರಸ್ತೆ, ಎಲ್ಲಾ ಕೆರೆ, ಎಲ್ಲಾ ರಿಸರ್ವಾಯರ್ ಆಗಬೇಕೆಂದು ಹೇಳಿ, ಅದನ್ನು ಮಾಡಿಲ್ಲ ಆದ್ದರಿಂದ ಇದು ಇನ್ ಎಫಿಷಿಯನ್ಸಿ ತೋರಿಸುತ್ತದೆ ಎಂದರೆ ಇದನ್ನು ಹೇಳಿ ಅವರು ಸಂತೋಷಪಟ್ಟುಕೊಳ್ಳಬಹುದು ಅಷ್ಟೆ. ನಿಜವಾದಂಥ ಆಕ್ಷೇಪಣೆ ಆಗುವುದಿಲ್ಲ. ಬೊಂಬಾಯಿ ಸರ್ಕಾರದಲ್ಲಿ ಶ್ರೀಮಾನ್ ಸುಂತನ್‌ಕರ್‌ರವರು 25 ವರ್ಷದಿಂದ ಮರಾಠಿ ಪ್ರದೇಶದವರನ್ನು ಉದಾಸೀನ ಮಾಡಿದ್ದಾರೆಂದು ಹೇಳಿದರು. 25-30 ವರ್ಷದಿಂದ ಸುಧಾರಿಸಿಕೊಂಡಿದ್ದವರು ಎಂಟು ತಿಂಗಳಿನಲ್ಲಿ ಮಾಡದೇ ಇದ್ದಕಾರಣ ಅವರು ಇಂಥಾ ಆಕ್ಷೇಪಣೆ ಮಾಡುತ್ತೇವೆ ಎಂದು ಹೇಳಿದರೆ ಏನು ಹೇಳುವುದು ? ಮಾಡಿ ಸ್ವಾಮಿ ಎಂದು ಹೇಳಬೇಕಾಗುತ್ತದೆ.

1–30 P.M.

ಅದಕ್ಕಿಂತ ಹೆಚ್ಚಿಗೆ ಏನೂ ಹೇಳುವುದಕ್ಕಾಗುವುದಿಲ್ಲ. ಇನ್ನು ಹೀಗೆಯೇ ಸಂಚಾರ ವಿಚಾರದಲ್ಲಿ ಹೆಚ್ಚಿಗೆ ಹೇಳಬೇಕಾದ ಅಗತ್ಯವಿಲ್ಲ. ಬೇರೆಬೇರೆ ಸ್ನೇಹಿತರೆಲ್ಲ ಅವರವರ ಪ್ರಾಂತಕ್ಕೆ ಏನೇನು ಆಗಬೇಕೆಂದು ಹೇಳಿದ್ದಾರೆಯೋ ಅದನ್ನೆಲ್ಲ ಗುರುತು ಹಾಕಿಕೊಂಡಿದ್ದೇನೆ. ಮತ್ತು ಕಟ್‌ಮೋಷನ್‌ಗಳಲ್ಲಿ ಕೊಟ್ಟಿರುವ ಸಲಹೆಗಳನ್ನೂ ಸೇರಿಸಿಕೊಂಡು, ಸಮಗ್ರವಾದ ಒಂದು

comprehensive scheme ತಯಾರು ಮಾಡಿ ಎಷ್ಟರಮಟ್ಟಿಗೆ ಕಾರ್ಯಕ್ರಮ ಜಾರಿಗೆ ಕೊಡಬಹುದು ಎಂಬುದನ್ನು ಸರ್ಕಾರದವರು ತೀರ್ಮಾನಮಾಡುತ್ತಾರೆಂದು ಇಷ್ಟು ಮಾತ್ರ ಇಲ್ಲಿ ಭರವಸೆನೀಡಬಹುದಾಗಿದೆ.

ನೀರಾವರಿ ಸೌಕರ್ಯಗಳ ವಿಚಾರದಲ್ಲಿಯೂ ಅಷ್ಟೆ. ಕೆರೆ ರಿಪೇರಿ, ಹೊಸದಾಗಿ ಕೆರೆಗಳು ಆಗಬೇಕಾದದ್ದು, ಹೊಸದಾಗಿ ಅಣೆಕಟ್ಟು, pick-up channels, ರಿಸರ್ವಾಯಿಯರ್ ಆಗಬೇಕಾದದ್ದು, ಇರತಕ್ಕ ನಾಲೆಗಳನ್ನು ದುರಸ್ತು ಮಾಡುವುದು, ಅವುಗಳನ್ನು ಮುಂದು ವರಿಸುವುದು, ಹೀಗೆ ಅನೇಕ ಸಲಹೆಗಳನ್ನು ಕಟ್ ಮೋಷನ್‌ಗಳಲ್ಲಿ ತಿಳಿಸಿದ್ದಾರೆ. ಅದೇ ಸಂಬಂಧವಾಗಿ ಮಾತನಾಡಿರತಕ್ಕ ಸ್ನೇಹಿತರು ಆಯಾ ಪ್ರಾಂತಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿರುವುದರ ಪೈಕಿ ಕೆಲವಕ್ಕೆ ಹಣ ಮಂಜೂರಾಗಿದೆ, ಕೆಲವು ಕಾರ್ಯಗಳು ಪ್ರಾರಂಭವಾಗಿವೆ, ಕೆಲವಕ್ಕೆ ಟೆಂಡರುಗಳನ್ನು ಕರೆದಿದ್ದೇವೆ. ಈ ಕಾರ್ಯವನ್ನು ಅದೇ ರೀತಿ ಮುಂದುವರಿಸಿಕೊಂಡು ಇನ್ನೂ ಹೆಚ್ಚು ಹಣವನ್ನೊದಗಿಸಿಕೊಂಡು ಈ ಕಾರ್ಯಗಳನ್ನು ಮಾಡುವುದರಲ್ಲಿ ಏನೂ ಸಂದೇಹವಿಲ್ಲ. ಆಯಾ ಪ್ರಾಂತದವರು ಏನೇನು ಆಗಬೇಕೆಂದು ಸಲಹೆ ಕೊಟ್ಟಿದ್ದಾರೋ, ಅವುಗಳನ್ನೆಲ್ಲ ಗುರುತಿಸಿಕೊಂಡಿದ್ದೇನೆ. ಆ ಕಾರ್ಯಗಳೆಲ್ಲ ಎಷ್ಟರ ಮಟ್ಟಿಗೆ ಆಗಿವೆ, ಯಾವ ಸ್ಟೇಜ್‌ನಲ್ಲಿದೆ, ಮಂಜೂರಾಗಿವೆಯೇ ಎಂಬ ವಿಚಾರದಲ್ಲಿ ಇಲಾಖೆಯವರ ಸಂಗಡ ಚರ್ಚೆಮಾಡಿ, ಹೆಚ್ಚು ಮಾಹಿತಿ ಪಡೆದುಕೊಂಡು ಆ ಕಾರ್ಯಗಳನ್ನು ಮುಂದುವರಿಸುವುದಕ್ಕೆ ಪ್ರಯತ್ನಮಾಡುತ್ತೇವೆ ಎನ್ನುವ ಭರವಸೆಯನ್ನು ನಾನು ಈ ಸಭೆಯಲ್ಲಿ ಹೇಳುತ್ತಿದ್ದೇನೆ.

ಇನ್ನು ಸಾಮಾನ್ಯವಾದ ಕೆಲವು ಸಲಹೆಗಳನ್ನು ಸ್ನೇಹಿತರು ಮಾಡಿದ್ದಾರೆ. ಅದು ಬಹಳ ಸಂತೋಷ. ಎರಡು ಮೂರು ವಿಚಾರ ಹೇಳಿದ್ದಾರೆ. ಮೊದಲನೆಯದು ಲಂಚದ ಹಾವಳಿ. ಇದನ್ನು ಸ್ವಲ್ಪ ಕಠಿಣವಾದ ಕಾರ್ಯಕ್ರಮ ಕೈಗೊಂಡು ತಪ್ಪಿಸಬೇಕು ಎಂದೇ ಹೇಳಿದ್ದಾರೆ. ಲಂಚದ ವ್ಯವಹಾರ ಈ ಇಲಾಖೆಯಲ್ಲಿಲ್ಲವೆಂದು ನಾನು ಹೇಳುವಷ್ಟು ಧೈರ್ಯ ಮಾಡಲಾರೆ. ನಾನು ಹುಡುಗನಾಗಿದ್ದಾಗಿನಿಂದಲೂ ಒಂದು ಗಾದೆಯನ್ನು ಕೇಳುತ್ತಿದ್ದೇನೆ "ಇಚ್ಛಿ ಪುಟ್ಟಿನವಾಡು ಇಂಜಿನಿಯರು" ಎಂದು. ಹಿಂದಿನ ಜನ್ಮದಲ್ಲಿ ಕೊಟ್ಟು ಎಂದರೆ ದಾನ ಧರ್ಮಮಾಡಿ ಹುಟ್ಟಿದವನು ಇಂಜಿನಿಯರಿಂಗ್ ಇಲಾಖೆಯಲ್ಲಿ ಕೆಲಸಕ್ಕೆ ಸೇರುತ್ತಾನೆ ಎಂದು ಇದರ ಅರ್ಥ. ಇಂಥ ಒಂದು ಗಾದೆ ಇದೆ. ಎಂದರೆ ಈ ಇಲಾಖೆಯಲ್ಲಿ ಸಂಪಾದನೆ ಜಾಸ್ತಿ ಎಂದು. ಇದು ಇವೊತ್ತು ಬಂದಂಥ ಕೆಟ್ಟ ಚಾಳಿಯಲ್ಲ. ಹಿಂದೆ ಇದ್ದಷ್ಟು ಮಟ್ಟಿಗೆ ಇವೊತ್ತು ಇಲ್ಲವೆಂದು ಹೇಳಬಹುದು. ಇದಕ್ಕೆ ಅನೇಕ ಕಾರಣಗಳಿವೆ. ಜನರಲ್ಲಿ ಜಾಗ್ರತಿಯುಂಟಾಗಿದೆ. ಮುಖ್ಯವಾಗಿ ಅಧಿಕಾರಕ್ಕೆ ಬರತಕ್ಕವರು ಯುವಕರು ಬರುತ್ತಿದ್ದಾರೆ. ಅವರು ಇವೊತ್ತಿನ ದೇಶದ ವಾತಾವರಣದಲ್ಲಿ, ದೇಶಾಭಿಮಾನ ಮುಂತಾದ ಈ ವಾತಾವರಣದಲ್ಲಿ ಓದಿ ವಿದ್ಯಾವಂತರಾಗಿರುವವರಿದ್ದಾರೆ. ಆದುದರಿಂದ ಲಂಚದ ಹಾವಳಿ ಕಡಮೆಯಾಗುವುದಕ್ಕೆ ಇದೂ ಒಂದು ಕಾರಣ ಎಂದು ನನಗನ್ನಿಸುತ್ತದೆ. ಹಿಂದೆ ಎಷ್ಟರ ಮಟ್ಟಿಗೆ ಆಕ್ಷೇಪಣೆ ಮಾಡಬಹುದಾಗಿತ್ತೋ ಅಷ್ಟರ ಮಟ್ಟಿಗೆ ಇವೊತ್ತು ಆಕ್ಷೇಪಣೆ ಮಾಡುವುದಕ್ಕೆ ಅವಕಾಶವಿರಲಾರದು, ಆದರೂ ಇದೆ. ಇದನ್ನು ಸದಸ್ಯರು ಸಲಹೆಮಾಡಿದ ಹಾಗೆ, ಬಹಳ ಕಠಿಣವಾದ ಮನೋಭಾವನೆಯಿಂದ ನೋಡಬೇಕು. ನನ್ನ ಪ್ರತಿಷ್ಠೆಗೆ ಹೇಳುತ್ತಿಲ್ಲ, ಸಿಕ್ಕಿದರೆ ಬಿಡುವುದಿಲ್ಲ, ಯಾವ ದಾಕ್ಷಿಣ್ಯಕ್ಕೂ ಒಳಗಾಗುವುದಿಲ್ಲ, ಬಹಳ ಕಠಿಣವಾಗಿ ನಡೆದುಕೊಳ್ಳುತ್ತೇನೆಂದು ಈ ಸಭೆಯಲ್ಲಿ ಹೇಳಿದ್ದೇನೆ. ಹಿಂದೆ ಹೊಸ ಮೈಸೂರು ಸಂಸ್ಥಾನದ ಚೀಫ್ ಇಂಜಿನಿಯರು ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರುಗಳನ್ನು ಕರೆಯಿಸಿ ಅನೇಕ ಇಲಾಖೆಗಳಲ್ಲಿ ಆಗಬೇಕಾದ ಕೆಲಸ ಕಾರ್ಯಗಳ ವಿಚಾರವಾಗಿ ಮಾತನಾಡಿ ಚರ್ಚೆಮಾಡಿದಾಗ ಈ ಮಾತನ್ನು ಅವರಿಗೆ ಸ್ಪಷ್ಟವಾದ ವಾಕ್ಯಗಳಿಂದ ತಿಳಿಯಪಡಿಸಿದ್ದೇನೆ. ಈಚೆಗೆ ಅಲ್ಲಲ್ಲಿ ನನ್ನ ಗಮನಕ್ಕೆ ಬಂದಂಥ ಮೂರು ನಾಲ್ಕು ಸಂದರ್ಭಗಳಲ್ಲಿ ಕಠಿಣವಾದ ಕಾರ್ಯ ಕ್ರಮ ಕೈಗೊಂಡಿದ್ದೇನೆ. ಆ ಸಂಬಂಧವಾಗಿ 'ನೀವು ಬಡವರ ಮೇಲೆ ಇಷ್ಟು ನಿರ್ದಾಕ್ಷಿಣ್ಯವಾಗಿರಬಾರದು' ಎಂದು ಕೆಲವು ಸ್ನೇಹಿತರು ಹೇಳಿದ್ದಾರೆ. ನಾನು ಕ್ರಮ ತೆಗೆದುಕೊಂಡೆ ಎಂದು ಜಂಭದಿಂದ ಹೇಳಿ ಕೊಳ್ಳಬೇಕಾಗಿಲ್ಲ; ಅವರ ಮನೋಭಾವನೆಯನ್ನೂ ಬದಲಾಯಿಸಬೇಕು; ಇದಕ್ಕೆ ಸ್ವಲ್ಪ ಕಾಲಹಿಡಿಯುತ್ತದೆ. ಲಂಚಕೊಡುವವರು ಇದ್ದರೆ, ಲಂಚತೆಗೆದುಕೊಳ್ಳುವವರು ಇರುತ್ತಾರೆ. ನಮ್ಮ ದೇಶದ ದುರದೃಷ್ಟ, ಕಾರ್ಯವಾಗಬೇಕು ಎನ್ನುವ ಆತುರದಲ್ಲಿ ಲಂಚಕೊಡುವ ಕೆಲವಾರು ಜನ ಇರುವುದು ವಿಷಾದಕರವಾದುದು. ಆದುದರಿಂದ ಲಂಚ ಕೊಡುವವರು ಮತ್ತು ತೆಗೆದುಕೊಳ್ಳುವವರು ಅವರವರ ಮನಸ್ಸನ್ನು ಸರಿಪಡಿಸಿಕೊಳ್ಳಬೇಕಾದ ಅಗತ್ಯವಿದೆ. ಇಲಾಖೆಯಲಿ ಇಂಥ ಕಾರ್ಯ ನಡೆಯದೆ ಇರುವುದಕ್ಕೆ ಎಷ್ಟರ ಮಟ್ಟಿಗೆ ಬೇಕೋ ಅಷ್ಟರ ಮಟ್ಟಿನ ಕಾರ್ಯಕ್ರಮವನ್ನು ತೆಗೆದುಕೊಂಡು ಅಗತ್ಯವಾದ ಸಂದರ್ಭಗಳಲ್ಲಿ ಉಗ್ರ ಶಿಕ್ಷೆಗೆ ಗುರಿಮಾಡುವುದರಲ್ಲಿ ಏನೂ ಸಂದೇಹವಿಲ್ಲ. ಈ ವಿಚಾರದಲ್ಲಿ ಸದಸ್ಯರು ಯಾರೂ ದಾಕ್ಷಿಣ್ಯಕ್ಕೆ ನಾವು ಒಳಗಾಗುತ್ತೇವೆ ಎಂಬ ಸಂದೇಹಪಡಬೇಕಾಗಿಲ್ಲವೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು-ಉತ್ತರ).—ತುಪ್ಪದಹಳ್ಳಿ ಮತ್ತು ಸಂಗೇನಹಳ್ಳಿ ಕೆರೆಗಳ ವಿಚಾರದಲ್ಲಿ ಒಂದು ತನಿಖೆ ನಡಿಸಿದರಲ್ಲ ಆ ಸಂದರ್ಭದಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಸಂದರ್ಭದಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂಬುದನ್ನು ವಿವರಿಸುತ್ತೇನೆ. ಒಬ್ಬ ಸರ್ಕಾರಿ ನೌಕರನ ವಿಚಾರದಲ್ಲಿ ಕ್ರಮಕೈಕೊಳ್ಳಬೇಕಾದರೆ, ಕೆಲವು ನಿಬಂಧನೆಗಳಿವೆ. ಪತ್ತೆಯಾದರೂ ಸಹ, ಲಂಚತೆಗೆದುಕೊಂಡ ಎಂದು ನಾನು ಶಿಕ್ಷೆಮಾಡುವುದಕ್ಕಾಗುವುದಿಲ್ಲ. ಅದನ್ನು Law Departmentಗೆ ಕಳುಹಿಸಬೇಕು, ಮತ್ತೊಬ್ಬರನ್ನು ಕೇಳಬೇಕು, ಪಬ್ಲಿಕ್ ಸರ್ವಿಸ್ ಕಮಿಷನ್ ಅವರನ್ನು ಕೇಳಬೇಕು. ಹೀಗೆ ಕೆಲವು ಕಾರಣಗಳಿಂದ ನಿಧಾನವಾಗುತ್ತದೆ. ತುಪ್ಪದಹಳ್ಳಿ ಕೆರೆಯ ವಿಚಾರದಲ್ಲಿ ಶ್ರೀ ಸಿದ್ದಪ್ಪ ಕಮಿಟಿಯ ವರದಿಯು ಬಂದ ಮೇಲೆ ಯಾರ ಯಾರ ಸಲಹೆ ಕೇಳಬೇಕಾಗಿತ್ತೋ ಅಂಥ ಇಲಾಖೆಗಳಿಗೆ ಕಳುಹಿಸಬೇಕು. ಅವರಿಗೆಲ್ಲ ಕಳುಹಿಸಿದ್ದು, ಅಲ್ಲಿಂದ ಅವರ ಅಭಿಪ್ರಾಯ ಸಹ ಬಂದಿದೆ. ಈಗ ಅದು ಸರ್ಕಾರದಲ್ಲಿದೆ. ಈ ಕ್ಷಣದಲ್ಲಿ, ಇವೊತ್ತು, ನಾಳೆ, ಅಥವ ಒಂದು ವಾರದೊಳಗೆ ಏನು ಕಾರ್ಯಕ್ರಮ ಕೈಗೊಳ್ಳಬೇಕೆಂಬುದನ್ನು ಅಂತ್ಯವಾಗಿ ಸರ್ಕಾರದವರು ನಿರ್ಧಾರ ಮಾಡುತ್ತಾರೆ. ಇದರಲ್ಲಿ ಹೆಚ್ಚು ನಿಧಾನವಾಗುವುದಿಲ್ಲವೆಂದು ಇಷ್ಟು ಮಾತ್ರ ಹೇಳುತ್ತೇನೆ.

(ಶ್ರೀ ಎಚ್. ಕೆ. ವೀರಣ್ಣಗೌಡ)

ಲಂಚದ ವಿಚಾರವಾದ ಮೇಲೆ ಎರಡನೆಯದು ನಮ್ಮ ಸ್ನೇಹಿತರು ಸಲಹೆ ಕೊಟ್ಟಿದ್ದು ನಿಧಾನವಾಗುತ್ತದೆ ಎಂದು. ನಿಧಾನವಾಗುವುದರಲ್ಲಿ ಅದಕ್ಕೆ ನಾನು ಕಾರಣಗಳನ್ನು ಹೇಳಿದ್ದೇನೆ. ಅನೇಕ ಕಾರಣಗಳ ಪೈಕಿ ಇದೂ ಒಂದು ಎಂದು ಸ್ನೇಹಿತರು ಒಪ್ಪಿಕೊಂಡಿದ್ದಾರೆ. ಒಂದು ಸಲ ಎಸ್ಟಿಮೇಟು ತಯಾರು ಮಾಡಿದಾಗ ಅನೇಕ ಅಂಶಗಳನ್ನು ಪರಿಶೀಲನೆಗೆ ತೆಗೆದುಕೊಳ್ಳದೆ ಆತುರಾತುರವಾಗಿ ಮಾಡಿ ಅನಂತರ ರಿವೈಸ್ ಮಾಡುತ್ತಾರೆ, ಇದರಿಂದ ಹಣ ಜಾಸ್ತಿಯಾಗುತ್ತದೆ, ರಿವೈಸ್ ಮಾಡುವುದರಲ್ಲಿ ಕಾಲ ಕಳೆದುಹೋಗಿ, ಹಿಂದೆ ಮಾಡಿದ್ದಕ್ಕಿಂತ ಅಂದಾಜು ಜಾಸ್ತಿಯಾಗಿ, ಕೆಲಸ ನಿಧಾನವಾಗುತ್ತದೆ. ಎಂಬೀ ಆಕ್ಷೇಪಣೆಗಳನ್ನೆಲ್ಲ ಒಪ್ಪಿಕೊಳ್ಳುತ್ತೇನೆ. ಕೆಲವು ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಕಾರ್ಯಗಳನು ಮಾಡುವಾಗ, ಈಚೆಗೆ ಏನು ಮಾಡಿದ್ದೇವೆ ಎಂದರೆ, ತಳಹದಿ (foundation) ಎಷ್ಟು ಆಳ ಹೋಗಬೇಕು ಎಂದು ಬೋರ್ ಹೋಲ್ ಹಾಕಿ ಪ್ರತಿಯೊಂದು ವಿಷಯವನ್ನೂ ವಿಮರ್ಶೆಮಾಡಿ, ಎಸ್ಟಿಮೇಟ್‌ಗಳನ್ನು ತಯಾರುಮಾಡಬೇಕು, ಅಂದಾಜು ಪ್ರಕಾರ ಮಾಡಕೂಡದು ಎಂದು ಇಲಾಖೆಯವರಿಗೆ ತಿಳಿಸಿದ್ದೇವೆ. ಇನ್ನುಮುಂದೆ ಈ ಕಾರಣದಿಂದ ನಿಧಾನವಾಗಲಾರದು. ಇನ್ನೊಂದು ಕೆಲವು ಸ್ನೇಹಿತರು ಹೇಳಿದರು, ಕೆಲವು ಕಾರ್ಯಗಳನ್ನು ಬಿಟ್ಟುಬಿಟ್ಟಿರುತ್ತಾರೆ ಅದರಿಂದ ಏನಾಗುತ್ತದೆಂದರೆ ಎಸ್ಟಿಮೇಟಿನಲ್ಲಿ ಸೇರಿಸದೆ ಬಿಟ್ಟರೆ, ಆ ಮೇಲೆ ಅದು ಮರೆತು ಹೋಗಿತ್ತು, ಈಚೆಗೆ ಸೇರಿಸಬೇಕಾಯಿತು, ಇದಕ್ಕೆ ಗೊತ್ತಾದ ಎಸ್ಟಿಮೇಟ್ ಇರಲಿಲ್ಲ ಟೆಂಡರ್ ಇರಲಿಲ್ಲ, ಪೀಸ್‌ವರ್ಕ್ ರೂಪದಲ್ಲಿ ಕೊಡಬೇಕಾಗುತ್ತದೆ ಎಂದು ಹೇಳಿದ ರೇಟಿಗೆ ಕೊಟ್ಟು, ಹೆಚ್ಚಿಗೆ ಹಣ ಪೋಲಾಗುವುದಕ್ಕೆ ಅವಕಾಶವಾಗಿದೆ ಎಂದು ಹೇಳಿದರು. ಕೆಲವು ಸಂದರ್ಭಗಳಲ್ಲಿ ಹೀಗೆ ನಡೆಯುತ್ತಿದೆ ಎಂದು ನನಗೆ ತಿಳಿದು ಬಂದಿದೆ. ಇದನ್ನು ಎಷ್ಟರ ಮಟ್ಟಿಗೆ ತಪ್ಪಿಸಬಹುದು ಎಂದು ಅಧಿಕಾರಿಗಳ ಸಲಹೆ ಪಡೆದು, ನನಗೆ ಏನು ಹೊಳೆಯುತ್ತದೆ ಎಂದು ನೋಡಿ, ಆ ರೀತಿ ಸೇರಿಸಬೇಕಾದಂಥ ಐಟಂಗಳನ್ನೆಲ್ಲ ಎಸ್ಟಿಮೇಟಿನಲ್ಲಿ ಸೇರಿಸದೆ ಇದ್ದರೆ ಹಾಗೆ ಉದ್ದೇಶ ಪೂರ್ವಕವಾಗಿ ಮಾಡಿದ್ದಾರೆಯೇ ಅಥವ ಅನನುಭವದಿಂದ ಮಾಡಿದ್ದಾರೆಯೇ ಎಂಬುದನ್ನು ತಿಳಿದು ಉದ್ದೇಶಪೂರ್ವಕವಾಗಿ ಮಾಡಿದ್ದರೆ, ಅವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳುವುದರಲ್ಲಿ ಸರ್ಕಾರದವರು ಹಿಂದು ಮುಂದು ನೋಡುವುದಿಲ್ಲ. ಎಸ್ಟಿಮೇಟ್ ವಿಚಾರದಲ್ಲಿ ಹಾಗೆ ಊಹೆಯ ಮೇಲೆ ಅಂದಾಜನ್ನು ಮಾಡಿ ಉದ್ದೇಶ ಪೂರ್ವಕವಾಗಿ ತಪ್ಪು ಎಸ್ಟಿಮೇಟ್‌ಮಾಡಿ ಅಥವ ಅಗತ್ಯವಾದುದಕ್ಕೆ ಸರಿಯಾದ ಎಸ್ಟಿಮೇಟ್ ಮಾಡದೆ ಆ ಮೇಲೆ ಅದನ್ನು ತಿದ್ದುಪಾಟು ಮಾಡಬೇಕೆಂದು ಕಾಲಹರಣ ಮಾಡುವುದಕ್ಕೆ ಅವಕಾಶಕೊಡಬಾರದು ಎಂಬುದು ಸರ್ಕಾರದ ಅಭಿಪ್ರಾಯವಾಗಿದೆ. ಇದನ್ನು ಅಧಿಕಾರಿಗಳಿಗೆ ಸ್ಪಷ್ಟವಾದ ವಾಕ್ಯಗಳಿಂದ ತಿಳಿಸಿದ್ದೇವೆ. ಅದರ ಮೇಲೆ ಇಂಥ ಕಾರ್ಯನಡೆದರೆ, ಅವರ ಮೇಲೆ ಕ್ರಮತೆಗೆದುಕೊಳ್ಳುತ್ತೇವೆ. ಸರ್ಕಾರದವರೇನೂ ಸರ್ವಜ್ಞರಲ್ಲ, ಸರ್ವಾಂತರ್ಯಾಮಿಗಳಲ್ಲ, ಅವರಿಗೆ ವಿಚಾರಗಳು ತಿಳಿಯಬೇಕು. ಈ ಸಭೆಯಲ್ಲಿ ಮಾತನಾಡಿದರೆ ಮಾತ್ರ ಸರ್ಕಾರ ಗಮನಕೊಡುತ್ತಾರೆ ಮಂತ್ರಿಗಳ ಕೈಗೆ ಕಾಗದ ಕೊಟ್ಟರೆ ಹೆಚ್ಚು ಗಮನ ಕೊಡುತ್ತಾರೆ ಎಂದಿಲ್ಲ. ಕಾಗದದ ಮುಖೇನ ಯಾವಯಾವ ಸಂದರ್ಭದಲ್ಲಿ ಹೇಳಬಹುದೋ ಅದನ್ನು ಸರ್ಕಾರದವರ ಗಮನಕ್ಕೆ ತರಬೇಕು. ನಾನು ಕೇಳುವುದು ತಮ್ಮ ಸಹಾಯ ಮತ್ತು ಸಹಕಾರ. ಎಸ್ಟಿಮೇಟ್ ವಿಚಾರದಲ್ಲಿ ಲಂಚದ ವಿಚಾರದಲ್ಲಿ ಕಂಟ್ರಾಕ್ಟರುಗಳು ಮತ್ತು ಅಧಿಕಾರಿಗಳು ಒಂದುಗೂಡಿಕೊಂಡು, ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಳ್ಳುವ ವಿಚಾರಲ್ಲಿ, ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು, ನಿಜವಾದ ಅಂಶಗಳನ್ನು ಸರ್ಕಾರದ ಗಮನಕ್ಕೆ ನಿಷ್ಪಕ್ಷಪಾತ ದೃಷ್ಟಿಯಿಂದ ತರುವುದಾದರೆ, ಆ ವಿಚಾರದಲ್ಲಿ ಕೂಡಲೆ ಕ್ರಮ ಕೈಗೊಳ್ಳುವುದಲ್ಲದೆ ಅಗತ್ಯವಾದ, ನ್ಯಾಯವಾದ ಕಾರ್ಯಕ್ರಮ ತೆಗೆದುಕೊಂಡು ತಪ್ಪು ಇದ್ದವರನ್ನು ಶಿಕ್ಷೆಗೆ ಗುರಿ ಮಾಡುವುದರಲ್ಲಿ ಏನೂ ಸಂದೇಹ ಪಡುವುದಿಲ್ಲ, ಹಿಂದುಮುಂದು ನೋಡುವುದಿಲ್ಲವೆಂದು ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಸಾಮಾನ್ಯವಾಗಿ ಅಧಿಕಾರಿಗಳಲ್ಲಿ inefficiency ಎಂದರೆ ಅಸಮರ್ಥತೆಯು ಎದ್ದು ಕಾಣುತ್ತಿದೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಸಾಮಾನ್ಯವಾಗಿ ಹೇಳತಕ್ಕ ಮಾತು. ಆದರೆ ಎಲ್ಲರೂ ಹಾಗೆ ಇದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಈ ಇಲಾಖೆಯಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳು technically qualified ಆಗಿದ್ದವರೇ ಎಲ್ಲರೂ ಇದ್ದಾರೆ. Qualified ಆಗದೇ ಇದ್ದವರು ಯಾರೂ ಇಲ್ಲ. ಆದುದರಿಂದ ಎಲ್ಲ ಅಧಿಕಾರಿಗಳೂ ಅವರಿಗೆ ಸಂಬಂಧಪಟ್ಟ ವಿಷಯದಲ್ಲಿ ಅಥವಾ ಕೆಲಸದಲ್ಲಿ ತಜ್ಞರಾಗಿದ್ದಾರೆ. ಒಂದು ವೇಳೆ ಅವರಲ್ಲಿ ಉದಾಸೀನ ಭಾವನೆಯು ಇರಬಹುದು. ಕೆಲವು ಸಂದರ್ಭಗಳಲ್ಲಿ ಕೆಲಸವನ್ನು ನಿಧಾನವಾಗಿ ಮಾಡಿರಬಹುದು. ನಿಧಾನ ಮಾಡುವುದಕ್ಕೆ ಏನಾದರೂ ಆಶೆಯನ್ನು ಇಟ್ಟುಕೊಂಡಿರಬಹುದು. ಹಿಂದಕ್ಕೆ ಆ ರೀತಿಯಾಗಿ ನಡೆದಿರಬಹುದು. ಅಧಿಕಾರಿಗಳಿಗೆ ಸರಕಾರದವರು ಸಂಬಳ ಕೊಡುತ್ತಾರೆ. ಅವರ ಆರೋಗ್ಯದ ರಕ್ಷಣೆಯ ಬಗ್ಗೆ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ವಿಶೇಷ ಸವಲತ್ತುಗಳನ್ನು ಕೊಡಲಾಗಿದೆ. ಸಂಬಳ ಕೊಡುವುದಲ್ಲದೆ ಅವರು ರಿಟೈರು ಆದಮೇಲೆ ಸುಖದಿಂದ ಜೀವನ ಸಾಗಿಸಬೇಕೆಂದು ಪೆನ್ಷನ್ ಸಹ ಕೊಡಲಾಗುವುದು. ಇಷ್ಟೆಲ್ಲ ವ್ಯವಸ್ಥೆಯನ್ನು ಅಧಿಕಾರಿ ವರ್ಗದವರ ಸಲುವಾಗಿ ಮಾಡಿರುವುದರಿಂದ ನಾಲ್ಕು ಕಾಸು ದೊರಕಿಸಿಕೊಳ್ಳಬೇಕೆಂಬ ಆಶೆಯನ್ನುಬಿಟ್ಟುಬಿಡುವಂತೆ ಮಾಡಿದೆ. ಅಧಿಕಾರಿಗಳ ದಕ್ಷತೆಯೇನೂ ಕಡಿಮೆಯಾಗಿಲ್ಲ. ಹಾಗೂ ಕೆಟ್ಟ ಹೆಸರು ಬರುವುದಕ್ಕೆ ಅಧಿಕಾರಿಗಳೂ ಸಹ ಅವಕಾಶ ಕೊಡಲಾರರು ಎಂದು ನಾವು ನಿರೀಕ್ಷಿಸುತ್ತಿದ್ದೇವೆ. ಇನ್ನು ಮುಂದೆ ಎಂಜಿನಿಯರರು ಉದ್ದೇಶ ಪೂರ್ವಕವಾಗಿ ಅಂದಾಜುಗಳನ್ನುತಪ್ಪಾಗಿ ಮಾಡಿದರೆ ಕಾಲಹರಣ ಮಾಡಿದರೆ, ಶಿಕ್ಷಿಸಲಾಗುವುದು. ಅನೇಕ ಅಧಿಕಾರಿಗಳು ನಮ್ಮಷ್ಟೇ ದೇಶಭಕ್ತರಾಗಿದ್ದಾರೆ. ನಿಸ್ಪೃಹರಾಗಿಯೂ ಇದ್ದಾರೆ. ಎಲ್ಲೋ ಕೆಲವರು ಕೆಟ್ಟವರು ಇರಬಹುದು. ಆದುದರಿಂದ ಅಸಮರ್ಥತೆ ಎಲ್ಲರಲ್ಲಿಯೂ ಇದೆ ಎಂದು ಹೇಳುವುದು ಕೇವಲ ಉತ್ಪ್ರೇಕ್ಷೆಯಾಗುತ್ತದೆ. ಈಚಿನ ಕೆಲವು ತಿಂಗಳಲ್ಲಿ ಕೆರೆ ರಿಪೇರಿ ಬಗ್ಗೆ ತುಂಬ ಕೆಲಸ ನಡೆದಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತರುತ್ತೇನೆ. ಹೋದವರ್ಷ ಮೇ ತಿಂಗಳಲ್ಲಿ ಕೋಲಾರ ಜಿಲ್ಲೆಯಲ್ಲಿ 108-109 ಕೆರೆಗಳು ಒಡೆದು ಹೋಗಿದ್ದವುಗಳನ್ನು ರಿಪೇರಿ ಮಾಡಲಾಗಿದೆ. ತುಮಕೂರು ಜಿಲ್ಲೆಯಲ್ಲಿ ಚಾಮರಾಜನಗರ ತಾಲ್ಲೂಕಿನಲ್ಲಿ ಅನೇಕ ಕೆರೆಗಳನ್ನು ಲಕ್ಷಾಂತರ ರೂಪಾಯಿ ಖರ್ಚುಮಾಡಿ ರಿಪೇರಿ ಮಾಡಿಸಲಾಗಿದೆ. ಕುಣಿಗಲಿನಲ್ಲಿಯ ಕೆಲಸವನ್ನು ಮುಗಿಸಲಾಗಿದೆ. ನೀರು ಸರಬರಾಯಿ, ಮನೆ ಕಟ್ಟಿಸು

ವುದು, ರಸ್ತೆ, ಕಾಂಕ್ರೀಟ್ ರೋಡ್, ಚರಂಡಿ ಮುಂತಾದ ಅನೇಕ ಕೆಲಸಗಳನ್ನು ಮಾಡಿಸಬೇಕೆಂದು ಸಲಹೆ ಕೊಟ್ಟಿದ್ದಾರೆ. ಅವರ ಸಲಹೆ ಮೇರೆಗೆ ಎಲ್ಲ ಕೆಲಸ ಕಾರ್ಯಗಳನ್ನು ಮಾಡಿಸಬೇಕೆಂಬ ಮನಸ್ಸು ನಮಗೆ ಇದೆ. ಎಲ್ಲ ಅಧಿಕಾರಿಗಳಲ್ಲಿಯೂ inefficiency ಇದೆ ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ಒಂದು ವೇಳೆ ಹಾಗೆ ಏನಾದರೂ ಕಂಡುಬಂದರೆ ಅದನ್ನು ತಾವು ನಮ್ಮ ಗಮನಕ್ಕೆ ತರಬೇಕು. ಅದರ ಮೇಲೆ ಅಗತ್ಯವಿದ್ದ ಕ್ರಮವನ್ನು ತೆಗೆದುಕೊಂಡು ಕೆಲಸವನ್ನು ತೀವ್ರವಾಗಿ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆಂದು ತಮಗೆ ನಾನು ಈ ಮೂಲಕ ಭರವಸೆ ಹೇಳಬಲ್ಲೆ.

ಇನ್ನು ಅನೇಕ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅವರು ಹೇಳಿದ ಹಾಗೆ ಆಯಾ ಸ್ಥಳಗಳಲ್ಲಿ ಸೇತುವೆ, ಕೆರೆ, ಕಾಲುವೆ ಮುಂತಾದವುಗಳನ್ನು ಏನೇನು ಮಾಡಬೇಕಾಗಿದೆಯೋ ಅವೆಲ್ಲವನ್ನೂ ಗುರುತು ಹಾಕಿಕೊಂಡಿದ್ದೇನೆ. ಎಲ್ಲವನ್ನೂ ವಿಮರ್ಶೆ ಮಾಡಿ ಕಾರ್ಯ ಕೈಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಲ್ಲ ಅಸೆಂಬ್ಲಿಯಲ್ಲಿ ಭಾಷಣಮಾಡಿ ಅರಿಕೆ ಮಾಡಿಕೊಂಡರೆ ಮಾತ್ರ ಸರಕಾರದ ಗಮನಕ್ಕೆ ಬರುತ್ತದೆ ಎಂದು ಸದಸ್ಯರು ತಿಳಿದುಕೊಳ್ಳಬಾರದು. ಯಾರು ಯಾರಿಗೆ ಏನೇನು ಸಲಹೆ ಸೂಚನೆಗಳನ್ನು ತಿಳಿಸಬೇಕಾಗಿದೆಯೋ ಆ ಬಗ್ಗೆ ಕಾಗದ ಬರೆದು ನಮಗೆ ತಿಳಿಸಬೇಕು. ಭೇಟಿಮಾಡಿ ನಮ್ಮ ಗಮನಕ್ಕೆ ತರಬೇಕು. ಬರೆದು ತಿಳಿಸಿದರೂ ಸಹ ಕೆಲಸಮಾಡಲು ಸಾಧ್ಯವಾಗುವುದು. ಕೇವಲ ಅಸೆಂಬ್ಲಿಯಲ್ಲಿ ಭಾಷಣ ಮಾಡಿ ತಿಳಿಸಿದರೆ ನಾವು ಗಮನ ಕೊಡುತ್ತೇವೆಂದು ಇಟ್ಟುಕೊಳ್ಳಬಾರದು.

ಇನ್ನು ಕೆಲವು ಸದಸ್ಯರು ಇನ್ನಿತರ ಸಣ್ಣಪುಟ್ಟ ವಿಚಾರಗಳನ್ನು ತಿಳಿಸಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಮುಕ್ಕಣ್ಣಪ್ಪನವರು ಮೈಲಿ ಕಲ್ಲಿಗೆ ಹಳದಿ ಬಣ್ಣ ಬಳೆದಿರುವ ಬಗ್ಗೆ ಟೀಕೆಮಾಡಿದರು. ಮುಂದಿನ ವರ್ಷದಿಂದ ಮೆಟ್ರಿಕ್ ಪದ್ಧತಿಯು ಜಾರಿಗೆ ಬರುವುದು ಇದೆ. ಆಗ ಎಲ್ಲ ಮೈಲಿಕಲ್ಲುಗಳನ್ನೂ ಬದಲಾಯಿಸಬೇಕಾಗುತ್ತದೆ. ಆಗ ಇದನ್ನು ನೋಡೋಣ. ಇನ್ನಿತರ ವಿಚಾರಗಳ ಬಗ್ಗೆ ಉತ್ತರ ಕೊಡುವುದು ಅಗತ್ಯವಾಗಿದೆ ಎಂದು ಕಾಣುವುದಿಲ್ಲ. ಅವರ ಎಲ್ಲ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು ಸಾಧ್ಯವಾದ ಮಟ್ಟಿಗೂ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇನೆ ಎಂದು ಇಷ್ಟುಮಾತ್ರ ಹೇಳಬಲ್ಲೆ.

ಮಾನ್ಯ ಸದಸ್ಯರಾದ ಶ್ರೀ ಪುಟ್ಟರಾಮಯ್ಯನವರು ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಸಿವಿಲ್ ವರ್ಕ್ಸ್ ಸೆಕ್ಷನ್ ಇರುವ ಬಗ್ಗೆ ಮತ್ತು ಅಲ್ಲಿ ನಡೆಯತಕ್ಕ ಕೆಲಸದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈಗ ನಾನು ಉತ್ತರಕೊಡುವಾಗ ಅವರು ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಕೆಲಸಗಳಿಗೆ ಹಣ ಒದಗಿಸುವ ವಿಚಾರದಲ್ಲಿ ಆಡಿಟ್‌ಮಾಡಿ ಹಣ ಕೊಡುವ ಏರ್ಪಾಡು ಇದೆ. ಪ್ರಿ ಆಡಿಟ್ ಆಗಬೇಕಾಗಿರುವುದರಿಂದ ಹಣ ಕೊಡಲು ನಿಧಾನವಾಗುತ್ತದೆ. ಒಂದು ಕೆಲಸಕ್ಕೆ ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ 100 ರೂಪಾಯಿ ಖರ್ಚಾಗುತ್ತಿದ್ದರೆ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ಸಿವಿಲ್ ಸೆಕ್ಷನ್ನಿನವರು 110-115 ರೂಪಾಯಿ ಖರ್ಚು ಮಾಡಿದರೂ ಕೆಲಸವು ತಕ್ಷಣವಾಗುತ್ತದೆ. ಸ್ವಲ್ಪ ಖರ್ಚು ಹೆಚ್ಚುಬಂದರೂ ಚಿಂತೆಯಿಲ್ಲ. ಕೆಲಸವು ತೀವ್ರವಾಗಿ ಮಾಡಲ್ಪಡುತ್ತದೆ. ಆದಕಾರಣ ಹಣ ವೆಚ್ಚ ಆಗುವುದು ಒಂದೇ ವಿಚಾರವಲ್ಲ. ಕೆಲಸವು ತಕ್ಷಣ ಆಗಬೇಕಾಗುತ್ತದೆ.

ಪ್ರತಿಯೊಬ್ಬ ಸದಸ್ಯರು ಹೇಳಿದ ಆಯಾಯ ಪ್ರದೇಶಗಳಲ್ಲಿ ಮಾಡಬೇಕಾದ ರಸ್ತೆ, ಕೆರೆ ಮುಂತಾದ ಎಲ್ಲ ಸೂಚನೆಗಳ ಬಗ್ಗೆ ಗುರುತು ಹಾಕಿಕೊಂಡಿದ್ದೇನೆ. ಕೆಲವು ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ. ಅವೆಲ್ಲವುಗಳನ್ನು ಸಹಾನುಭೂತಿಯಿಂದ ವಿಮರ್ಶೆಮಾಡಿ ಕಾರ್ಯರೂಪದಲ್ಲಿ ತರಲು ಪ್ರಯತ್ನ ಮಾಡುತ್ತೇವೆ. ಕೆಲವು ಸದಸ್ಯರು ಒಳ್ಳೆಯ constructive criticism ಮಾಡಿದ್ದನ್ನು ನಾನು ಅವಶ್ಯವಾಗಿ ಪರ್ಯಾಲೋಚನೆ ಮಾಡುತ್ತೇನೆ. ಕೇವಲ ನಿಷ್ಠುರವಾಗಿ ಮಾತನಾಡಿ ಆಕ್ಷೇಪಣೆ ಮಾಡಿದ್ದಾರೆ ಎಂಬ ದೃಷ್ಟಿಯಿಂದ ನಾನು ಭಾವಿಸುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಸುಂಠಣಕರರು ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಅವರು ಹೇಳಿದಹಾಗೆ ಅಗತ್ಯವಿದ್ದುದು ಎಲ್ಲವನ್ನೂ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ. ಇನ್ನೊಬ್ಬ ಸದಸ್ಯರು ತುಂಗಭದ್ರಾ ಪ್ರೋಜೆಕ್ಟಿಗೆ ರಸ್ತೆ ಆಗಿಲ್ಲವೆಂದು ಹೇಳಿದರು ಆದರೆ ಅಲ್ಲಿ ರಸ್ತೆ ಇದೆ. ಅದಕ್ಕೋಸ್ಕರ ಐದಾರು ಲಕ್ಷ ರೂಪಾಯಿಗಳ ಅಂದಾಜಾಗಿದೆ. ನೇ 1960 ವರ್ಷದಲ್ಲಿ ಕೆಲಸ ಪೂರ್ತಿಯಾಗುತ್ತದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 230 ಲಕ್ಷ ರೂಪಾಯಿಗಳನ್ನು ರಸ್ತೆಗಳಿಗಾಗಿ ಖರ್ಚುಮಾಡಬೇಕೆಂದಿದ್ದೇವೆ. ಇದಕ್ಕಾಗಿ ಸಿಬ್ಬಂದಿ ಮಂಜೂರು ಆಗುವುದರಲ್ಲಿದೆ. ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಅವನ್ನು ಗಮನದಲ್ಲಿಟ್ಟುಕೊಂಡು ಯಾವೊಂದು ಆಕ್ಷೇಪಣೆಗೂ ಅವಕಾಶವಿಲ್ಲದ ರೀತಿಯಲ್ಲಿ ಸರ್ಕಾರದವರು ಕೆಲಸ ಮಾಡುತ್ತಿದ್ದಾರೆಂದು ನಾನು ಭರವಸೆಯನ್ನು ಕೊಡುತ್ತೇನೆ. ಆದ್ದರಿಂದ ಈ ಬೇಡಿಕೆಗೆ ತಾವೆಲ್ಲರೂ ಮಂಜೂರಾತಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಆರ್. ಚೆನ್ನಿಗರಾಮಯ್ಯ.—ಡಿಸ್ಟ್ರಿಕ್ಟು ಬೋರ್ಡುಗಳ ವಿಚಾರದಲ್ಲಿ ಹೆಚ್ಚಿಗೆ ಏನೂ ಟೀಕೆಗಳು ಬರಲಿಲ್ಲ. ಆದರೆ ಕೆಲವು ರಸ್ತೆಗಳು ಆಗಲಿಲ್ಲ; ಬಜೆಟ್ಟಿನಲ್ಲಿ ಹಣ ಬಹಳ ಕಡಿಮೆಯಾಗಿ ಒದಗಿಸಿದ್ದಾರೆಂದು ಹೇಳಿದ್ದಾರೆ. ಅದು ಒಪ್ಪತಕ್ಕ ವಿಚಾರವಾಗಿದೆ. ಶ್ರೀ ಪುಟ್ಟರಾಮಯ್ಯನವರು ಇಲ್ಲಿ ಇಲ್ಲ. ತಮ್ಮ ಕ್ಷೇತ್ರದ ವಿಚಾರದಲ್ಲಿ ಸರ್ಕಾರದವರು ಏನೂ ಉಪಕಾರ ಮಾಡಲಿಲ್ಲ ಎಂಬುದಾಗಿ ಅನೇಕ ಟೀಕೆಗಳನ್ನು ಮಾಡಿದರು. ಆದರೆ ನಾನು ಈಗ ಉತ್ತರ ಹೇಳುವಾಗ ಅವರು ಇಲ್ಲಿ ಇಲ್ಲದೆ ಎಲ್ಲಿಯೋ ಹೊರಟು ಹೋಗಿದ್ದಾರೆ. ಅವರು ಡಿಸ್ಟ್ರಿಕ್ಟ್ ಬೋರ್ಡು ರೋಡುಗಳ ವಿಷಯವಾಗಿ ಮಾತನಾಡಿದರು. ಚನ್ನಪಟ್ಟಣ, ಬೈರಾಪಟ್ಟಣ, ನಿಡಸಾಲೆ ರಸ್ತೆಗಳ ವಿಚಾರವಾಗಿ ಹೇಳಿದರು. ಕೇಂದ್ರ ಸರ್ಕಾರದ ಗ್ರಾಂಟು ಅರ್ಧಭಾಗ ಎಂದರೆ 5,000 ರೂಪಾಯಿಗಳು. ಸಂಸ್ಥಾನದ ಸರ್ಕಾರದವರು 2,500 ರೂಪಾಯಿಗಳ ಗ್ರಾಂಟು, ಡಿಸ್ಟ್ರಿಕ್ಟ್ ಬೋರ್ಡ್ ಗ್ರಾಂಟು 1,250 ರೂಪಾಯಿಗಳು ಮತ್ತು ಲೋಕಲ್ ಕಂಟ್ರಿಬ್ಯೂಷನ್ 1,250 ರೂಪಾಯಿಗಳು—ಹೀಗೆ ಸಹಾಯಪಡೆದು ಸುಮಾರು ಹತ್ತು ಸಾವಿರ ರೂಪಾಯಿಗಳಲ್ಲಿ ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ ಆಗತಕ್ಕ ಒಂದುರಸ್ತೆ ಅದು. ಇದಕ್ಕೆ ಲೋಕಲ್ ಟ್ಯಾಲೆಂಟನ್ನು ಉಪಯೋಗಿಸಿ ಅವರಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಅಲ್ಲಿಯ ಕೆಲವು ಪಂಚಾಯಿತಿಗಳಿಗೆ ಮಣ್ಣಿನ ಕೆಲಸವನ್ನು ವಹಿಸಲಾಗಿದೆ. ಎರಡು ಕಲ್ವರ್ಟ್ ಇನ್ನೂ ಕಟ್ಟಿಲ್ಲ. ಅವನ್ನು ಕಟ್ಟಬೇಕು. ಆದ್ದರಿಂದ ಹಣ ದುರುಪಯೋಗ ಮಾಡಿದ್ದಾರೆಂದು ಹೇಳುವ ಟೀಕೆಗೆ ಅವಕಾಶವೇ ಇಲ್ಲ. ಹಣವು ಸದುಪಯೋಗವಾಗಿದೆ.

Sri V. P. DEENADAYALU NAIDU.—Only one point, I want to bring to the notice of the Public Works Minister. Nothing has been provided for Thippagondanahalli works for the final stage and its completion. Some work is going on as an interim relief. For the final and fourth stage, nothing has been referred to in the Budget.

Sri H. K. VEERANNA GOWDH.—The final stage is under sanction of Government. ಈಗ ಹಣ ಮಂಜೂರು ಆದರೂ ಸಹ ಪೈಪುಗಳನ್ನು ತರಿಸುವುದಕ್ಕೆ ಬಹಳ ಕಷ್ಟ. ಇನ್ನೂ ಎರಡು ಮೂರು ವರ್ಷಗಳು ಬೇಕಾಗುತ್ತವೆ. ಆ ಪೈಪುಗಳು ಪರದೇಶದಿಂದ ಬರಬೇಕು. ಆದ್ದರಿಂದ ನೀರು ಸರಬರಾಜು ನಿಧಾನವಾಗಿದೆ.

Sri V. P. DEENADAYALU NADIU.—With regard to Bangalore roads, Sir, I feel there is some little discrimination. In Mysore, Government has undertaken cement-concreting of several roads. That is not done here in Bangalore. Another thing is that Government is neither giving adequate compensation by way of vehicular tax nor am I able to see any provision in the Financial Code where the Government can give grant. Till now there is no road-fund created for old Mysore. Under these circumstances, what does the Government think of giving to the Corporation to improve the roads in the Corporation area ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲಿನಿಂದಲೂ ಬೆಂಗಳೂರು ಕಾರ್ಪೊರೇಷನ್ನಿನವರಿಗೆ ಸಂಬಂಧ ಪಟ್ಟಂತಹ ರಸ್ತೆಗಳಲ್ಲಿ ವಾಹನಗಳು ಓಡಾಡುತ್ತಿವೆ. ಈಗ ಬೆಂಗಳೂರಿನಿಂದ ಮೈಸೂರು ಸಿಟಿ ಮತ್ತು ನಂಜನಗೂಡಿಗೆ ರಸ್ತೆಗಳಿವೆ. ಸರ್ಕಾರದವರು ರೋಡ್ ಸೆಸ್ಸನ್ನು ವಸೂಲುಮಾಡುತ್ತಿದ್ದಾರೆ. ಅದರಲ್ಲಿ ಸ್ವಲ್ಪಭಾಗ ಕಾರ್ಪೊರೇಷನ್ನಿಗೆ ಸೇರಬೇಕಾದುದು ನ್ಯಾಯವೆಂದು ಕೇಳುತ್ತಿದ್ದಾರೆ. ಅದು ಬೇರೆ ಪ್ರಶ್ನೆ. ನಿರ್ದಿಷ್ಟವಾದ ಒಂದು ಮೊಬಲಗನ್ನು ಅವರಿಗೆ ಒದಗಿಸುತ್ತಿದ್ದೇವೆ. ಬಹುಶಃ 1937ನೆಯ ಇಸವಿಯಿಂದಲೂ ಎಂದರೆ ಈಗ್ಗೆ 20 ವರ್ಷಗಳಿಂದಲೂ ವಾಹನಗಳ ಸಂಚಾರ ಜಾಸ್ತಿಯಾಗಿದೆ. ರಸ್ತೆಗಳು ಜಾಸ್ತಿಯಾಗಿವೆ. ಬಹುಶಃ ಕಾರ್ಪೊರೇಷನ್ ಸದಸ್ಯರು ಬಂದು ಸರ್ಕಾರದಲ್ಲಿ ಅವರ ಕ್ಲೈಮಿಗೆ ಸರಿಯಾದ ವಾದ ಹೂಡಿ ಸರ್ಕಾರದವರನ್ನು ಒಪ್ಪಿಸಿ ಹಣವನ್ನು ಪಡೆಯುವುದರಲ್ಲಿ ಅನುಕೂಲವಿರುತ್ತದೆ; ಎಂದು ಹೇಳಬಹುದು. ಆಗ ಸರ್ಕಾರದವರು ಅವರು ಕೇಳುವುದು ಅನ್ ರೀಜನಬಲ್ ರಿಕ್ವೆಸ್ಟ್ ಎಂದು ತಳ್ಳಿಹಾಕಲಾರರು ಎಂದು ನನಗೆ ನಂಬಿಕೆಯಿದೆ.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಮಾನ್ಯ ಮಂತ್ರಿಗಳು ಈ ಸಂಬಂಧದಲ್ಲಿ ಉತ್ತರ ಕೊಡುವಾಗ ಲಂಚವನ್ನು ತಪ್ಪಿಸುವುದಕ್ಕೆ ಕೆಲವು ಮಾತುಗಳನ್ನು ಹೇಳಿದರು. ಲಂಚ ತೆಗೆದುಕೊಳ್ಳು ತೆಗೆದುಕೊಳ್ಳುವುದು ಗೊತ್ತಾದಕೂಡಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ಯಾವ ಅನುಮಾನವೂ ಇಲ್ಲ.ಗೊತ್ತಾದರೆ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ ಅದು ಗೊತ್ತಾಗುವುದು ಹೇಗೆ ? ಒಂದು ವೇಳೆ ಲಂಚ ತೆಗೆದುಕೊಂಡಿದ್ದಾನೆ ಎಂದರೆ ಅದನ್ನು ಕಂಡುಹಿಡಿಯುವುದು ಹೇಗೆ ? ಇವೆಲ್ಲವನ್ನೂ ಮಾನ್ಯ ಮಂತ್ರಿಗಳು ಗಮನಿಸಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಲಂಚ ತೆಗೆದುಕೊಂಡಿದ್ದಾರೆ ಎಂದು ಗೊತ್ತಾದರೆ ಕ್ರಮ ತೆಗೆದುಕೊಳ್ಳುವುದೇನೋ ನಿಜ. ಒಂದು ವೇಳೆ ಗೊತ್ತಾಗದೆ ಇದ್ದರೆ, ಅದನ್ನು ಯಾವರೀತಿ ಕಂಡುಹಿಡಿಯಬೇಕು ಎನ್ನುವ ವ್ಯವಸ್ಥೆ ಸರ್ಕಾರದಲ್ಲಿ ಈಗಾಗಲೇ ಸಾಗುತ್ತಿದೆ.

ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ).—ಈಗ ಏನಾಗಿದೆ ಎಂದರೆ ನೀವು ಲಂಚ ತೆಗೆದುಕೊಂಡವರನ್ನು ಮಾತ್ರ ಶಿಕ್ಷೆ ಮಾಡುತ್ತೀರಿ. ಹಿಂದೆ ಲಂಚ ತೆಗೆದುಕೊಂಡವರಿಗೂ ಮತ್ತು ಲಂಚ ಕೊಟ್ಟವರಿಗೂ ಒಂದು ತರಹ ಶಿಕ್ಷೆ ಇತ್ತು. ಈಗ ಇವರಿಬ್ಬರೂ ಒಂದಾಗಿದ್ದಾರೆ. ಲಂಚ ಕೊಟ್ಟವರನ್ನು ಕಂಡುಹಿಡಿಯುವುದು ಬಹಳ ಕಷ್ಟ. ಹಾಗೆ ಒಂದು ವೇಳೆ ಲಂಚ ಕೊಟ್ಟವರು ಯಾರು ಎಂದು ಹೇಳಿದರೆ, ಮತ್ತೆ ಅವರು ನಮ್ಮ ಹತ್ತಿರವೇ ಬರುವುದಿಲ್ಲ. ಇದಕ್ಕೆ ಸರ್ಕಾರದವರು ಏನು ಮಾಡುತ್ತಾರೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮೊದಲು 12 ವರ್ಷಗಳ ಹಿಂದೆ ಲಂಚ ತೆಗೆದುಕೊಂಡವರಿಗೂ, ಲಂಚ ಕೊಟ್ಟವರಿಗೂ ಶಿಕ್ಷೆ ಕೊಡುವ ಕಾನೂನು ಇತ್ತೆಂದು ನನಗೆ ಜ್ಞಾಪಕ. ಈಗ ಲಂಚ ಕೊಡುವವರಿಗೆ ಶಿಕ್ಷೆ ವಿಧಿಸುವುದನ್ನು ಸಡಿಲ ಮಾಡಲಾಗಿದೆ. ಲಂಚ ಕೊಟ್ಟವನು ನಾನು ಹಣವನ್ನು ಕೊಟ್ಟೆ ಎಂದು ಏಕೆ ಒಂದು ಎವಿಡೆನ್ಸ್ ಕೊಡುತ್ತಾನೆ ? ಅವನ ಮೇಲೆ ಚಾಡಿ ಹೇಳುವುದಕ್ಕೆ ಬರುವುದಿಲ್ಲ—ಇವನ್ನೆಲ್ಲಾ ಪತ್ತೆ ಮಾಡುವುದು ಹೇಗೆ ? ಎಷ್ಟು ಬುದ್ಧಿವಂತಿಕೆಯಿಂದ ಲಂಚ ತೆಗೆದುಕೊಂಡಗೂ, ಒಂದು ದಿನವಾದರೂ ಹೆಚ್ಚು ಕಡಿಮೆ ಆಗಿ ಸಿಕ್ಕಿಹೋಗುತ್ತದೆ. ಆಯಾ ಸಂಬಂಧಪಟ್ಟ ಕ್ಷೇತ್ರಗಳಲ್ಲಿರುವ ಮಾನ್ಯ ಸದಸ್ಯರು ಸಹಾಯ ಮಾಡಿದರೆ, ಇದನ್ನು ಇನ್ನೂ ಚೆನ್ನಾಗಿ ತಡೆಗಟ್ಟಬಹುದು. ಆಂಟಿಕರಪ್ಷನ್ ಇಲಾಖೆಯಲ್ಲಿ ಮೂಕರ್ಜಿಗಳು ಎಷ್ಟೋ ಬರುತ್ತವೆ. ಸಾಮಾನ್ಯವಾಗಿ ಸರ್ಕಾರದಲ್ಲಿ ಮೂಕರ್ಜಿಗಳು ಸ್ಟಾಂಪ್ ಹಚ್ಚದೆಯೇ ಬರುವ ಪ್ರಸಂಗಗಳು ಎಷ್ಟೋ ಇವೆ. ಅಂತಹ ಮೂಕರ್ಜಿಗಳು ಇದ್ದರೂ ಅವುಗಳನ್ನು ವಿಚಾರಣೆ ಮಾಡಿ ಅವು ನಿಜವೆಂದು ಕಂಡುಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಅರ್ಜಿಗಳು ಎಷ್ಟೋ ಬರುತ್ತವೆ. ಸದಸ್ಯರು ಬರೆಯಲಿ, ಬರೆಯದೆ ಇರಲಿ, ಕ್ರಮವನ್ನೇನೋ ಕೈಗೊಳ್ಳುತ್ತಿದ್ದೇವೆ. ಈ ತರಹದಲ್ಲಿ ಪತ್ತೆ ಮಾಡಬೇಕು. ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಹೇಳಿದರೂ, ಅವುಗಳನ್ನೆಲ್ಲಾ ಕೇಂದ್ರೀಕರಿಸಿ, ತಕ್ಕ ಕ್ರಮ ತೆಗೆದುಕೊಳ್ಳಲು ಸಿದ್ಧನಾಗಿದ್ದೇನೆ.

ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ನಾನು ಮಂತ್ರಿಗಳಿಗೆ ನನ್ನ ತಾಲ್ಲೂಕಿನಲ್ಲಿ ಇಂಟರ್ ಕಮ್ಯೂನಿಕೇಷನ್ ರೋಡ್ ಆಗಬೇಕೆಂದು ಒಂದು ಪತ್ರ ಬರೆದೆ. ಐದಾರು ತಿಂಗಳುಗಳ ಹಿಂದೆ ನಮ್ಮ ಪ್ರಾಂತಕ್ಕೆ ಬಂದಾಗ್ಗೆ ಅನೇಕರು ಇದರ ಅವಶ್ಯಕತೆಯನ್ನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡರು. ಇನ್ನೂ ನನಗೆ ಅದರ ವಿಷಯವೇನಾಯಿತು ಎಂಬುದು ತಿಳಿಯಲಿಲ್ಲ. ಆದ್ದರಿಂದ ಮಂತ್ರಿಗಳು ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಸರ್ಕಾರದ ಪರವಾಗಿ ಕ್ರಮವನ್ನು ತೆಗೆದುಕೊಳ್ಳಲು ನಾನು ಸದಾ ಸಿದ್ಧ. ಆದರೆ ನಾನು ಅಸಿಸ್ಟೆಂಟ್ ಇಂಜನಿಯರಿಗೆ ನೇರವಾಗಿ ಬರೆಯುವ ಹಾಗಿಲ್ಲ. ಚೀಫ್ ಇಂಜನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜನಿಯರ್ ಇವರುಗಳಿಂದ ರಿಪೋರ್ಟ್ ತರಿಸಬೇಕು. ಯಾವ ಯಾವ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಮಾಡಿದ್ದಾರೋ, ಆ ರೀತಿಯಲ್ಲಿ ಪ್ರತಿಯೊಂದು ಅಂಶದ ಮೇಲೂ ವರದಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ನಿರೀಕ್ಷಣೆ ಮಾಡುತ್ತಿದ್ದೇವೆ. ಆ ವರದಿಗಳು ಬಂದ ತಕ್ಷಣ ತಕ್ಕ ಕ್ರಮವನ್ನು ಕೈಗೊಳ್ಳುತ್ತೇವೆ. ಒಂದು ವೇಳೆ ರಿಪೋರ್ಟ್ ತಕ್ಕ ಕಾಲಕ್ಕೆ ಬರದೇ ಇದ್ದರೆ, ಅದಕ್ಕೋಸ್ಕರ ನಿಧಾನ ಮಾಡದೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ರಾಮಪ್ಪ (ಹರಿಹರ).—ಕೆಲವು ಬಾಬುಗಳನ್ನು ಬಡ್ಜೆಟ್‌ನೊಳಗೆ ನಾಲ್ಕು ವರ್ಷಗಳಿಂದಲೂ ಒಂದೇಸಮನೆ ಸೇರಿಸುತ್ತಿದ್ದೀರಿ. ಅದು ಕಾರ್ಯರೂಪಕ್ಕೆ ಬಂದಿವೆಯೋ ಏನೋ ತಿಳಿಯುವುದಿಲ್ಲ. ಸುಮ್ಮನೆ ಕಾರ್ಯರೂಪಕ್ಕೆ ಬರುತ್ತಿದೆ ಎಂದು ಪ್ರತಿವರ್ಷವೂ ಹೇಳುತ್ತಾರೆ. ಆದರೆ ಅವು ಕಾರ್ಯರೂಪಕ್ಕೆ ಬರುವುದಿಲ್ಲ. ಸಂಬಂಧಪಟ್ಟ ಇಲಾಖೆಯವರು ಕೆಲವು ಐಟಂಗಳು ಇನ್ನೂ ಮಂಜೂರು ಆಗಲಿಲ್ಲ ಎಂದು ಹೇಳುತ್ತಾರೆ. ಹಾಗೆಂದ ಮಾತ್ರಕ್ಕೆ ಬಡ್ಜೆಟ್ಟಿಗೆ ಆ ಬಾಬುಗಳು ಹೇಗೆ ಬರುತ್ತವೆ ಎಂಬುದನ್ನು ಹೇಳಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಹೊಸಬರಿಗೆ ಈ ಮಾರ್ಗ ಗೊತ್ತಿಲ್ಲ. ಅವರು ಅಂತಹ ಐಟಂಗಳು ಯಾವುವೆಂಬುದನ್ನು ಹೇಳಿದರೆ ಅವನ್ನು ನಿರ್ದಿಷ್ಟವಾಗಿ ಹೇಳುತ್ತೇನೆ.

2 P.M.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಸ್ವಾಮಿ, ಈಗ ಮೆಂಬರುಗಳೆಲ್ಲ ಮಾತನಾಡಿದ್ದಾಯಿತು. ಮೂರು ಜನ ಮಂತ್ರಿಗಳೂ ಎರಡನೆಯಸಾರಿ ಉತ್ತರ ಕೊಟ್ಟಿದ್ದಾರೆ. ಈಗ ಎರಡು ಘಂಟೆಯಾಯಿತು ಇನ್ನೂ ಯಾರಿಗೂ ಊಟವಿಲ್ಲ. ಮಂತ್ರಿಗಳು ಉತ್ತರ ಕೊಟ್ಟಮೇಲೆ ಸದಸ್ಯರ್‍ಯಾರಿಗೂ ಮಾತನಾಡಲು ಅವಕಾಶ ಕೊಡದೆ ಮೀಟಿಂಗ್ ಮುಗಿಸಬೇಕೆಂದು ನಾನು ಅತಿ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು.—ಆಗಲಿ, ತಾವು ಹೇಳಿದ ಪ್ರಕಾರ ಮೀಟಿಂಗನ್ನು ಮುಗಿಸುತ್ತೇನೆ.

Sri M. C. NARASIMHAN.—On a point of order, Sir. The Educational Minister has not replied to discussion regarding Demand No. 82. I want him to reply Sir.

Mr. SPEAKER.—If he has not said anything, the Chair cannot compel him to speak. If he has not said anything, you can take it that he is not prepared to say anything.

The question is:

"That the respective sums not exceeding the amounts shown in the List of Demands circulated to the members be granted to Government to defray the charges which will come in course of payment during the period ending 31st March 1958 in respect of Demands Nos. 29, 50, 51, 53, 54, 42, 46, 47, 10 and 40.

The motion was adopted.

Mr. SPEAKER.—The demands are granted.

(As directed by the Speaker, the motions for Demands for Grants which were adopted by the House, are reproduced below).

DEMAND No. 29—Civil Works.

50—*Civil Works.*

"That a sum not exceeding Rs 8,46,62,600 be granted to the Government to defray the charges which will come in course of payment during the year ending 31 st day of March 1958, in respect of 'Civil Works'."

DEMAND No. 50—Appropriation to Irrigation and Power Development Fund.

80-B.—*Appropriation to Irrigation and Power Development Fund.*

"That a sum not exceeding Rs. 40,00,000 be granted to the Government to defray the charges that will come in course of payment during the year ending 31st day of March 1958, in respect of 'Appropriation to Irrigation and Power Development Fund.'"

DEMAND No. 51—Capital Outlay on Civil Works.

81.—*Capital Account of Civil Works Outside the Revenue Account.*

"That a sum not exceeding Rs. 3,32,80,300 be granted to the Government to defray the charges which will come in course of payment during the year ending 31st day of March 1958, in respect of 'Capital Account of Civil Works outside the Revenue Account."

DEMAND No. 53—Capital Account of Other State Works Outside the Revenue Account.

82.—*Capital Account of Other State Works Outside the Revenue Account.*

"That a sum not exceeding Rs. 52,08,000 be granted to the Government to defray the charges which will come in course of payment during the year ending 31st day of March 1958, in respect of 'Capital Account of other State Works Outside the Revenue Account'."

DEMAND No. 54.—Miscellaneous Capital Account.

82-*B*.—*Capital Outlay on Road Transport Schemes.*

"That a sum not exceeding Rs. 59,85,000 be granted to the Government to defray the charges which will come in course of payment during the year ending 31st day of March 1958, in respect sf 'Capital Outlay on Road Transport Schemes'."

DEMAND No. 42—Working Expenses-Irrigation Works—Commercial.

XVII I.N.E. & D. Works (Commercial) Working Expenses.

"That a sum not exceeding Rs. 62,34,000 be granted to the Government to defray the charges which will come in course of payment during the year ending 31st day of March 1958, in respect of I.N.E. & D. Works (Commercial)-Working Expenses'."

DEMAND No. 46.—Irrigation (Commercial).

68.—*Construction of Irrigation, Navigation, Embankment and Drainage Works (Commercial)*

"That a sum not exceeding Rs. 7,69,05,700 be granted to the Government to defray the charges which will come in course of payment during the year ending 31st day of March 1958, in respect of 'Construction of Irrigation, Navigation, Embankment and Drainage Works (Commercial)'."

DEMAND No. 47—Irrigation (Non-Commercial)

68-*A*.—*Construction of I.N.E. and D Works (Non-Commercial).*

"That a sum not exceeding Rs. 90,24,000 be granted to the Government to defray the charges which will come in course of payment during the year ending 31st day of March 1958, in respect of 'Construction of I.N.E. and D. Works—Non-Commercial'."

DEMAND No. 10—Irrigation.

18.—*Other Revenue Expenditure, Financed from Ordinary Revenues.*

"That a sum not exceeding Rs. 71,13,000 be granted to the Government to defray the charges which will come in course of payment during the year ending 31st day of March 1958, in respect of 'Other Revenue Expenditure Financed from Ordinary Revenues"

DEMAND No. 40—Community Development.

63-*B*.—*Community Development Projects, National Extension Service and Local Development Works.*

"That a sum not exceeding Rs. 1,89,81,000 be granted to the Government to defray the charges which will come in course of payment during the year ending 31st day of March 1958, in respect of 'Community Development Projects, National Extension Service and Local Development Works'."

MR. SPEAKER.—The House will now adjourn and will meet tomorrow at 8-30 A.M.

The House adjourned at Ten Minutes past Two of the Clock to meet again at Thirty Minutes past Eight of the Clock on Sunday, the 28th July 1957.

WD 3916—GPB—900—6-1-58.